ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೧ ಫೆಬ್ರವರಿ - ೨೦೧೧ ಸಂಚಿಕೆ - ೭



ಹಿಂಸಾಸ್ಥಾನವಾಗುತ್ತಿರುವ ಹಿಂದುಸ್ತಾನ!

ಜನಪದ ವಿಚಾರದಲ್ಲಿ

ಫೆಬ್ರವರಿ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಫೆಬ್ರವರಿ – ೨೦೧೧
ಸಂಪುಟ – ೧೧
ಸಂಚಿಕೆ – ೭

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಹೊಸ ಹಾಡು

ಗಳಿಗೆ ಗಳಿಗೆಗೂ ಹೊಸ ಹೊಸ ರೀತಿಗೆ
ಈ ಜಗವೋಡುತಿದೆ –
ಹಳತ ನೋಡಿ ತಾ ಕಿಲ ಕಿಲ ನಗುತಲಿ
ಈ ಜಗವೋಡುತಿದೆ.

ದಿನದಿನ ಯುಗಯುಗ ಮನುಮನ್ವಂತರ
ಮಾಡಿದುದನೆ ತಾ ಮಾಡುತ್ತ,
ಒಂದೆ ಹಾಡು ಓ ಒಂದೆ ಸೋಬಾನೆ
ಹಾಡಿದುದನೆ ತಾ ಹಾಡುತ್ತ,
ಕಣ್ಣ ಕಪಾಟಿನ ರಥಾಶ್ವದಂದದಲಿ
ಒಂದೇ ಹಾದಿಯ ಹಂಬಲವಾಗಿ
ನಡೆದೀ ಲೋಕವು ಆವ ಶಕ್ತಿಗೋ
ಇಂದು ತಾನು ಬಲು ಬಲು ಮರುಳಾಗಿ,
ಓಡುತಿದೆ ಅಹ ಓಡುತಿದೆ!
ಹಳತ ನೋಡಿ ತಾ ಕಿಲಕಿಲ ನಗುತಲಿ
ಈ ಜಗವೋಡುತಿದೆ.

ಅಜ್ಞಾನಕೆ ವಿಜ್ಞಾನದ ಹೊಸ ಬೆಳಕು,
ನಿಂತ ಮನಕೆ ಹೊಸ ಮತಗಳ ಚುರುಕು,
ಊಹೆಯನೇ ಮುಂಚುವ ಹೊಸ ಸೃಷ್ಟಿ,
ಹೊಸ ಬಾಳಿಗೆ ಹೊಂಚುವ ಹೊಸ ದೃಷ್ಟಿ –
ಕವಿಗಾಯಿತು ನವ ಹರ್ಷಕ್ರಾಂತಿ,
ಕಲೆಗಾಯಿತು ಹೊಸ ಚೆಲುವಿನ ಕಾಂತಿ
ಚಿತ್ರಕ್ಕೆ ಹೊಸ ರಂಗು
ಹಾಡಿಗೂ ಹೊಸ ಗುಂಗು!

ಗಳಿಗೆ ಗಳಿಗೆಗೂ ಹೊಸ ಹೊಸ ರೀತಿಗೆ
ಈ ಜಗವೋಡುತಿದೆ –
ಪ್ರಗತಿಯ ಹಂತಕೊ
ಪ್ರಲಯ ದುರಂತಕೊ
ಹಳತ ನೋಡಿ ತಾ ಕಿಲಕಿಲ ನಗುತಲಿ
ಓ ಜಗವೋಡುತಿದೆ.

– *ಪು.ತಿ.ನ*

ವಿಚಾರ ದೀಪ್ತಿ

ಮರದ ಬಗ್ಗೆ ನಿರ್ದಯನಾಗುವವನು ಮನುಷ್ಯರನ್ನು ಪ್ರೀತಿಸಬಲ್ಲನೆ?

ನಾವು ಕಟ್ಟುತ್ತ ಬಂದ ಸಮಾಜ, ಸಂಸ್ಕೃತಿ, ನಾಗರಿಕತೆಗಳು ಮನುಷ್ಯನಿಗೇ ವಿಶಿಷ್ಟವಾದವುಗಳು. ಅವುಗಳಲ್ಲಿ ನಾವು ಅಭಿಮಾನಪಟ್ಟುಕೊಳ್ಳುವಂಥ ಅನೇಕ ಅಂಶಗಳಿದ್ದರೂ ಕೂಡ ಒಂದು ಮಹತ್ವದ ಸಂಗತಿಯನ್ನು ಮರೆಯುವುದು ಸಾಧ್ಯವಿಲ್ಲ: ನಮ್ಮ ಬದುಕಿನ ರೀತಿಯಿಂದಾಗಿ ನಾವು ನಿಸರ್ಗಕ್ಕೆ ದೂರವಾಗುತ್ತ ನಡೆದಿದ್ದೇವೆ. ನಿಸರ್ಗದಲ್ಲಿಯ ಪ್ರತಿಯೊಂದು ಜೀವಂತ ಸಂಗತಿ ಜೀವಂತವಾದುದರ ಸಹವಾಸದಲ್ಲೇ ಬದುಕುವಂತಹದು – ಗಿಡ, ಮರ, ಬಳ್ಳಿ, ಹುಲ್ಲು, ಹೂವು, ಹಕ್ಕಿ, ಮೃಗ – ಅಷ್ಟೇಕೆ ನೀರು, ಗಾಳಿಗಳು ಕೂಡ. ಒಂದು ಇನ್ನೊಂದರ ಜೀವಂತಿಕೆಯನ್ನೆ ಎತ್ತಿಹಿಡಿಯುವಂತಹವು, ಪ್ರೋತ್ಸಾಹಿಸುವಂತಹವು. ಮನುಷ್ಯ ಮಾತ್ರ ನಿಸರ್ಗದ ಮೇಲೆ 'ವಿಜಯ ಸಾಧಿಸು'ವ ಅಹಂಕಾರದಲ್ಲಿ, ಅದನ್ನು ತನ್ನ ಉಪಭೋಗದ ಸಾಧನ ವಾಗಿಸುವ ಹಠದಲ್ಲಿ (ಅದು ಇದ್ದುದೇ ತನ್ನೊಬ್ಬನ ಉಪಭೋಗಕ್ಕಾಗಿ ಎಂಬ ಮೂಢನಂಬಿಕೆಯಲ್ಲಿ!) ತನ್ನ ಸುತ್ತಲೂ ನಾಗರಿಕತೆಯ ಹೆಸರಿನ ನಿರ್ಜೀವ ಗೋಡೆಗಳನ್ನು ಎಬ್ಬಿಸಿದ್ದಾನೆ: ಅವನು ಕಟ್ಟಿದ ನಗರಗಳು, ಕಾರಖಾನೆಗಳು, ವಸತಿ ಸ್ಥಾನಗಳು – ಇವುಗಳೆಲ್ಲಾ ನಿರ್ಜೀವತೆಯ ಸಂಕೇತಗಳಾಗಿವೆ. ಇಂದಿನ ಮನುಷ್ಯನ ಅನಾರೋಗ್ಯದ ಮೂಲ ಇಲ್ಲಿದೆ. ನಾವು ನಮ್ಮನ್ನು ನೋಡುವ ದೃಷ್ಟಿಯನ್ನು ನಾವು ನಿಸರ್ಗವನ್ನು ನೋಡುವ ದೃಷ್ಟಿಯಿಂದ ಬೇರ್ಪಡಿಸಲಾರೆವು. ಒಂದು ಇನ್ನೊಂದರಿಂದಲೇ ನಿಶ್ಚಿತವಾಗಿದೆ ಹಾಗೂ ಹೀಗೆ ನಿಶ್ಚಿತವಾಗಿರುವ ದೃಷ್ಟಿಗೆ ವಿಜ್ಞಾನದಷ್ಟೇ ಹಳೆಯದಾದ ಇತಿಹಾಸವಿದೆ! ಇಂದಿನ ವಿಜ್ಞಾನ, ವೈಜ್ಞಾನಿಕ ಮಾನವತಾವಾದಗಳ ಚೌಕಟ್ಟು ತುಂಬಾ ಇಕ್ಕಟ್ಟಿನದಾಗಿದೆ. ಮನುಷ್ಯನ ಅಂತಃಕರಣಕ್ಕೆ ಬೆಲೆಯುಳ್ಳದ್ದಾಗಿ ಕಾಣುವ ಹಲವು ಸಂಗತಿಗಳಿಗೆ ಈ ಚೌಕಟ್ಟಿನೊಳಗೆ ಸ್ಥಾನವೇ ಇಲ್ಲವಾಗಿದೆ: ಇಲ್ಲಿ ಮನುಷ್ಯ ಹೃದಯವಿಲ್ಲದ ಯಂತ್ರವಾಗಿ ಕಾಣಿಸಿದ್ದಾನೆ ಎಂಬಂಥ ಅಸ್ಪಷ್ಟ ಕೊರಗು ಈಗಿನ ನನ್ನ ಸಾಹಿತ್ಯ ಸೃಷ್ಟಿಯ ಹಿಂದಿನ ಸುಪ್ತ ಪ್ರೇರಣೆ ಯಾಗಿರುವಂತಿದೆ. ಸಣ್ಣ ರೂಪಕದಿಂದಲೇ ಇದನ್ನು ವಿಷದಪಡಿಸಬಹುದೇನೋ:

ನಾನು ಈಗ 'ಶೋಷಣೆ'ಯನ್ನು ಕುರಿತು ಕತೆಯೊಂದನ್ನು ಬರೆದುದೇ ಅದಲ್ಲಿ ಅದರ ಕೇಂದ್ರ ಕಲ್ಪನೆ ಹೀಗಿರಬಹುದೇನೋ: ಮನೆಯ ಅಂಗಳದಲ್ಲಿ ಹುಲುಸಾಗಿ ಬೆಳೆದ ಮರವೊಂದನ್ನು – ಅದರ ಬಗೆಗೆ ಯಾವ ಒಂದು ಭಾವನೆಯನ್ನೂ ಪ್ರಕಟಿಸದೇ ಅದು ಹುಟ್ಟಿ ಬೆಳೆದದ್ದೇ ತನ್ನ ಉಪಯೋಗಕ್ಕಾಗಿ ಎಂಬಂಥ ಸ್ವಾರ್ಥದ ಮತ್ತಿನಲ್ಲಿ ಕಡಿದುಹಾಕುವ ಮನುಷ್ಯ ತನ್ನ ಅಣ್ಣ ತಮ್ಮಂದಿರನ್ನಾಗಲೀ, ಹೊಟ್ಟೆಯ ಮಕ್ಕಳನ್ನಾಗಲೀ ಪ್ರೀತಿಸುತ್ತಾನೆ ಎನ್ನುವುದು ಸುಳ್ಳು! ಯಾಕೆಂದರೆ ಕಡಿಯುವ ನಿಶ್ಚಯದಲ್ಲೇ ಆತ ಪ್ರೀತಿಸುವ ಸಾಮರ್ಥ್ಯವನ್ನೂ ಕಳೆದುಕೊಳ್ಳುತ್ತಾನೆ!

– *ಯಶವಂತ ಚಿತ್ತಾಲ*

ಹಿಂಸಾಸ್ಥಾನವಾಗುತ್ತಿರುವ ಹಿಂದೂಸ್ತಾನ!

- ಸುರೇಂದ್ರ ಕೌಲಗಿ

ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ
ಸಾವಿಗಿಂತ ಬಾಳು ಮೇಲು ಎಂಬ ಮಾತು ಗೆಲ್ಲಲಿ
ವಿಷದ ಒಡಲಿನಿಂದ ರಸದ ಊಟೆ ಚಿಮ್ಮಿ ಚೆಲ್ಲಲಿ
ಪ್ರೇಮವೇ ಹಣ್ಣಾಗಿ ಬರಲಿ ಕವಿಯ ಬಲ್ಲ ಸೊಲ್ಲಲಿ
ಹೊನ್ನ ನೆಕ್ಕೆ ಬಾಳ್ವರಿಲ್ಲ ಅನ್ನ ಸೂರೆ ಮಾಡಿರಿ
ಅಣ್ಣಗಳಿರಾ ಅನ್ನದಲ್ಲಿ ಮಣ್ಣ ಕಲಸಬೇಡಿರಿ - ಅಂಬಿಕಾತನಯ ದತ್ತ

ಭಾರತ, ಅಂದರೆ, ನಮ್ಮ ಹಿಂದೂಸ್ತಾನ, ದಿನೇದಿನೇ ಹಿಂಸಾಸ್ಥಾನವಾಗುತ್ತಿದೆ! ಇದು ಭಾರತೀಯರೆಲ್ಲರಿಗೂ ಕಳವಳಕಾರಿಯಾದ ಸಂಗತಿ. ದೇಶದ ಜನಸಂಖ್ಯೆ ನೂರು ಮೂವತ್ತು ಕೋಟಿ. ಈ ಜನಸಂಖ್ಯೆ ವೈವಿಧ್ಯಯುತವಾಗಿದೆ. ಅನೇಕ ಧರ್ಮೀಯರಿದ್ದಾರೆ, ಅನೇಕ ಜಾತಿಯವರಿದ್ದಾರೆ, ಅನೇಕ ಭಾಷಿಕರಿದ್ದಾರೆ, ಅನೇಕ ಸಿದ್ಧಾಂತವಾದಿಗಳಿದ್ದಾರೆ. ದಾಖಲಿಸಲಾಗದ ಇನ್ನೂ ಅನೇಕ ಬಗೆಯ ಜನರಿದ್ದಾರೆ. ಇಂಥ ಅತಿ ವೈವಿಧ್ಯತೆಯ ಜನಸಮೂಹದ ಹಿಂದೂಸ್ತಾನ ಹಿಂಸಾಸ್ಥಾನವಾಗುತ್ತಿದೆಯೆಂದು ಹೇಳಿದಾಗ ಈ ಜನಕೋಟಿಯ ಪ್ರತಿಯೊಬ್ಬ ಸದಸ್ಯನೂ ಹಿಂಸಾವೃತ್ತಿಯನ್ನು ಬೆಳೆಸಿಕೊಳ್ಳುತ್ತಿದ್ದಾನೆಂದೇ ಅರ್ಥ. ಇಡೀ ದೇಶಕ್ಕೆ ದೇಶವೇ ಹಿಂಸಾಸ್ಥಾನವಾಗುತ್ತಿದೆಯೆಂದರೆ ಹಿಂಸಾಚಾರವೆಂಬುದು ಈ ದೇಶದ ನಿವಾಸಿಗಳ ಸಹಜ ಗುಣವಾಗುತ್ತಿದೆ, ಹಿಂಸೆ ಜೀವನದ ಪ್ರಧಾನ ಮೌಲ್ಯವಾಗುತ್ತಿದೆ, ಹಿಂಸಾಚಾರ ಮಾಡದೆ ಅಥವಾ ಹಿಂಸಾಚಾರಕ್ಕೆ ಸಿದ್ಧವಾಗದೆ ಜೀವನ ನಡೆಯುವುದಿಲ್ಲವೆಂಬ ತೀರ್ಮಾನಕ್ಕೆ ಜನರು ಮತ್ತು ದೇಶದ ಸರ್ಕಾರ ಮತ್ತು ದೇಶದ ನಾಯಕರು ಬಂದಿದ್ದಾರೆಂದೇ ಅರ್ಥ. ಕೌಟುಂಬಿಕ ಸಮಸ್ಯೆಯನ್ನು ಬಗೆ ಹರಿಸಬೇಕಾದರೆ ಹಿಂಸಾಮಾರ್ಗ, ರಾಜಕೀಯ ಎದುರಾಳಿಯಿಂದ ಮುಕ್ತನಾಗಬೇಕಾದರೆ ಹಿಂಸಾಮಾರ್ಗ, ನೆರೆ ದೇಶವನ್ನು ಮಣಿಸಬೇಕಾದರೆ ಹಿಂಸಾಮಾರ್ಗ, ಆಟೋಟದಲ್ಲಿ ಗೆಲ್ಲಬೇಕಾದರೆ ಹಿಂಸಾಮಾರ್ಗ, ಹಣ ಗಳಿಸಬೇಕಾದರೆ ಹಿಂಸಾಮಾರ್ಗ, ಬೃಹತ್ ವಾಣಿಜ್ಯ ವ್ಯವಹಾರದಿಂದ, ಸಾಮಾನ್ಯ ವ್ಯಾಪಾರದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಲಾಭ ಮಾಡಿಕೊಳ್ಳಬೇಕಾದರೆ ಹಿಂಸಾಮಾರ್ಗ, ಗ್ರಾಮಪಂಚಾಯತಿಯ ಸದಸ್ಯತ್ವದಿಂದ ಹಿಡಿದು ಲೋಕಸಭಾ ಸದಸ್ಯತ್ವದವರೆಗಿನ ಎಲ್ಲ ಚುನಾವಣೆಗಳಲ್ಲಿ ಹಿಂಸಾಮಾರ್ಗ. ಈ ರೀತಿ ಹಿಂಸೆಯೆಂಬುದು ದೇಶದ ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಕಳೆದು ಹೋದ ೨೦೧೦ನೇ ಇಸ್ವಿಯನ್ನು ಭ್ರಷ್ಟಾಚಾರದ ವರ್ಷವೆಂದು ಕರೆಯಬೇಕೆಂದು

ಕೆಲವರು ಹೇಳಿದರೆ, ಇನ್ನು ಕೆಲವರು ರಾಜಕೀಯ ಅಸ್ಥಿರತೆಯ ವರ್ಷವೆಂದು ಕರೆಯಬೇಕೆಂದು ಹೇಳುತ್ತಾರೆ. ಹೀಗೆ ಕರೆಯಬೇಕೆಂಬುದು ಸರಿಯೆ. ಆದರೆ ಈ ನಾಮಕರಣಗಳ ಜೊತೆಗೆ ಬಹು ಮುಖ್ಯವಾದ ಇನ್ನೊಂದು ನಾಮಕರಣವನ್ನು ಗತಿಸಿ ಹೋದ ವರ್ಷಕ್ಕೆ ಮಾಡಬೇಕಿದೆ. ಅದುವೇ ಹಿಂಸಾಮಾರ್ಗದ ವರ್ಷ! ಹಿಂಸೆಯೆಂದರೆ ಕೇವಲ ಪ್ರಾಣಾಪಹರಣವಲ್ಲವೆಂಬುದು ಎಲ್ಲರಿಗೂ ಗೊತ್ತು. ಉಪನಿಷತ್ತುಗಳ ಪ್ರಕಾರ, ಜೈನಧರ್ಮ ಮತ್ತು ಬೌದ್ಧಧರ್ಮಗಳ ಪ್ರಕಾರ ಹಿಂಸೆಯ ವ್ಯಾಖ್ಯೆ ಈ ಧರೆಯಷ್ಟೇ ವಿಶಾಲವಾಗಿದೆ. ಹಿಂಸೆಯ ವ್ಯಾಖ್ಯೆಯಲ್ಲಿ ಶಾರೀರಕ ತೊಂದರೆಯಷ್ಟೇ ಅಲ್ಲ, ಮನಸ್ಸಿಗೆ ನೋವುಂಟು ಮಾಡುವುದೂ ಹಿಂಸೆಯೇ. ಸುಳ್ಳು ಹೇಳುವುದು, ಸಂಗ್ರಹ ಮಾಡುವುದು, ಕರ್ತವ್ಯದ ಬಗ್ಗೆ ಹೊಣೆಗೇಡಿಯಾಗಿರುವುದು, ಪ್ರತಿಯೊಂದು ಕೆಲಸಕ್ಕೂ ಪ್ರತಿಫಲವನ್ನು ಅಪೇಕ್ಷಿಸುವುದು, ಸ್ವಾರ್ಥಿಯಾಗಿರುವುದು, ದರ್ಬಲರನ್ನು ಶೋಷಿಸುವುದು, ಪರರನ್ನು ಹೀಗೆಳೆಯುವುದು ಇಂಥ ಸಾವಿರಾರು ದೋಷಗಳು ಹಿಂಸೆಯ ವ್ಯಾಖ್ಯೆಯಲ್ಲಿ ಬರುತ್ತವೆ. ಈ ಪ್ರಕಾರದ ದೋಷಗಳ ಹಿನ್ನೆಲೆಯಲ್ಲಿ ಹಿಂದೂಸ್ತಾನದ ಇಂದಿನ ಜನರ ಜೀವನವನ್ನ, ಜೀವನ ಪದ್ಧತಿಯನ್ನ ನೋಡಿದರೆ ದೇಶವೆಲ್ಲ ಹಿಂಸಾಮಯವಾಗಿ ಕಾಣುವುದರಲ್ಲಿ ಸಂಶಯವಿಲ್ಲ. ಅಲ್ಲದೆ, ಜೀವನವೇ ಕಠಿಣತಮವಾಗಿ ಇರುಂತೆ ಅನುಭವಕ್ಕೆ ಬರುತ್ತದೆ. ಇಷ್ಟೇ ಅಲ್ಲ, ಪ್ರಸ್ತುತ ಹಿಂಸೆಯಿಂದ ಬಿಡುಗಡೆ ಹೊಂದಬೇಕಾದರೆ ಪುನಃ ಹಿಂಸಾಮಾರ್ಗವನ್ನೇ ಅನುಸರಿಸಬೇಕಾಗುತ್ತದೆಂಬ ಭಯಂಕರವಾದ ಪರಿಸ್ಥಿತಿಯ ನಿರ್ಮಾಣವಾಗುತ್ತದೆ. ಅಂದರೆ ಹಿಂಸಾಚಾರಕ್ಕೆ ಕೊನೆಯೇ ಇಲ್ಲವೇನೋ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತ ಹೋಗುತ್ತದೆ. ಹಿಂಸಾಚಾರದ ಇಂಥ ವಿಷವರ್ತುಲದಲ್ಲಿ ನಮ್ಮೀ ಹಿಂದೂಸ್ತಾನ ಸಿಕ್ಕಿಹಾಕಿಕೊಂಡಿದೆ.

ಇಂದು ಹಿಂದೂಸ್ತಾನ ಹಿಂಸಾಸ್ಥಾನವಾಗುವುದಕ್ಕೆ ಕಾರಣ ಕೇವಲ ನಮ್ಮ ದೇಶದ ಆಂತರಿಕ ಸಾಮಾಜಿಕ-ಆರ್ಥಿಕ-ರಾಜಕೀಯ ಕಲುಶತೆಗಳಷ್ಟೇ ಕಾರಣವಲ್ಲ. ಜಾಗತಿಕವಾಗಿ ಕೂಡ ಹಿಂಸಾಚಾರವೆಂಬುದು ಎಲ್ಲ ಸರ್ಕಾರಗಳಿಂದ ಮಾನ್ಯತೆ ಪಡೆದಿರುವುದರಿಂದ ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ಭಾರತವೂ ಹಿಂಸಾಮಯವಾಗಿದೆ. ರಾಷ್ಟ್ರಗಳ ಒಕ್ಕೂಟ ವಿಶ್ವರಾಷ್ಟ್ರ ಸಂಸ್ಥೆಯೂ ಜಾಗತಿಕ ಹಿಂಸಾಚಾರದ ಮುಂದೆ ಮಂಡಿಯೂರಿದೆ. ಅನೇಕಬಾರಿ ಆ ಸಂಸ್ಥೆಯೆ ಹಿಂಸಾಚಾರದ ತಡೆಗೆ ಸ್ವತಃ ಹಿಂಸಾಚಾರಕ್ಕೆ ಇಳಿಯಬೇಕಾಗುತ್ತದೆ. ಇಪ್ಪತ್ತೊಂದನೇ ಶತಮಾನ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಬಹು ಪ್ರಗತಿಯನ್ನು ಸಾಧಿಸಿದ ಶತಮಾನ. ಈ ಶತಮಾನದಲ್ಲಿ ಅಂತರಿಕ್ಷವನ್ನು ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಗಳ ಪ್ರಯೋಗಾಲಯವನ್ನಾಗಿ ಪರಿವರ್ತಿಸಲಾಗಿದೆ. ಚಂದ್ರ, ಮಂಗಳ, ಗುರು, ಶುಕ್ರ ಮುಂತಾದ ಎಲ್ಲ ಗ್ರಹಗಳನ್ನು ತನ್ನ ಪದತಲಕ್ಕೆ ತರುವ ಪ್ರಯತ್ನವನ್ನು ಮಾಡಿ ಕೆಲವೊಂದು ಕ್ಷೇತ್ರಗಳಲ್ಲಿ ಯಶಸ್ಸನ್ನೂ ಸಾಧಿಸಲಾಗಿದೆ. ಚಂದ್ರನನ್ನು ಭೂಮಿಯ ಒಂದು ವಸಾಹತುವನ್ನಾಗಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಸಾಕಷ್ಟು ಯಶಸ್ಸು ಸಿಕ್ಕಿದೆ. ಎಲ್ಲ ದೇಶಗಳಿಂದ ಆಗುತ್ತಿರುವ ಅಂತರಿಕ್ಷದ ಮೇಲಿನ ಹಿಡಿತದ ಪ್ರಯತ್ನದ ಹಿಂದೆ ಹಿಂಸಾಚಾರದ ಪ್ರೇರಣೆಯೇ ಇಂಧನವಾಗಿದೆ. ಭೂಮಿಯ ಮೇಲೆ

ರಾಜಕೀಯ-ಆರ್ಥಿಕ ಸಾಮ್ರಾಜ್ಯ ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯಂತೆಯೇ ಅಂತರಿಕ್ಷದಲ್ಲಿಯೂ ಸಾಮ್ರಾಜ್ಯ ಸ್ಥಾಪಿಸುವ ಮಹತ್ವಾಕಾಂಕ್ಷೆ ಜಗತ್ತಿನ ಅನೇಕ ಮುಂದುವರಿದ ದೇಶಗಳದ್ದಾಗಿದೆ. ಮುಂದುವರಿಯುತ್ತಿರುವಂಥ ಭಾರತ ಮತ್ತು ಪಾಕಿಸ್ತಾನದಂಥ ದೇಶಗಳಿಗೂ ಅಂಥ ಮಹತ್ವಾಕಾಂಕ್ಷೆ ಇದೆ. ಮಹತ್ವಾಕಾಂಕ್ಷೆಯೂ ಹಿಂಸಾಸ್ವಭಾವದ ಒಂದು ಭಾಗವೇ ಆಗಿದೆ. ಪರಿಣಾಮವಾಗಿ ಭೂಮಿಗೆ ಮಾತ್ರ ಸೀಮಿತವಾಗಿದ್ದ ಹಿಂಸೆ ಈಗ ಅಂತರಿಕ್ಷಕ್ಕೂ ಚಿಮ್ಮಿದೆ. ಗ್ರಹಗಳತ್ತ ಯಾನ ಮಾತ್ರವಲ್ಲದೆ ಕ್ಷಿಪಣಿಗಳ ಮೂಲಕ ದೂರದೂರದ ಪ್ರದೇಶಗಳನ್ನು ಸಿಡಿಮದ್ದಿನ ಮೂಲಕ ಅಲ್ಲಿಯ ಜನವಸತಿ, ಸ್ಥಾವರ ಮತ್ತು ಪರಿಸರವನ್ನು ನಾಶ ಮಾಡುವ ಉದ್ದೇಶ್ಯದ ಉದ್ದಿಮೆಯೂ ಬಹುಶಃ ಜಗತ್ತಿನ ಎಲ್ಲ ಪ್ರಮುಖ ದೇಶಗಳಲ್ಲೂ ನಡೆಯುತ್ತಿದೆ. ಉದಾಹರಣೆಗೆ ಭಾರತ, ಪಾಕಿಸ್ತಾನ, ಚೀನಾ, ಅಮೇರಿಕಾ, ರಶಿಯಾ, ಇಸ್ರೇಲ್, ಪ್ಯಾಲೆಸ್ಟೇನ್, ಫ್ರಾನ್ಸ್, ಜರ್ಮನಿ, ಇತ್ಯಾದಿ. ಈ ದೇಶಗಳು ಕ್ಷಿಪಣಿಗಳ ತಯಾರಿಕೆಯಲ್ಲಿ, ಯುದ್ಧ ವಿಮಾನಗಳ ತಯಾರಿಕೆಯಲ್ಲಿ ತೊಡಗಿರುವುದಕ್ಕೆ ಮುಖ್ಯ ಕಾರಣ ಯಾವ ಮನುಕುಲ ಹಿತವೂ ಆಗಿರದೆ ತಮ್ಮ ಎದುರಾಳಿಯೆಂದು ಭಾವಿಸಿರುವ ಮತ್ತು ಮುಂದೆ ಭವಿಷ್ಯದಲ್ಲಿ ಆ ಎದುರಾಳಿಯೊಂದಿಗೆ ಯುದ್ಧವಾಗುವ ಸಂದರ್ಭ ಬಂದಾಗ ಆ ಎದುರಾಳಿ ದೇಶವನ್ನು ಬಗ್ಗುಬಡಿಯಬೇಕೆಂಬ ವಿಜಯೋತ್ಸಾಹವೇ ಕಾರಣವಾಗಿದೆ. ಪಾಕಿಸ್ತಾನಕ್ಕೆ ಹಿಂದೂಸ್ತಾನ ಎದುರಾಳಿ ದೇಶವಾದರೆ, ಅಮೇರಿಕಕ್ಕೆ ರಶಿಯಾ; ಭಾರತಕ್ಕೆ ಚೀನಾ; ಇಸ್ರೇಲ್‌ಗೆ ಪ್ಯಾಲೆಸ್ಟೇನ್; ದಕ್ಷಿಣ ಕೊರಿಯಾಕ್ಕೆ ಉತ್ತರ ಕೊರಿಯಾ ಹೀಗೆ ಸಾಗುತ್ತದೆ ವೈರತ್ವದ ದಾರಿ. ಈ ವೈರತ್ವದ ದಾಸವಾಗಿವೆ ವಿಜ್ಞಾನ ಮತ್ತು ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನದ ಜೊತೆ ವೈರತ್ವ ಸೇರದರೆ ಪರಿಣಾಮ ಹಿಂಸೆಯೇ. ಎಲ್ಲಿಯ ವರೆಗೆ ಮೇಲ್ಕಾಣಿಸಿದ ದೇಶಗಳಲ್ಲಿ ಮುಖ್ಯವಾಗಿ, ಮತ್ತು ಇತರ ದೇಶಗಳಲ್ಲಿ ಸಾಮಾನ್ಯವಾಗಿ ಎಲ್ಲಿಯ ವರೆಗೆ ವೈರತ್ವ ಅಳಿದು ಹೋಗುವುದಿಲ್ಲವೋ ಅಲ್ಲಿಯ ವರೆಗೆ ಆಯಾ ದೇಶವು ತಯಾರಿಸುವ ಪ್ರತಿಯೊಂದು ಯುದ್ಧ ಉಪಕರಣ, ಕೈಗೊಳ್ಳುವ ಪ್ರತಿಯೊಂದು ಅಂತರಿಕ್ಷಯಾನಗಳ ಪರಿಣಾಮ ಹಿಂಸೆಯೆಂದೇ ಹೇಳಬಹುದು. ಉದಾಹರಣೆಗೆ ಇತ್ತಿಚಿಗೆ ಭಾರತ ತನ್ನ ಶಸ್ತ್ರಾಸ್ತ್ರ ಭಂಡಾರಕ್ಕೆ ಸೇರಿಸಿಕೊಂಡ ತೇಜಸ್ ಬಗ್ಗೆ ಯೋಚನೆ ಮಾಡಬಹುದು. ತೇಜಸ್ ಒಂದು ಬಗೆಯ ಲಘು ಕಾಳಗ ವಿಮಾನ. ಈ ವಿಮಾನದ ಸೇರ್ಪಡೆಯಿಂದ ಭಾರತದ ಸೇನೆಯ ಯುದ್ಧ ಸಾಮರ್ಥ್ಯ ಹೆಚ್ಚು ಬಲವಾಗುವುದೆಂದು ಭಾವಿಸಲಾಗಿದೆ. ಅಂದರೆ ಎದುರಾಳಿ ದೇಶಕ್ಕೆ ಹೆಚ್ಚು ಪ್ರಾಣಹಾನಿ ಮಾಡಬಹುದೆಂದೇ ಅರ್ಥ. ಇನ್ನು ಎದುರಾಳಿ ದೇಶವು ಸಹ ತೇಜಸ್‌ನಂಥ ಅಥವಾ ಅದಕ್ಕೂ ಹೆಚ್ಚು ಕಾರ್ಯದಕ್ಷವಾದ ಕಾಳಗ ವಿಮಾನವನ್ನು ಪಡೆಯಬಹುದು. ತೇಜಸ್ ವಿಮಾನದ ಈ ವರೆಗಿನ ಹಂತದ ತಯಾರಿಕೆಯ ಖರ್ಚು ೨೫,೦೦೦ ಕೋಟಿ ರುಪಾಯಿಗಳಷ್ಟಾಗಿದೆ. ಆದರೆ 'ತೇಜಸ್' ಇನ್ನೂ ಕದನ ಯೋಗ್ಯವಾಗಿಲ್ಲ! ತೇಜಸ್ ಆಕಾಶಕ್ಕೆ ಹಾರುವ ಮೊದಲು ಅಂದರೆ ಕೇವಲ ೧೫ ದಿನಗಳ ಮುಂಚೆ ಜಿ.ಎಸ್.ಎಲ್.ವಿ ರಾಕೆಟ್ ಸ್ಫೋಟಗೊಂಡು ಅದು ಹಾರಿದ ಎರಡು ನಿಮಿಷದ ಅವಧಿಯ ಒಳಗೇ ಸಮುದ್ರದಲ್ಲಿ ಚೂರುಚೂರಾಗಿ ಬಿದ್ದಿತು; ಅದರೊಂದಿಗೆ ೩೨೫ಕೋಟಿ ರುಪಾಯಿಗಳು ಕೂಡ ನೀರು ಪಾಲಾಯಿತು.

ಜಿ.ಎಸ್.ಎಲ್.ವಿ ಉಡಾವಣೆಯು ಸಹ ಯಾವುದೇ ಶಾಂತಿಸ್ಥಾಪನೆಯ ಉಪಕ್ರಮದ ಉದ್ದೇಶವುಳ್ಳದ್ದಾಗಿರಲಿಲ್ಲ. ಆ ಪ್ರಯೋಗದ ಹಿಂದೆ ದೇಶದ ಸ್ವರಕ್ಷಣೆಯ ಚಿಂತೆಯೇ ಪ್ರಧಾನವಾಗಿತ್ತು. ಸ್ವರಕ್ಷಣೆಯೆಂದರೆ ಎದುರಾಳಿಯನ್ನು ದಮನಮಾಡುವ ಶಕ್ತಿಯನ್ನು ಹೊಂದುವುದೇ ಆಗಿರುತ್ತದೆ. 'ತೇಜಸ್' ಆಗಲಿ, 'ಜಿ.ಎಸ್.ಎಲ್.ವಿ' ಆಗಲಿ ದೇಶದ ಸ್ವಹಿತ ರಕ್ಷಣೆಯ ಹೆಸರಿನಲ್ಲಿ ದೇಶವನ್ನು ಹಿಂಸಾಮಾರ್ಗದಲ್ಲಿ ಕೊಂಡೊಯ್ಯುವುದೇ ಆಗಿದೆ. ದೇಶದ ರಕ್ಷಣೆಗಾಗಿ ಸೈನ್ಯದ ನಿರ್ವಹಣೆಗಾಗಿ, ಶಸ್ತ್ರಾಸ್ತ್ರಗಳ ನಿರ್ವಹಣೆಗಾಗಿ ಆಗುತ್ತಿರುವ ಖರ್ಚನ್ನು ಬದಿಗಿಟ್ಟು ನೋಡಿದರೂ ತುಂಬ ಇತ್ತೀಚಿನ ಪ್ರಯೋಗಗಳಾದ 'ತೇಜಸ್' ಮತ್ತು 'ಜಿ.ಎಸ್.ಎಲ್.ವಿ'ಗಾಗಿ ಮಾಡಿದ ಒಟ್ಟು ಖರ್ಚು ೨೫೦ ಕೋಟಿ ರುಪಾಯಿ! ಇಲ್ಲಿ ಎರಡು ಪ್ರಶ್ನೆಗಳು ಹುಟ್ಟುತ್ತವೆ. ಮೊದಲನೆಯ ಪ್ರಶ್ನೆ ಇನ್ನೂ ಬಡದೇಶವೆಂದೇ ಕರೆಯಲ್ಪಡುತ್ತಿರುವ, ಹಿಂದುಳಿದ ದೇಶವೆಂದೇ ಹಣೆಪಟ್ಟಿ ಹೊತ್ತಿರುವ ಹಿಂದೂಸ್ತಾನವು ತನ್ನ ಪ್ರಜೆಗಳಿಗೆ ಬೇಕಾಗಿರುವ ಜೀವನದ ಅಗತ್ಯತೆಗಳ ಪೂರೈಕೆಗೆ ಆದ್ಯತೆ ಕೊಡದೆ ಯಾವುದೇ ದೃಷ್ಟಿಯಿಂದಲೂ, ರೀತಿಯಿಂದಲೂ ನೇರವಾಗಿ ಮತ್ತು ತ್ವರಿತವಾಗಿ ಸಾಮಾನ್ಯನ ಜೀವನಕ್ಕೆ ಉಪಯೋಗವಾಗದ ತೇಜಸ್ ಮತ್ತು ಜಿ.ಎಸ್.ಎಲ್.ವಿ ರಾಕೆಟ್‌ನಂಥ ಉಪಕರಣಗಳಿಗಾಗಿ ಆ ಬೃಹತ್ ಮೊತ್ತವನ್ನು ಖರ್ಚು ಮಾಡಿದ್ದು ಸರಿಯೆ?; ಇನ್ನು ಎರಡನೆಯ ಪ್ರಶ್ನೆ ಇಂಥ ಪ್ರಯೋಗಗಳ ಹಿಂದೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿಂಸಾಮಾರ್ಗವೇ ಶ್ರೇಷ್ಠವೆಂಬ ಮನೋಭಾವ ಇಲ್ಲವೇ? ಇವೆರಡು ಮೂಲಭೂತ ಪ್ರಶ್ನೆಗಳಲ್ಲದೆ ಪರಿಸರ ವಿನಾಶ, ಇಂಧನ ದುರ್ಬಳಕೆ, ಇಸ್ರೋ ಮತ್ತು ನಾಸಾದಲ್ಲಿರುವಂಥ ವಿಜ್ಞಾನಿಗಳು ಹಾಗೂ ತಂತ್ರಜ್ಞಾನಿಗಳು ತಮ್ಮ ಶ್ರೀಮಂತಿಕೆ ಜೀವನದ ಮಾರ್ಗೋಪಾಯ ಕಂಡುಕೊಳ್ಳುವ ತಂತ್ರ, ಹಾಗೂ ರಾಜಕೀಯ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಅಮೇರಿಕಾ ಮತ್ತು ರಶಿಯಾದಂಥ ದೇಶಗಳ ವಸಾಹತು ದೇಶವಾಗಿ ಹಿಂದೂಸ್ತಾನ ತನ್ನನ್ನು ಅವುಗಳಿಗೆ ಸ್ವಯಂ ಪ್ರೇರಿತವಾಗಿ ಅರ್ಪಿಸಿಕೊಳ್ಳುತ್ತಿರುವುದು ಈ ಮುಂತಾದ ಪ್ರಶ್ನೆಗಳೂ ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ಇಂದಿನ ಯಾವ ನಾಯಕರೂ ಸಮಾಧಾನಕರವಾದ ಉತ್ತರ ಕೊಡಲಾರರು. ತಮ್ಮ ಕೈಯಲ್ಲಿ ಆಡಳಿತಾಧಿಕಾರವಿದೆಯೆಂಬ ಮಾತ್ರಕ್ಕೆ ದೇಶವನ್ನೂ, ದೇಶದಲ್ಲಿಯ ಜನರನ್ನೂ ಕಾಲ್ಗಸಮಾಡ ಹೊರಟಿರುವ ಇಂದಿನ ರಾಜಕೀಯ ನಾಯಕರನ್ನೂ, ಅರ್ಥಶಾಸ್ತ್ರಜ್ಞರನ್ನೂ, ವಿಜ್ಞಾನಿಗಳನ್ನೂ, ತಂತ್ರಜ್ಞರನ್ನೂ ಹಿಂದೂಸ್ತಾನದ ಇಂದಿನ ಪೀಳಿಗೆ ಎಂದು ಕ್ಷಮಿಸಲಾರದು. ಈ ಎಲ್ಲ ಬೆಳವಣಿಗೆಗಳು ಹಿಂದೂಸ್ತಾನ ಹಿಂಸಾಸ್ಥಾನವಾಗುತ್ತಿದೆ ಎಂಬುವುದಕ್ಕೆ ಉದಾಹರಣೆಯಾಗಿವೆ.

ಇನ್ನು ಹಿಂಸೆಯ ವ್ಯಾಖ್ಯೆಯಲ್ಲಿ ಬರುವ ಭ್ರಷ್ಟಾಚಾರ. ಭ್ರಷ್ಟಾಚಾರತೆಯೆಂಬುದು ಮನುಷ್ಯನು ಅನುಭವಿಸಬಹುದಾದ ಬಹು ದುರಂತಮಯವಾದ ಜೀವನದ ಆಚರಣೆ. ಭ್ರಷ್ಟ ಎಂಬುದು ಶಿಷ್ಟ ಶಬ್ದದ ವಿರೋಧ ಪದ. ಶಿಷ್ಟತೆ ಜೀವನಕ್ಕೆ ಆಧಾರವಾದರೆ ಭ್ರಷ್ಟತೆ ಜೀವನದ ಪತನಕ್ಕೆ ಕಾರಣವಾಗುತ್ತದೆ. ಶಿಷ್ಟತೆ ಸಮಾಜವನ್ನೂ, ದೇಶವನ್ನೂ, ಬದುಕನ್ನೂ ಕಟ್ಟಿದರೆ ಭ್ರಷ್ಟತೆ ಅವೆಲ್ಲವನ್ನೂ ಹಾಳುಗೆಡುವುತ್ತದೆ. ಶಿಷ್ಟತೆಯುಳ್ಳ ಜೀವನ ಪ್ರಾಣಪ್ರತಿಷ್ಠೆಗೊಂಡ ದೇವಸ್ಥಾನವಾದರೆ ಭ್ರಷ್ಟತೆಯಿಂದ ಕೂಡಿದ ಜೀವನ ಹಾಳು ಮಂಟಪವಿದ್ದಂತೆ. ಶಿಷ್ಟತೆ ಎಲ್ಲ ಸಾತ್ವಿಕ ಗುಣಗಳ ಸಮ್ಮಿಲನವಾದರೆ, ಭ್ರಷ್ಟತೆ

ಎಲ್ಲ ತಮೋಗುಣಗಳ ಗೂಡು. ಇಂತೆಲ್ಲ ವಿಶ್ಲೇಷಣಕ್ಕೆ ಒಳಗಾಗುವ ಭ್ರಷ್ಟಾಚಾರ ಇಂದು ಹಿಂದೂಸ್ತಾನದ ಜನಜೀವನದ ಅಂಗವಾಗಿದೆ. ಸಮಾಜ ಜೀವನದ ಎಲ್ಲ ಅಂಗಗಳನ್ನು ಸ್ಪರ್ಶಿಸಿದೆ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಸಂಬಂಧದಲ್ಲಿ ನಡೆದ ಭ್ರಷ್ಟಾಚಾರ, ಮುಂಬೈ ನಗರದಲ್ಲಿಯ ಆದರ್ಶ ಸಹಕಾರ ಸಂಘದಲ್ಲಿಯ ಭ್ರಷ್ಟಾಚಾರ, ತುಂಬ ಇತ್ತೀಚಿಗಿನ ಮಧ್ಯಪ್ರದೇಶದ ಅಮಾನತುಗೊಂಡಿರುವ ಐ.ಎ.ಎಸ್ ಅಧಿಕಾರಿ ದಂಪತಿಗಳ ೩೬೦ ಕೋಟಿ ಅಕ್ರಮ ಆಸ್ತಿ ಹಗರಣ, ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯರ ೩೦೦ ಲಕ್ಷ ಕೋಟಿಗೂ ಮಿಕ್ಕಿ ಇರುವ ಕಪ್ಪುಹಣ, ಕ್ರಿಕೆಟ್ ಆಟಗಾರರನ್ನು ಗುಲಾಮರಂತೆ ಖರೀದಿಸುವ ಪದ್ಧತಿ, ರೆಡ್ಡಿಗಳಿಂದ ಗಣಿ ಲೂಟಿ, ಬಂದರಿನಲ್ಲಿ ಹಡಗಿನಲ್ಲಿದ್ದ ಕಬ್ಬಿಣದ ಅದುರಿನ ಕಳ್ಳತನ, ಮಾವೋವಾದಿಗಳ ನಿಯಂತ್ರಣಕ್ಕೆ ೫೮೦ ಕೋಟಿ ರುಪಾಯಿಗಳ ಬಿಡುಗಡೆ ಇಂಥ ಉದಾಹರಣೆಗಳೆಲ್ಲ ಹಿಂದೂಸ್ತಾನ ಹಿಂಸಾಸ್ಥಾನವಾಗುತ್ತಿರುವುದಕ್ಕೆ ಜ್ವಲಂತ ಸಂಗತಿಗಳಾಗಿವೆ. ಭ್ರಷ್ಟಾಚಾರ ಕಣ್ಣಿಗೆ ಕಾಣಿಸದ ಹಿಂಸಾಚಾರವಾಗಿದೆ. ಯಾವ ರೀತಿ ಕ್ಯಾನ್ಸರ್ ಎಂಬ ರೋಗ ಕಣ್ಣಿಗೆ ಕಾಣಿಸದೆ ಮನುಷ್ಯನ ಪ್ರಾಣವನ್ನು ತೆಗೆದುಹಾಕುವುದೋ ಅದೇ ರೀತಿ ಈ ಭ್ರಷ್ಟಾಚಾರವೆಂಬುದು ಹಿಂದೂಸ್ತಾನದ ಉದ್ದಗಲಕ್ಕೂ ಹಬ್ಬಿದೆ, ಪ್ರತಿಯೊಬ್ಬ ಭಾರತೀಯನ ಚಿತ್ತದಲ್ಲಿ ಹೊಕ್ಕಿದೆ. ಇದನ್ನು ನಿವಾರಿಸಲು ಸಾಧ್ಯವೇ ಎಲ್ಲವೇನೋ ಎಂಬ ಅಭಿಪ್ರಾಯ ಈಗ ಸಾರ್ವತ್ರಿಕವಾಗಿದೆ. ಭ್ರಷ್ಟಾಚಾರದ ನಿರ್ಮೂಲನ ಎಲ್ಲಿಂದ, ಯಾರಿಂದ ಮತ್ತು ಹೇಗೆ ಎಂಬುದೇ ಯಾರಿಗೂ ಗೊತ್ತಾಗದೇ ಇರುವಂಥ ಯಕ್ಷಪ್ರಶ್ನೆಯಾಗಿದೆ.

ಇನ್ನು ನೈತಿಕ ಅಧಃಪತನ. ಇದು ಕೂಡ ಹಿಂಸೆಯ ದೊಡ್ಡ ಲಕ್ಷಣ. ಬಾಲಕಿಯರ ಮೇಲೆ, ವೃದ್ಧ ಸ್ತ್ರೀಯರ ಮೇಲೆ ದಿನಬೆಳಗಾದರೆ ಅತ್ಯಾಚಾರಗಳು ನಡೆಯುತ್ತಿವೆ. ದಿಲ್ಲಿಯಂಥ ನಗರದಲ್ಲಿ ಒಂದು ಗಂಟೆಗೆ ಒಂದು ನೂರು ಅತ್ಯಾಚಾರದ ಪ್ರಕರಣಗಳು ದಾಖಲಾಗುತ್ತಿವೆ. ಭಾರತದಲ್ಲಿ ಇಂದು ಸ್ತ್ರೀ ಎಲ್ಲಿಯೂ ಸುರಕ್ಷಿತವಾಗಿಲ್ಲದವಳಾಗಿದ್ದಾಳೆ. ಸ್ತ್ರೀಯರ ಮೇಲಿನ ಅತ್ಯಾಚಾರ ಅನ್ಯಾಯಗಳಿಗೆ ಮತ್ತು ಸ್ತ್ರೀಯೇ ಸ್ವತಃ ದಾನವಳಾಗುವುದಕ್ಕೆ ಅವಳೇ ಬಹಳಷ್ಟು ಕಾರಣವಾಗಿದ್ದಾಳೆ. ಯಾವ ದೇಶದಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರಗಳಾಗುತ್ತವೋ, ಎಲ್ಲಿ ಸ್ತ್ರೀಯೇ ತನ್ನ ನೈತಿಕತೆಯನ್ನು ಕಳೆದುಕೊಳ್ಳುತ್ತಾಳೋ ಆ ದೇಶ ಹಿಂಸಾಮಾರ್ಗದಲ್ಲಿಯೇ ನಡೆಯಬೇಕಾಗುತ್ತದೆ. ಇಂದು ಹಿಂದೂಸ್ತಾನದ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನಸಂಖ್ಯೆ ಸ್ತ್ರೀಯರದಾಗಿದೆ. ಅನೈತಿಕತೆಯತ್ತ ಹೋಗುತ್ತಿರುವ ಸ್ತ್ರೀಯರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಿದೆ. ಈ ಕಾರಣವಾಗಿಯೂ ಹಿಂದೂಸ್ತಾನ ಹಿಂಸಾಸ್ಥಾನವಾಗುತ್ತಿದೆ.

ಹಿಂದೂಸ್ತಾನ ಹಿಂಸಾಸ್ಥಾನವಾಗುತ್ತಿರುವುದಕ್ಕೆ ಇನ್ನೊಂದು ಪ್ರಮುಖ ಕಾರಣ ಅಭಿವೃದ್ಧಿಯೆಂಬ ಪ್ರಕ್ರಿಯೆ. ಹಿಂದೂಸ್ತಾನಕ್ಕೆ ಅಭಿವೃದ್ಧಿಯ ವಿಚಾರ, ಪದ್ಧತಿ, ಗುರಿ ಇತ್ಯಾದಿಗಳೆಲ್ಲ ಬಂದದ್ದು ಪಾಶ್ಚಿಮಾತ್ಯ ದೇಶಗಳಿಂದ. ಪಾಶ್ಚಿಮಾತ್ಯ ಸಂಸ್ಕೃತಿ ಭೋಗಪ್ರಧಾನವಾದದ್ದು. ಭೋಗಿಗಳು ಎಂದೂ ತಮ್ಮ ಸುತ್ತಲಿರುವ ಪರಿಸರವನ್ನು ಸುರಕ್ಷಿತವಾಗಿಡಲು ಬಯಸುವುದಿಲ್ಲ. ಮನುಷ್ಯನಿಂದ ಹಿಡಿದು ಎಲ್ಲ ಪ್ರಾಣಿಗಳು, ಎಲ್ಲ ಪಂಚಭೂತಗಳು ಭೋಗಿಗಳ ಭೋಗಮಯ ಜೀವನಕ್ಕೆ ಸ್ವಾಹಾ ಆಗುತ್ತವೆ.

ಇದಕ್ಕಿಂತ ಘೋರವಾದ ಹಿಂಸಾಚಾರ ಇನ್ನೊಂದಿಲ್ಲ. ಇಂದಿನ ಅಭಿವೃದ್ಧಿಯೆಂಬುದು ಸಕಲ ಪ್ರಾಣಿಗಳ ಆತ್ಮವನ್ನೇ ಕಲುಷಿತಗೊಳಿಸುತ್ತಿದೆ. ಮನುಷ್ಯನಿಗೆ ಹುಚ್ಚು ಹಿಡಿಸಿದೆ. ಅಭಿವೃದ್ಧಿಯ ಹುಚ್ಚು ಹೊಳೆಯಲ್ಲಿ ಇಡೀ ಬ್ರಹ್ಮಾಂಡವೇ ತೇಲಿ ಹೋಗುತ್ತಿರುವಾಗ ಹಿಂದೂಸ್ತಾನದ ಗತಿ ಬೇರೆಯಾಗಿರಲು ಸಾಧ್ಯವೇ? ಅಭಿವೃದ್ಧಿಯ ವೇಗ ಹೆಚ್ಚಿದಷ್ಟೂ ದೇಶದಲ್ಲಿ ಹಿಂಸಾಚಾರ ಹೆಚ್ಚುತ್ತಿದೆ. ಇಂದು ಇಡಿ ಹಿಂದೂಸ್ತಾನ ಅಭಿವೃದ್ಧಿಯ ತೆಕ್ಕೆಯೊಳಗೆ ಸಿಕ್ಕಿಕೊಂಡಿರುವುದರಂದ ಅದು ಹಿಂಸಾತ್ಮಕವಾಗಿಪರಿಣಮಿಸಿದೆ.

ಕಪ್ಪು ಮೋಡಕ್ಕೆ ಬೆಳ್ಳಿ ರೇಖೆಯ ಅಂಚು ಇರುವಂತೆ ಹಿಂದೂಸ್ತಾನದಲ್ಲಿ ರೂಪಿತವಾಗುತ್ತಿರುವ ಹಿಂಸೆಯ ಮಧ್ಯದಲ್ಲಿಯೂ ಅದನ್ನು ಕಡಿಮೆ ಮಾಡುವ ನಿಟ್ಟಿನತ್ತ ಗಂಭೀರ ಆಲೋಚನೆಯೂ ನಡೆಯುತ್ತಿದೆ. ರಾಜಕಾರಣದ ಶುದ್ಧಿಗಾಗಿ ಚುನಾವಣಾ ಆಯೋಗ ತೀವ್ರ ಆಲೋಚನೆ ಮಾಡುತ್ತಿದೆ ಮತ್ತು ಅದಕ್ಕನುಗುಣವಾದ ಕ್ರಮಗಳನ್ನು ಜಾರಿಗೆ ತರುತ್ತಿದೆ; ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಲೋಕಪಾಲ, ಲೋಕಾಯುಕ್ತ, ಕೇಂದ್ರ ಜಾಗೃತ ಆಯೋಗ ಮುಂತಾದ ಸಂಸ್ಥೆಗಳು ಹುಟ್ಟಿಕೊಂಡಿವೆ. ಮಾಹಿತಿ ಪಡೆಯುವ ಹಕ್ಕಿನ ಕಾನೂನು ಜಾರಿಗೆ ಬಂದಿದೆ. ಭ್ರಷ್ಟಾಚಾರದ ವಿರುದ್ಧ ಸಮರ ನಡೆದಿದೆ.

ಆದರೆ ಹಿಂಸಾಚಾರದ ನಿರ್ಮೂಲನೆಗಾಗಿ ಮುಖ್ಯವಾಗಿ ಬೇಕಾದ ಅಂತರ್‌ದೇಶಗಳಲ್ಲಿ ಸ್ನೇಹ–ವಿಶ್ವಾಸ–ಪ್ರೇಮಭಾವನೆ ಮೂಡದೆ ಇರುವುದು ಆತಂಕಕಾರಿಯಾಗಿದೆ. ಪಾಕಿಸ್ತಾನ ಸದಾ ಹಿಂದೂಸ್ತಾನದ ಜೊತೆಗೆ ಜಗಳ ಕಾಯುವುದನ್ನು ಬಿಡಬೇಕು; ಜಮ್ಮು–ಕಾಶ್ಮೀರ ಸಮಸ್ಯೆಯನ್ನು ಭಾರತ ಉಪಖಂಡದ ಐತಿಹಾಸಿಕ ಹಿನ್ನೆಲೆಯಲ್ಲಿ ಬಗೆಹರಿಸಿಲು ಸಹಕರಿಸಬೇಕು; ಚೀನಾ ತನ್ನ ಆಕ್ರಮಣಶೀಲ ಮನೋಭಾವವನ್ನು ಬಿಟ್ಟು ತನ್ನ ಮತ್ತು ಭಾರತದ ಹಿರಿಯ ಸಂಸ್ಕೃತಿಯನ್ನು ಭದ್ರಗೊಳಿಸಲು ಪ್ರಯತ್ನಿಸಬೇಕು. ಎರಡನೇ ಮಹಾಯುದ್ಧದ ಸಮಯದಲ್ಲಿ ಗಾಂಧೀಜಿ ಚರ್ಚಿಲ್ ಮತ್ತು ಹಿಟ್ಲರ್‌ನಂಥವರಿಗೂ ಅಹಿಂಸೆಯ ಅಗತ್ಯತೆಯನ್ನು ತಿಳಿಸುವ ಪ್ರಯತ್ನ ಮಾಡಿದ್ದರು. ನಿಃಶಸ್ತ್ರೀಕರಣದ ಮಾತನ್ನು ಹೇಳಿದ್ದರು. ಇವು ಅಂದು ಅವಾಸ್ತವಿಕ, ಅವೈಜ್ಞಾನಿಕ, ಹುಚ್ಚುತನದ ಸಲಹೆಗಳೆಂದು ಅನಿಸಿತ್ತು. ಆದರೆ ಇಂದಿನ ಶಸ್ತ್ರಾಸ್ತ್ರಗಳ ಸಂಗ್ರಹದ ಬಗ್ಗೆ ದೇಶ–ದೇಶಗಳ ಮಧ್ಯದ ಪೈಪೋಟಿ ಮತ್ತು ಮೂರನೇ ಮಹಾಯುದ್ಧ ನಡೆದುದೇ ಆದಲ್ಲಿ ಆಗುವ ಭೀಕರ ಪರಿಣಾಮ ಗಮನಿಸಿದರೆ ಹಿಂದೂಸ್ತಾನವನ್ನೂ, ತನ್ಮೂಲಕ ಜಗತ್ತನ್ನೂ ಅಹಿಂಸಾಮಾರ್ಗದಲ್ಲಿ ತೆಗೆದುಕೊಂಡು ಹೋಗುವುದು ಅನಿವಾರ್ಯವೆನಿಸುತ್ತದೆ. ಎಲ್ಲರೂ ಬದಲಾವಣೆ ಬಯಸುತ್ತಿದ್ದಾರೆ. ಹಾಗಾದರೆ ಆ ಬದಲಾವಣೆ ನಮ್ಮಿಂದಲೇ ಶುರುವಾಗಬೇಕಲ್ಲವೇ? ಹಿಂಸೆ ಅದು ಯಾವುದೇ ರೂಪದಲ್ಲಿರಲಿ ಪ್ರಥಮತಃ ಮನಸ್ಸಿನಲ್ಲಿ ಮೊಳಕೆಯೊಡೆಯುತ್ತದೆ. ತದನಂತರ ಅನೇಕ ಪ್ರಕಾರದಲ್ಲಿ ಪ್ರಕಟವಾಗುತ್ತದೆ. ಆದ್ದರಿಂದ ಅಹಿಂಸಾ ವಿಚಾರವು ಸಹ ಮನಸ್ಸಿನಲ್ಲಿ ಮೊಳಕೆಯೊಡೆಯುವಂತೆ ಮನೋ ಸಂಸ್ಕಾರ ಬೆಳೆಸಿಕೊಳ್ಳಬೇಕು.

ಈ ಲೇಖನದ ಪ್ರಾರಂಭದಲ್ಲಿ "ಭಾರತ, ಅಂದರೆ, ಇಂದಿನ ಹಿಂದೂಸ್ತಾನ" ಎಂದು ಪ್ರಸ್ತಾಪಿಸಲಾಗಿದೆ. ಇದರ ಉದ್ದೇಶ್ಯ ಹಿಂದೂಸ್ತಾನ ಬೇರೆ ಮತ್ತು ಭಾರತ ಬೇರೆ ಎಂಬ ಸಾಂಸ್ಕೃತಿಕ ಭಿನ್ನತೆಯನ್ನು ತಿಳಿಸುವುದೇ ಆಗಿದೆ. ನಮ್ಮೀ ಭರತಖಂಡ

ಬಹು ಪ್ರಾಚೀನವಾದುದು. ಇಲ್ಲಿಯ ಪೂರ್ವಜರು ಸುಸಂಸ್ಕೃತರಾಗಿದ್ದರು; ಸಾತ್ವಿಕ ಜೀವನ ನಡೆಸುತ್ತಿದ್ದರು; ವೇದ-ಉಪನಿಷತ್ತು-ಅರಣ್ಯಕಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಭೌತಿಕವಾಗಿ ಹೊರ ಜಗತ್ತಿನೊಂದಿಗೆ ಸಂಪರ್ಕವಿರದಿದ್ದರೂ ತಮ್ಮ ತಪೋ ಬಲದಿಂದ, ಮನೋಬಲದಿಂದ, ಬ್ರಹ್ಮೋಪಾಸನೆಯಿಂದ, ಚಿಂತನಾಶಕ್ತಿಯಿಂದ ಇಡಿ ಬ್ರಹ್ಮಾಂಡದೊಂದಿಗೆ ತಾದ್ಯಾತ್ಮಕತೆಯನ್ನು ಹೊಂದಿದ್ದರು. ಸಮಸ್ತ ಬ್ರಹ್ಮಾಂಡದ ಹಿತಚಿಂತನೆಯನ್ನು ಮಾಡಿದ್ದರು. ಇದಕ್ಕೆ ಉದಾಹರಣೆಯಾಗಿ ಈ ಕೆಳಗಿನ ಐದು ಶಾಂತಿ ಮಂತ್ರಗಳನ್ನು ಗಮನಿಸಬಹುದು:

ಮೊದಲನೆಯ ಶಾಂತಿಮಂತ್ರ- "ನನ್ನ ವಾಣಿ ಮನಸ್ಸಿನಲ್ಲಿ ಪ್ರತಿಷ್ಠಿತವಾಗಿದೆ; ಮನಸ್ಸು ವಾಣಿಯಲ್ಲಿ ಪ್ರತಿಷ್ಠಿತವಾಗಿದೆ. ನನಗಾಗಿ ವೇದಗಳನ್ನು ತರಲು ಸಮರ್ಥರಾಗಿರಿ. ನಾನು ಕೇಳಿದಂಥ ಜ್ಞಾನ ನನ್ನ ತ್ಯಾಗ ಮಾಡದೇ ಇರಲಿ! ಇದರ ಅಧ್ಯಯನಕ್ಕಾಗಿ ಹಗಲು ರಾತ್ರಿಗಳನ್ನು ಜೋಡಿಸುವೆ. ನಾನು ಸತ್ಯ ನುಡಿಯುವೆ, ಅವು ನನ್ನ ರಕ್ಷಣೆ ಮಾಡಲಿ. ಸತ್ಯ ಹೇಳುವವನ ರಕ್ಷಣೆ ಮಾಡಲಿ. ನನ್ನ ರಕ್ಷಣೆ ಮಾಡಲಿ."

ಎರಡನೆಯ ಶಾಂತಿ ಮಂತ್ರ- "ನಮ್ಮದು ಏಕತ್ರವಿಕಾಸವಾಗಲಿ, ಏಕತ್ರ ರಕ್ಷಣೆಯಾಗಲಿ, ನಮ್ಮ ಅಧ್ಯಯನ ತೇಜಸ್ವಿಯಾಗಲಿ, ನಾವು ಒಬ್ಬರು-ಇನ್ನೊಬ್ಬರ ದ್ವೇಷ ಮಾಡದಿರಲಿ."

ಮೂರನೆಯ ಶಾಂತಿ ಮಂತ್ರ- "ಅದು ಪೂರ್ಣವಾಗಿದೆ, ಇದು ಪೂರ್ಣವಾಗಿದೆ, ಪೂರ್ಣದಿಂದ ಪೂರ್ಣ ನಿಷ್ಪನ್ನವಾಗುತ್ತದೆ, ಪೂರ್ಣದಿಂದ ಪೂರ್ಣವನ್ನು ತೆಗೆದರೂ ಪೂರ್ಣವೇ ಶೇಷವಾಗಿ ಉಳಿಯುತ್ತದೆ."

ನಾಲ್ಕನೆಯ ಮಂತ್ರ- "ನನ್ನ ಅಂಗ, ವಾಣಿ, ಪ್ರಾಣ, ಚಕ್ಷು, ಶ್ರೋತ್ರ ಪರಿಪುಷ್ಟವಾಗಲಿ. ಎಲ್ಲ ಇಂದ್ರಿಯಗಳು ಬಲವಾಗಲಿ. ಉಪನಿಷತ್ತು ಪ್ರತಿಪಾದ್ಯ ಎಲ್ಲವೂ ಬ್ರಹ್ಮ. ನಾನು ಆ ಬ್ರಹ್ಮನನ್ನು ನಿರಾಕರಣೆ ಮಾಡದೇ ಇರಲಿ. ಬ್ರಹ್ಮ ನನ್ನ ನಿರಾಕರಣೆ ಮಾಡದಿರಲಿ."

ಐದನೆಯ ಮಂತ್ರ- "ಹೇ ದೇವಗಣೆರಾ! ನಾವು ಕಿವಿಗಳಿಂದ ಶುಭವಚನ ಕೇಳುವಂತಾಗಲಿ. ಹೇ ಪೂಜನೀಯರೆ! ಕಣ್ಣುಗಳಿಂದ ಶುಭವನ್ನೇ ನೋಡುವಂತಾಗಲಿ. ನಿಮ್ಮ ಸ್ತುತಿ ಮಾಡುತ್ತ-ಮಾಡುತ್ತ ಸ್ಥಿರ ಅಂಗಗಳಿಂದ ಗಟ್ಟಿ ಶರೀರದಿಂದ ಈಶ್ವರ ಕೊಟ್ಟ ಆಯು ಪ್ರಾಪ್ತವಾಗುವುದು."

ಈ ಐದು ಮಂತ್ರಗಳು ಭಾರತದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಇಂದಿನ ಹಿಂದೂಸ್ತಾನ ಯಾವುದು ಕೇವಲ ರಾಜಕೀಯ-ಭೌತಿಕ, ಐಹಿಕ ವಿಚಾರಗಳಿಂದ ಕೂಡಿದೆಯೋ ಆ ಹಿಂದೂಸ್ತಾನವನ್ನು ಮೇಲ್ಕಾಣಿಸಿದ ಭಾರತೀಯ ಸಂಸ್ಕೃತಿ ಗೆಲ್ಲುವಂತೆ ಮಾಡಬೇಕು. ಅದು ಪ್ರತಿಯೊಬ್ಬ ಭಾರತೀಯನ ಜೀವನೋದ್ದೇಶ್ಯವಾಗಬೇಕು. ಆಗ ಹಿಂದೂಸ್ತಾನ ಹಿಂಸಾಸ್ಥಾನವಾಗುವುದರ ಬದಲು ಅಹಿಂಸಾಸ್ಥಾನವಾಗುವುದು. ಜಗತ್ತಿಗೇ ಮಾರ್ಗದರ್ಶಕ ದೇಶವಾಗುವುದು. ಅಂಥ ಭಾರತ, ಅಂದರೆ ಹಿಂದೂಸ್ತಾನದ ನಿರ್ಮಾಣಕ್ಕಾಗಿ ಸಕಲರೂ ಪ್ರಯತ್ನಿಸೋಣ.

ಓಂ ಶಾಂತಿಃ ಶಾಂತಿಃ ಶಾಂತಿಃ.

ಜನಪದ ಧ್ವನಿ

ಇತ್ತೀಚಿಗೆ ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿಯು ತನ್ನ ೩ನೇ ಘಟಿಕೋತ್ಸವದಲ್ಲಿ ಕವಿ ಜಯಂತ ಕಾಯ್ಕಿಣಿ ಅವರು ನೀಡಿದ "ರಾಷ್ಟ್ರಭಾಷೆ ಹಿಂದಿ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳು ಭಾರತದ ಏಕತೆಯ ಸಂಕೇತಗಳಿದ್ದಂತೆ" ಎಂದು ವ್ಯಕ್ತಪಡಿಸಿದ ಹೇಳಿಕೆಗೆ ಪ್ರತಿಕ್ರಿಯೆಯಾಗಿ ಈ ಪತ್ರ.

ಮೊದಲಿಗೆ ಹಿಂದಿ ರಾಷ್ಟ್ರಭಾಷೆ ಅಲ್ಲ. ಹಾಗೆಂದು ನಮ್ಮ ಸಂವಿಧಾನದಲ್ಲಿಯೂ ನಮೂದಾಗಿಲ್ಲ. ತಿಳುವಳಿಕೆಯುಳ್ಳ ಕಾಯ್ಕಿಣಿಯಂತಹವರೇ ಹಿಂದಿ ನಮ್ಮ ರಾಷ್ಟ್ರಭಾಷೆ ಎಂಬ ತಪ್ಪು ಅಭಿಪ್ರಾಯ ಹೊಂದಿರುವಾಗ ಇನ್ನು ಜನ ಸಾಮಾನ್ಯರ ಬಗ್ಗೆ ಹೇಳುವುದೇನಿದೆ? ಇದು ಈ ಹಿಂದಿ ಸೇವಾ ಸಮಿತಿಗಳು ತಮ್ಮ ಪ್ರಚಾರಕ್ಕಾಗಿ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಬಿಂಬಿಸುತ್ತಿರುವ ಪರಿಯನ್ನು ಎತ್ತಿ ತೋರಿಸುತ್ತದೆ ಮತ್ತು ಜನಸಾಮಾನ್ಯರಲ್ಲಿ ಹಿಂದಿ ರಾಷ್ಟ್ರಭಾಷೆ, ಹಿಂದಿ ಬಲ್ಲವರು ಮಾತ್ರ ರಾಷ್ಟ್ರಭಕ್ತಿ ಹೊಂದಿರಲು ಸಾಧ್ಯ, ಇಡೀ ಭಾರತದ ಸಂಸ್ಕೃತಿಯೆಂದರೆ ಕೇವಲ ಹಿಂದಿ ಸಂಸ್ಕೃತಿ ಮಾತ್ರ, ಹಿಂದಿ ಬಲ್ಲವನಿಗೆ ಮಾತ್ರ ಸರ್ಕಾರದ ಎಲ್ಲಾ ಉದ್ಯಮಗಳಲ್ಲಿ ಕೆಲಸ ಲಭ್ಯ, ಹಿಂದಿ ಬಾರದಿರುವುದೇ ನಮ್ಮ ಜನಪ್ರತಿನಿಧಿಗಳಿಗೆ ರಾಷ್ಟ್ರೀಯ ವರ್ಚಸ್ಸುಗಳಿಸಲು ಸಾಧ್ಯವಾಗದಿರಲು ಕಾರಣ ಎಂಭ ಕಲ್ಪನೆ-ಭ್ರಮೆಯನ್ನು ಆಳವಾಗಿ ಬಿತ್ತಿದೆ. ಭಾಷೆ ಕೇವಲ ಸಂಪರ್ಕ ಸಾಧನವಲ್ಲ. ಅದು ಒಂದು ಪ್ರದೇಶದ ಆಚಾರ, ವಿಚಾರ, ನಡೆ, ನುಡಿಗಳ ಸಂಕೇತ.

ಯಾವುದೇ ಪ್ರಾಂತ್ಯಕ್ಕೆ ವಲಸೆ ಹೋಗುವವ ಆಯಾ ಪ್ರದೇಶದ ಭಾಷೆ ಕಲಿತು, ಅಲ್ಲಿನ ಸಂಸ್ಕೃತಿಯನ್ನು ಮನ್ನಿಸಿ, ಅಲ್ಲಿಯವರ ಜತೆ ಹೊಂದಾಣಿಕೆ ಮಾಡಿಕೊಳ್ಳುವ ಔದಾರ್ಯ-ಸಜ್ಜನಿಕೆ-ಕರ್ತವ್ಯವನ್ನು ಮೆರೆಯುವುದು ಮಾತ್ರ ಪರಸ್ಪರ ಸಂಸ್ಕೃತಿ ವಿನಿಮಯಕ್ಕೆ ಅವಕಾಶವೀಯುತ್ತದೆ. ಕನ್ನಡಿಗರು ಕನ್ನಡವನ್ನು ಪ್ರೀತಿಸಿ ಕನ್ನಡ ಪ್ರಾದೇಶಿಕತೆಯನ್ನು ಬಲಪಡಿಸುವುದು ಸಹ ನಮ್ಮ ರಾಷ್ಟ್ರವನ್ನು ಬಲಪಡಿಸಿದಂತೆ ಎಂಬುದನ್ನು ಅರಿಯಬೇಕಿದೆ.

ಒಂದು ಹಿಂದಿ ಪದ ಮಾತನಾಡದೆಯೇ ತಮ್ಮ ಯಾವುದೇ ಕೆಲಸ ಮಾಡಿಕೊಳ್ಳಲು, ಮಾಡಿಸಿಕೊಳ್ಳಲು, ಕೇಂದ್ರದಲ್ಲಿ ತಮ್ಮ ಶಕ್ತಿ ಪ್ರದರ್ಶಿಸಲು ತಾವು ಸಬಲರಾಗಿ ಈ ದೇಶದ ಆರ್ಥಿಕತೆಗೆ ಬೆನ್ನೆಲುಬಾಗಲು ಈ ಮೂಲಕ ತಮ್ಮ ರಾಷ್ಟ್ರಭಕ್ತಿಯನ್ನು ಕಟ್ಟಿಕೊಳ್ಳಲು ಸಮರ್ಥವಾಗಿರುವ ತಮಿಳುನಾಡನ್ನು ನಾವು ಗಮನಿಸಬೇಕಿದೆ.

– ಕಲ್ಯಾಣರಾಮನ್ ಚಂದ್ರಶೇಖರನ್
ಬೆಂಗಳೂರು

(ಸಾಭಾರ : ಪ್ರಜಾವಾಣಿ)

ಸ್ವಾತಂತ್ರ್ಯ ಚಳುವಳಿಯಲ್ಲಿ ಸುಂದರಲಾಲರ ಪ್ರವೇಶ

– ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

(ಕಳೆದ ಸಂಚಿಕೆಯಿಂದ ಮುಂದುವರೆದುದು – ಸಂ)

ಸುಂದರಲಾಲ್ ದೇವಸುಮನ್‌ರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಅವರ ಸ್ನೇಹಿತರು ಸಹ ಆಸಕ್ತಿ ವಹಿಸಲು ಪ್ರಾರಂಭಿಸಿದರು. ಈ ವಿಷಯ ಸುಂದರ್‌ಲಾಲರ ತಾಯಿಗೆ ಗೊತ್ತಾಯಿತು. ಅವರು ಚಿಂತಿತರಾದರು. ಆಕೆಯದು ಪರಂಪರೆಯಲ್ಲಿ ನಂಬಿಕೆ ಇಟ್ಟಂಥ ಮನಸ್ಸು. ಆದ್ದರಿಂದ ಗಡವಾಲದ ರಾಜನ ವಿರುದ್ಧ ಯಾವುದೇ ಚಳುವಳಿ ನೀತಿ ಬಾಹಿರವಾಗಿರಬೇಕೆಂಬುದು ಅವಳ ಕಲ್ಪನೆ. ಸುಂದರಲಾಲ್‌ರ ಸಂಬಂಧಿಗಳು ಕೂಡ ಚಿಂತಿತರಾದರು. ಸುಂದರಲಾಲರ ಮೇಲೆ .ಕಣ್ಗಾವಲನ್ನು ಇಡಲು ಪ್ರಾರಂಭಿಸಿದರು. ಆದರೆ ಬಹುಗುಣರವರು ಒಂದಲ್ಲ ಒಂದು ನೆಪಮಾಡಿ ಹಳ್ಳಿಯನ್ನು ಬಿಟ್ಟು ದೇವಸುಮನ್‌ರೊಂದಿಗೆ ಇರಲು ಹೋಗುತ್ತಿದ್ದರು. ೧೫ರ ವಯಸ್ಸಿನ ಹೊತ್ತಿಗೆ ಸುಂದರಲಾಲ್ ತಮ್ಮ ಬೇಸಿಗೆಯ ರಜೆಗಳನ್ನು ಮಸ್ಸೂರಿಯಲ್ಲಿ ದೇವಸುಮನ್‌ರೊಂದಿಗೆ ಕಳೆಯಲಾರಂಭಿಸಿದರು. ಆಗ ಸುಮನ್‌ರವರಿಗೆ ಮಸ್ಸೂರಿ ತೆಹರಿ ಗಡವಾಲ್ ಸ್ಥಾನಿಕ ಸಂಸ್ಥಾನದ ವಿರುದ್ಧ ಕೆಲಸ ಮಾಡುವ ಕೇಂದ್ರವಾಗಿತ್ತು. ಆ ವೇಳೆಯಲ್ಲಿ ದೇವಸುಮನರು ಕಾರ್ಮಿಕರಿಗಾಗಿ ಪ್ರಾರಂಭಿಸಿದ್ದ ರಾತ್ರಿ ಪಾಠಶಾಲೆಯಲ್ಲಿ ಸುಂದರಲಾಲ್ ಅಧ್ಯಾಪಕರಾಗಿ ಪಾಠ ಮಾಡಲು ಪ್ರಾರಂಭಿಸಿದರು. ಆದರೆ ದೇವಸುಮನ್ ತಮ್ಮ ಕ್ರಾಂತಿ ಕೆಲಸಕ್ಕಾಗಿ ಬೇರೆಡೆ ಹೋಗಬೇಕಾಗಿತ್ತು. ಆದ್ದರಿಂದ ಪಾಠಶಾಲೆ ನಡೆಸುವ ಕೆಲಸದ ಹೊಣೆ ಸುಂದರಲಾಲ್‌ರ ಮೇಲೆ ಬಿತ್ತು. ಆ ಜೀವನ ತುಂಬ ಪ್ರಚೋದನಕಾರಿಯಾಗಿತ್ತು. ಜೊತೆಗೆ ಸ್ವಾತಂತ್ರ್ಯ ಆಂದೋಲನದ ಸಾಹಿತ್ಯ ಅಧ್ಯಯನದಲ್ಲಿ ತೊಡಗಿಕೊಂಡಿದ್ದರು. ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಹಾಗೂ ಅರ್ಥವತ್ತಾದ ಅನುಭವಗಳನ್ನು ಪಡೆಯಲಾರಂಭಿಸಿದರು. ಆ ಸಾಂಸ್ಥಾನಿಕ ರಾಜ್ಯದ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡರಲ್ಲದೆ ಬಗೆಹರಿಸಬೇಕಾಗಿರುವ ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ತಿಳಿದುಕೊಂಡರು. ಸುಂದರಲಾಲ್‌ರ ಮಾರ್ಗದರ್ಶಕರಾಗಿದ್ದ ದೇವಸುಮನ್ ಗಾಂಧೀಯವರ ತತ್ವಗಳನ್ನು ಕೃತಿಯಲ್ಲಿ ಇಳಿಸಿದಂತವರಾಗಿದ್ದರು. ಆದ್ದರಿಂದ ರಾತ್ರಿ ಪಾಠಶಾಲೆ ಮೂಲಕ ದೇಶಸೇವೆ ಮಾಡುವ ಮುಖ್ಯ ಮಾಧ್ಯಮವನ್ನು ಸುಂದರಲಾಲ್ ಹೊಂದಿದ್ದರು. ಆದರೆ ಈ ಅರ್ಥಪೂರ್ಣ ಪರಿಸ್ಥಿತಿ ನಿಕಟ ಭವಿಷ್ಯದಲ್ಲಿಯೇ ಪ್ರಕ್ಷುಬ್ಧಗೊಂಡಿತು. ಸುಂದರ್‌ಲಾಲ್‌ರ ಅಣ್ಣ ತಾಯಿ ತೀರಿಕೊಂಡ ಸಮಾಚಾರವನ್ನು ತಂದಿದ್ದರು. ಆ ತಾಯಿ ಭಾಗೀರಥೀ ನದಿಯ ಪ್ರಕ್ಷುಬ್ಧ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದರು. ಅವರ ದೇಹ ಸಿಗಲೇ ಇಲ್ಲ. ದುಃಖಿತರಾದ ಸುಂದರಲಾಲ್ ತಮ್ಮ

ಅಣ್ಣನೊಂದಿಗೆ ತೆಹರಿಗೆ ಬಂದು ಅಂತ್ಯ ಸಂಸ್ಕಾರವನ್ನು ನಡೆಸಿದರು. ಅದರೆ ತೆಹರಿಗೆ ಹಿಂದಿರುಗುವ ಮುನ್ನ ಇನ್ನೂ ಹೆಚ್ಚಿನ ಆಘಾತಕಾರಿ ಸುದ್ಧಿ ಅವರಿಗೆ ಕಾದಿತ್ತು. ದೇವಸುಮನ್ ಬಂಧಿಸಲ್ಪಟ್ಟಿದ್ದರು. ದೇಶದ್ರೋಹದ ಅಪಾದನೆ ಮೇರೆಗೆ ತೆಹರಿ ಕಾರಾಗೃಹದಲ್ಲಿ ಸಂಕ್ಷಿಪ್ತ ವಿಚಾರಣೆ ನಡೆಸಿ ದೇವಸುಮನ್‌ರನ್ನು ಬಂಧಿಸಲಾಗಿತ್ತು. ಅಲ್ಲಿ ಅವರು ಚಿತ್ರಹಿಂಸೆಗೆ ಒಳಗಾಗಿದ್ದರು. ಇದೆಲ್ಲವನ್ನು ಸಹಿಸುವುದು ಸುಂದರಲಾಲ್‌ರಿಗೆ ಕಷ್ಟವೆನಿಸಿತ್ತು. ತಮ್ಮ ಕ್ರಿಯಾಶೀಲತೆ ಮತ್ತು ಮೌಲ್ಯಗಳನ್ನು ಅಲ್ಲಿಯ ಸರ್ಕಾರ ಯಾವ ರೀತಿ ಅರ್ಥಮಾಡಿಕೊಳ್ಳುತ್ತದೆ ಎಂಬುದನ್ನು ಸುಂದರಲಾಲ್ ತಿಳಿದುಕೊಂಡರು. ಆದರೆ ಸುಮನ್‌ರ ಬಂಧನ ಹಾಗೂ ಕಾರಾಗೃಹವಾಸ ಸುಂದರಲಾಲ್‌ರ ಚಟುವಟಿಕೆ ಯಾವುದೇ ನಿರ್ಬಂಧವಾಗಲಿಲ್ಲ. ಸುಂದರಲಾಲ್‌ರ ಸಹಾಯದಿಂದ ಹೊರಗಿನ ಜಗತ್ತಿಗೆ ತಮ್ಮ ಬಂಧನದ ಸಮಾಚಾರ ಮತ್ತು ಕಾರಾಗೃಹದಲ್ಲಿಯ ತಮ್ಮ ಸ್ಥಿತಿಗತಿಗಳ ಬಗ್ಗೆ ತಿಳಿಸಲು ಸುಮನ್ ಪ್ರಯತ್ನಿಸಿದರು. ಕಾರಾಗೃಹದಲ್ಲಿ ನಡೆದ ತಮ್ಮ ವಿಚಾರಣೆ ಸಂದರ್ಭಲ್ಲಿ ತಾವು ಕೊಟ್ಟ ಹೇಳಿಕೆಯನ್ನು ಗುಟ್ಟಾಗಿ ಹೊರ ಜಗತ್ತಿಗೆ ಕಳುಹಿಸಿದರು. ಆ ಹೇಳಿಕೆ ದಿಲ್ಲಿಯ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಗೊಂಡಿತು. ಹೀಗೆ ಸುಂದರಲಾಲ್‌ರವರು ದೇವಸುಮನ್‌ರ ಮೇಲಿನ ವ್ಯಾಜ್ಯವನ್ನು ಹೊರ ಜಗತ್ತಿಗೆ ತಿಳಿಸುವುದಕ್ಕೆ ಕಾರಣವಾಗಿದ್ದರು. ೧೭ನೇ ವಯಸ್ಸಿನಲಿಯೇ ಸುಂದರಲಾಲ್‌ರು ಕೂಡ ಬಂಧಿಸಲ್ಪಟ್ಟರು. ಅವರ ಈ ಬಂಧನ ಅವರ ಜೀವನಕ್ಕೊಂದು ತಿರುವು ತಂದುಕೊಟ್ಟಿತು. ಸುಂದರಲಾಲ್ ಅಹಿಂಸಾ ಕ್ಷೇತ್ರದಲ್ಲಿ ಕ್ರಿಯಾಶೀಲರಾದರು. ಅವರ ಅಹಿಂಸಾತ್ಮಕ ಕ್ರಿಯಾಶೀಲತೆ ಆರು ದಶಕಗಳ ಕಾಲವನ್ನು ಮೀರಿ ಇಂದಿಗೂ ಸಜೀವ ಉಳ್ಳಾದ್ದಾಗಿದೆ. ಇಂದಿಗೂ ಸುಂದರಲಾಲ್‌ರವರು ಶ್ರೀದೇವಸುಮನ್‌ರನ್ನು ಗುರು ಎಂದು ಕರೆಯುತ್ತಾರೆ. ಈ ಶಬ್ದಕ್ಕೆ ಸರಿಸಮಾನವಾದ ಶಬ್ದ ಇಂಗ್ಲೀಷ್ ಭಾಷೆಯಲ್ಲಿಯಲಿಲ್ಲ. ಸಾಮಾನ್ಯ ತಿಳುವಳಿಕೆ ಪ್ರಕಾರ ಗುರು ಎಂದರೆ ಖಾಸಗಿ ಅಥವಾ ಸರ್ಕಾರಿ ಶಾಲೆಯಲ್ಲಿ ಪಾಠಮಾಡುವ ಅಧ್ಯಾಪಕನೆಂದು ಅರ್ಥಮಾಡಲಾಗುತ್ತದೆ. ಆದರೆ ಗುರು ಎಂಬ ಶಬ್ದ ಎರಡು ಪ್ರತ್ಯಯಗಳಿಂದ ರಚಿತವಾಗಿದೆ. ಗು–ಎಂದರೆ ಕತ್ತಲೆ ಮತ್ತು ರು–ಎಂದರೆ ಹೋಗಲಾಡಿಸುವುದು. ಈ ಸಂಯುಕ್ತ ಶಬ್ದ ಕಲಿಸಲಾಗುವ ವಿಷಯ ಮತ್ತು ಕಲಿಯುವ ಮನುಷ್ಯ ಇಬ್ಬರಿಗೂ ಸಂಬಂಧಿಸಿದ್ದಾಗಿರುತ್ತದೆ. ಜ್ಞಾನವೇ ಪ್ರಕಾಶವನ್ನು ಕೊಡುತ್ತದೆ ಮತ್ತು ಬಿಡುಗಡೆ ಮಾಡುತ್ತದೆ. ಗುರು ಈ ಜ್ಞಾನ ಪ್ರಕಾರವನ್ನು ಪ್ರತಿನಿಧಿಸುತ್ತಾನೆ. ಮತ್ತು ತಾನು ಬೋಧಿಸುವುದನ್ನು ತನ್ನ ಜೀವನದ ಮೂಲಕ ಉದಾಹರಣೆಯಾಗಿರುತ್ತಾನೆ. ಶ್ರೀ ದೇವಸುಮನ್ ಓರ್ವ ರಾಜಕೀಯ ಕ್ರಿಯಾಶೀಲ ವ್ಯಕ್ತಿ. ಅವರು ಮಹಾತ್ಮ ಗಾಂಧೀಯವರ ಸ್ವರಾಜ್ಯಶಾಸ್ತ್ರವನ್ನು ಬೋಧಿಸುತ್ತಿದ್ದರಲ್ಲದೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಅವರು ಒಂದು ಗ್ರವಾಲಿ ಹಳ್ಳಿಯಲ್ಲಿ ಹುಟ್ಟಿದ್ದರು. ಗ್ರವಾಲ್ ಸ್ಥಾನೀಕ ಸಂಸ್ಥಾನದ ವಿರುದ್ಧ ಹೋರಾಟವನ್ನು ಸಂಘಟಿಸಿದ್ದರು. ಸುಂದರಲಾಲರಿಗೆ ದೇವಸುಮನರ್ ಪರಿಚಯವಾಗುವ ವೇಳೆಗೆ ಅವರು ಗಡವಾಲ್ ಪ್ರದೇಶದಲ್ಲಿಯ ಅತ್ಯಂತ ಪ್ರಸಿದ್ಧ ಸ್ವತಂತ್ರ್ಯ ಹೋರಾಟಗಾರರಾಗಿದ್ದರು. ಅವರ ಕೆಲಸ ತೆಹರಿ ರಾಜ್ಯ ಪ್ರಜಾಮಂಡಲದಲ್ಲಿ ಕೇಂದ್ರಿಕೃತವಾಗಿತ್ತು. ಆ ಮಂಡಲ ಡೆಹರಾಡೂನ್‌ನಲ್ಲಿತ್ತು. ಅಲ್ಲಿಂದ ದೇವಸುಮನ್ ಬೇರೆ ಬೇರೆ ಪಟ್ಟಣಗಳಗೆ ಹೋಗಿ

ಪ್ರಜಾಮಂಡಲದ ಶಾಖೆಗಳನ್ನು ಸಂಘಟಿಸುತ್ತಿದ್ದರು. ಸುಮನ್‌ರ ಉದ್ದೇಶ ಆ ಪ್ರದೇಶದ ರಾಜ ಮತ್ತು ಅಲ್ಲಿಯ ಪ್ರಜೆಗಳ ಮಧ್ಯೆ ಸಂಪರ್ಕವನ್ನು ಸಾಧಿಸಬೇಕೆಂಬುದೇ ಆಗಿತ್ತು ಹಾಗೂ ಒಪ್ಪಂದವನ್ನು ಏರ್ಪಡಿಸಬಹುದೇ ಎಂಬುದು ಸಹ ಆಗಿತ್ತು. ರಾಜನ ಸಹಾಯ ಮತ್ತು ಆತನ ಅಧಿಕಾರಿಗಳ ಸಹಾಯದಿಂದ ಪ್ರಜಾಮಂಡಲವು ಕೈಗೊಳ್ಳುವ ರಚನಾತ್ಮಕ ಕಾರ್ಯಗಳಿಗೆ ಬೆಂಬಲ ಪಡೆಯಬೇಕೆಂಬುದು ಸಹ ಆಗಿತ್ತು. ಈ ಸಂದರ್ಭದಲ್ಲಿ ದೇವಸುಮನ್‌ರು ಹಳ್ಳಿ ಮತ್ತು ಪಟ್ಟಣಗಳನ್ನು ಸುತ್ತುತ್ತಾ ತೆಹರಿಗೆ ಬಂದಾಗ ಅವರಿಗೆ ಯುವ ಸುಂದರಲಾಲರ ಭೇಟಿಯಾಗಿತ್ತು. ಆರ್ಥಿಕವಾಗಿ ಸ್ವತಂತ್ರ ಹಳ್ಳಿಗಳ ಅಭಿವೃದ್ಧಿಯ ಮೂಲಕ ಸ್ವದೇಶಿ ವಿಚಾರವನ್ನು ಅವರು ಹರಡುತ್ತಿದ್ದರು. ಅವರು ಗಾಂಧೀಯವರ ರಚನಾತ್ಮಕ ಕೆಲಸಕ್ಕೆ ಬದ್ಧವಾಗಿದ್ದರು. ೧೯೪೨ರ ಸುಮಾರಿನಲ್ಲಿ ದೇವಸುಮನ್‌ರು ಗ್ರವಾಲ್ ಬಳಿ ಬಂಧಿಸಲ್ಪಟ್ಟರು. ಅವರನ್ನು ಸ್ಥಾನೀಕ ಸಂಸ್ಥಾನದ ಪ್ರದೇಶದಿಂದ ಗಡಿಪಾರು ಮಾಡಲಾಯಿತು. ಆಗ ಅವರು ಇಂಗ್ಲೀಷ್ ಆಳ್ವಿಕೆಯ ಭಾರತದಲ್ಲಿ ತಮ್ಮ ಕೆಲಸವನ್ನು ಮುಂದುವರಿಸಿದರು. ಆಗ ಅವರನ್ನು ಬಂಧಿಸಿ ಆಗ್ರಾ ಕಾರಾಗೃಹದಲ್ಲಿ ಇಟ್ಟರು. ಕೆಲ ಸಮಯದ ನಂತರ ಆಗ್ರಾ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದ ನಂತರ ಅವರು ಪುನಃ ತೆಹರಿಗೆ ಹೋದರು. ಕೆಲ ಕಾಲದ ಕ್ರಾಂತಿ ಪೂರಕವಾದ ಕೆಲಸದ ನಂತರ ಪುನಃ ಅವರನ್ನು ಬಂಧಿಸಿ ತೆಹರಿ ಕಾರಾಗೃಹದಲ್ಲಿ ಇಡಲಾಯಿತು. ಸುಂದರಲಾಲ್‌ರು ಮಸ್ಸೂರಿಯಿಂದ ಬಂದ ಮೇಲೆ ಸ್ಥಳೀಯ ಆಸ್ಪತ್ರೆಯ ಒಂದು ಮನೆಯಲ್ಲಿ ವಾಸಿಸಲಾರಂಭಿಸಿದರು. ಅವರೊಂದಿಗೆ ಅವರ ಅಣ್ಣ ಸಹ ಇದ್ದರು. ಆತ ಆಸ್ಪತ್ರೆಯಲ್ಲಿ ಜಾಷಧ ತಯಾರಾಕನಾಗಿದ್ದ ಮತ್ತು ದೇವಸುಮನ್‌ರ ತಂಗಿಯನ್ನು ಮದುವೆಯಾಗಿದ್ದ. ಕಾರಾಗೃಹದ ವಾರ್ಡನ್ ಜತೆ ಸೌಹಾರ್ದಯುತ ಸಂಬಂಧ ಇದ್ದುದ್ದರಿಂದ ಆ ವಾರ್ಡನ್ ದೇವಸುಮನ್‌ರಿಗೆ ವರ್ತಮಾನ ಪತ್ರಗಳನ್ನು ಕೊಡಲು ಸುಂದರಲಾಲರಿಗೆ ಅನುಮತಿ ಕೊಟ್ಟ. ಕೆಲವೊಂದು ಸಲ ಪತ್ರಿಕೆಗಳೊಂದಿಗೆ ಪತ್ರವ್ಯವಹಾರದ ಕಾಗದಗಳನ್ನು ಸುಂದರಲಾಲ್ ಕೂಡುತ್ತಿದ್ದರು. ಈ ಸಂದರ್ಭದಲ್ಲಿ ದೇವಸುಮನ್ ತೆಹರಿ ಜೈಲಿನಲ್ಲಿ ನಡೆದ ಸಂಕ್ಷಿಪ್ತ ವಿಚಾರಣೆ ಸಂದರ್ಭದಲ್ಲಿ ಕೊಟ್ಟಿದ್ದ ಹೇಳಿಕೆ ಪ್ರತಿಯನ್ನು ಸುಂದರಲಾಲರಿಗೆ ಕೊಟ್ಟರು. ಆ ಹೇಳಿಕೆ ಗಾಂಧೀಜಿಯವರು ಸ್ವಾವಲಂಬನೆಯ ಮೂಲಕ ಪ್ರತಿಪಾದಿಸಿದ ಹಿಂದ್‌ಸ್ವರಾಜ್‌ದಲ್ಲಿಯ ತತ್ವಗಳ ಸಮರ್ಥನೆ ಆಗಿತ್ತು. ಅಂದಿನ ದಿನಗಳಲ್ಲಿ ಬೆಟ್ಟಗಳಲ್ಲಿ ನಿವಾಸಿಗಳಿಗೆ ಜೀವನದ ಅಗತ್ಯ ವಸ್ತುಗಳೆಲ್ಲವೂ ಹೃಷಿಕೇಶದಿಂದ ಹೆಸರಗತ್ತೆ ಮೇಲೆ ಬರುತ್ತಿದ್ದವು. ಸುಂದರಲಾಲ್ ಒಂದು ಯುಕ್ತಿಯ ಮೂಲಕ ಧೈರ್ಯದೊಂದಿಗೆ ದೇವಸುಮನ್‌ರ ಆ ಹೇಳಿಕೆಯನ್ನು ಒಂದು ಹೆಸರಗತ್ತೆಯ ಮೇಲಿನ ಆಸನದ ಕೆಳಗಿಟ್ಟು ಹೃಷಿಕೇಶದಲ್ಲಿಯ ತಮ್ಮ ಸ್ನೇಹಿತರಿಗೆ ತಲುಪುವಂತೆ ಮಾಡಿದರು. ಮುಂದೆ ಆ ಸ್ನೇಹಿತ ಹಿಂದೂಸ್ತಾನ್ ಟೈಮ್ಸ್‌ನ ಹಿಂದಿ ಆವೃತ್ತಿಯಲ್ಲಿ ಅದು ಪ್ರಕಟಗೊಳ್ಳುವಂತೆ ಮಾಡಿದ. ದೇವಸುಮನ್‌ರ ಬಂಧನ ಮತ್ತು ಕಾರಾಗೃಹದಲ್ಲಿ ಅವರಿಗೆ ಕೊಡಲಾದ ಚಿತ್ರಹಿಂಸೆ ಇತ್ಯಾದಿ ಸುದ್ದಿಗಳೆಲ್ಲ ಕೂಡಲೇ ಜನತೆಯಲ್ಲಿ ಹರಡಿ ಗ್ರವಾಲ್ ಸ್ಥಾನೀಯ ಸಂಸ್ಥಾನದ ವಿರುದ್ಧ ಮತ್ತು ಆ ರಾಜ್ಯದ ದಬ್ಬಾಳಿಕೆಯ ನೀತಿಯ ವಿರುದ್ಧ ಜನರ ಅಭಿಪ್ರಾಯ ರೂಪುಗೊಂಡಿತು. ಸ್ಥಾನೀಯ ಜನರು ತುಂಬ ಕೋಪಗೊಂಡರು. ರಾಜನ ವಿರೋಧಿಯ ಬಂಧನದ

ಸುದ್ದಿ ದಿಲ್ಲಿಯ ಪತ್ರಿಕೆಯಲ್ಲಿ ಪ್ರಕಟಗೊಂಡ ಬಗ್ಗೆಯು ರಾಜನ ಪ್ರಜೆಗಳು ಕೋಪಗೊಂಡರು. ಈ ಮಾಹಿತಿಯನ್ನು ರವಾನಿಸಿದ ಮೂಲದ ಬಗ್ಗೆ ತನಿಖೆ ನಡೆಯಿತು. ಆ ತನಿಖೆ ದೇವಸುಮನ್‌ರೊಂದಿಗೆ ಜೈಲಿನಲ್ಲಿ ಸಂಪರ್ಕಹೊಂದಿದ್ದ ವ್ಯಕ್ತಿಯ ಕಡೆಗೆ ಕೈಮಾಡಿ ತೋರಿಸಿತು. ಆ ವ್ಯಕ್ತಿ ಸುಂದರಲಾಲರೇ ಆದುದರಿಂದ ಅವರನ್ನು ತಕ್ಷಣವೇ ಬಂಧಿಸಲಾಯಿತು. ಆದರೆ ಅವರ ವಿರುದ್ಧ ಯಾವ ಸಾಕ್ಷ್ಯಾಧಾರ ಇರಲಿಲ್ಲ. ಸುಂದರಲಾಲ್ ಓದುತ್ತಿದ್ದ ಶಾಲೆಯ ಪ್ರಾಂಶುಪಾಲರು ಅವನಿಗೆ ಅವಕಾಶ ಕೊಡಬೇಕೆಂದು ಪ್ರಮಾಣ ಪತ್ರ ಕೊಟ್ಟರು. ಅಧಿಕಾರಿಗಳು ಒಲ್ಲದ ಮನಸ್ಸಿನಿಂದ ಒಪ್ಪಿದರು. ಆದರೆ ಸುಂದರಲಾಲ್ ಇದ್ದ ಸ್ಥಳದಲ್ಲಿ ಪೋಲಿಸ್ ಕಾವಲನ್ನು ಹಾಕಿದ್ದರು. ಪರೀಕ್ಷೆಯ ದಿನ ಆ ಪೋಲಿಸ್ ಸುಂದರಲಾಲ್‌ರನ್ನು ಶಾಲೆಗೆ ಕರೆದುಕೊಂಡು ಬಂದು ಒಪ್ಪಿಸಿದನು. ಪರೀಕ್ಷೆಗಳು ಮುಗಿಯುತ್ತಿದಂತೆ ಪೋಲೀಸರು ಸುಂದರಲಾಲರನ್ನು ಬಂಧಿಸಿ ತೆಹರಿಯಿಂದ ೪೦ ಕಿಲೋಮಿಟರ್ ದೂರದಲ್ಲಿಯ ನರೇಂದ್ರನಗರ ಎಂಬ ಊರಿನ ಪೋಲೀಸ್ ಠಾಣೆಯಲ್ಲಿ ಬಂಧಿಸಿಟ್ಟರು. ಅಲ್ಲಿ ಅವರು ಯಾವುದೇ ವಿಚಾರಣೆ ಇಲ್ಲದೆ ೫ ತಿಂಗಳು ಇರಬೇಕಾಯಿತು. ಅಲ್ಲಿ ಸುಂದರಲಾಲರನ್ನು ಸರಿಯಗಿ ನೋಡಿ ಕೂಂಡಿರಲಿಲ್ಲ. ಅನೇಕ ಬಾರಿ ಅವರ ಊಟದಲ್ಲಿ ಕಲ್ಲಿನ ಹರಳುಗಳು ಅಥವಾ ಸೀಮೆಯೆಣ್ಣೆ ಬೆರಕೆಯಾಗಿರುತ್ತಿತ್ತು. ಠಾಣೆಯಲ್ಲಿ ಪರಿಸರ ಸ್ವಚ್ಛವಾಗಿರಲಿಲ್ಲ. ಸುಮಾರು ೬೩ ದಿನಗಳವರೆಗೆ ಸ್ನಾನ ಮಾಡುವ ಅವಕಾಶವೇ ಸಿಕ್ಕಿರಲಿಲ್ಲ. ಅವರು ಅಸ್ವಸ್ಥಗೊಂಡರು. ಇತ್ತ ಶ್ರೀ ದೇವಸುಮನ್‌ರನ್ನು ತೆಹರಿ ಜೈಲಿಗೆ ವರ್ಗಾಯಿಸಲಾಗಿತ್ತು ಮತ್ತು ಅಲ್ಲಿ ಚಿತ್ರಹಿಂಸೆಗೆ ಒಳಪಡಿಸುತ್ತಿದರು. ಅಲ್ಲಿ ಅವರನ್ನು ಭಾರವಾದ ಬೇಡಿಗಳಿಂದ ಕಟ್ಟಿ ಆಗಾಗ್ಗೆ ಚಾವಟಿಯಿಂದ ಹೊಡೆಯುತ್ತಿದ್ದರು. ತಮ್ಮ ನಿಲುವನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಸುಮನ್‌ರು ಅಂತಿಮವಾಗಿ ಸ್ಥಾನೀಯ ಸಂಸ್ಥಾನದ ಜನರಿಗೆ ಮೂಲಭೂತ ಹಕ್ಕುಗಳನ್ನು ಕೊಡಬೇಕೆಂಬ ಉದ್ದೇಶದಿಂದ ಅನಿರ್ದಿಷ್ಟ ಕಾಲದ ಉಪವಾಸವನ್ನು ಪ್ರಾರಂಭಿಸಿದರು. ಅವರ ಬೇಡಿಕೆಗಳು ಮೂರು ಬಗೆಯಾಗಿದ್ದವು:

ಮೊದಲನೆಯದು – ಸ್ಥಾನೀಯ ಸರ್ಕಾರವು ಪ್ರಜಾಮಂಡಲವನ್ನು ಮಾನ್ಯ ಮಡಬೇಕು ಮತ್ತು ಸಂಸ್ಥಾನದಲ್ಲಿ ಅದು ಕೆಲಸ ಮಾಡಲು ಅವಕಾಶ ಕೊಡಬೇಕು. ಎರಡನೆಯದು – ತನ್ನ ವಿರುದ್ಧದ ಅಪಾದನೆಯನ್ನು ಸ್ವತಃ ರಾಜನೇ ಆಲಿಸ ಬೇಕು. ಮತ್ತು ಮೂರನೆಯದು – ಹೊರ ಜಗತ್ತಿನೊಂದಿಗೆ ಸಂಪರ್ಕ ಇಟ್ಟುಕೊಳ್ಳಲು ಅವಕಾಶ ಕೊಡಬೇಕು.

ಅವರ ಉಪವಾಸ ಪ್ರಾರಂಭವಾಗಿ ವಾರಗಳಾದವು, ತಿಂಗಳುಗಳಾದವು ಆದರೆ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಅವರು ಉಪವಾಸ ಮುಂದುವರಿಸಿದರು. ಅಂತಿಮವಾಗಿ ೮೪ ದಿನಗಳ ಉಪವಾಸದ ನಂತರ ಶ್ರೀ ದೇವಸುಮನ್ ೧೯೪೪ ಜುಲೈ ೨೫ರಂದು ಕೊನೆಯುಸಿರೆಳೆದರು. ಯಾವುದೇ ಮನ್ನಣೆ ಅಥವಾ ಯಾವುದೇ ಕಾರ್ಯಕ್ರಮ ನಡೆಸದೆ ಅವರ ಮೃತದೇಹವನ್ನು ಗೋಣಿಚೀಲದಲ್ಲಿ ಹಾಕಿ ಭಾಗೀರಥಿ ನದಿಯಲ್ಲಿ ಎಸೆದರು. ನರೇಂದ್ರನಗರದ ಪೋಲೀಸ್ ಠಾಣೆಯಲ್ಲಿದ್ದ ಸುಂದರಲಾಲರಿಗೆ ಶ್ರೀ ದೇವಸುಮನ್‌ರ ಸಾವಿನ ಸುದ್ದಿ ಗೊತ್ತಾಯಿತು. ಈ ಸುದ್ದಿ ಅವರನ್ನು ಬಹಳವಾಗಿ ಬಾಧಿಸಿತು. ಆಘಾತವಾಯಿತು.

ದುಃಖ ಪೀಡಿತರಾದರು. ದೇವಸುಮನ್‌ರವರು ಬಹು ಬೆಲೆ ತೆತ್ತಬೇಕಾದ ಉದ್ದೆ ಬದ್ಧರಾಗಿದುದ್ದನ್ನು ಸುಂದರಲಾಲ್ ಅರಿತರು. ೧೭ ವರ್ಷದ ಹದಿಹರೆಂ ಸುಂದರಲಾಲ್‌ರಿಗೆ ದೇವಸುಮನ್‌ರು ಹೊತ್ತಿಸಿದ್ದ ದೀವಟಿಗೆಯನ್ನು ಮುಂತೆಗೆ ಕೊಂಡು ಹೋಗುವ ಜವಾಬ್ದಾರಿ ತನ್ನ ಮೇಲೆ ಬಿಳುತ್ತಿದೆ ಎಂದು ಅನಿಸಲಾರಂಭಿಸಿತು ಪೋಲಿಸ್ ಠಾಣೆಯಲ್ಲಿ ಪ್ರತಿವಾರಕ್ಕೊಮ್ಮೆ ಮುಖ್ಯ ಪೋಲಿಸ್ ಅಧಿಕಾರಿ ಮುಂದೆ ಸುಂದರಲಾಲರನ್ನು ಕರೆದೊಯ್ಯಲಾಗುತ್ತಿತು. ಪ್ರತಿಸಲವೂ ಅದೇ ಪ್ರಶ್ನೆಯನ್ನು ಕೇಳಲಾಗುತ್ತಿತ್ತು. "ಈಗ ನಿನ್ನ ಮನೋಸ್ಥಿತಿ ಹೇಗಿದೆ"? ಅದಕ್ಕೆ ಉತ್ತರವೂ ಕೂಡ ಏಕ ಪ್ರಕಾರವಾಗಿರುತಿತ್ತು. "ನನ್ನನ್ನು ಠಾಣೆಗೆ ಕರೆದುಕೊಂಡು ಬಂದಾಗ ಯಾವ ಮನೋಸ್ಥಿತಿ ಇತ್ತೋ ಅದೇ ಮನೋಸ್ಥಿತಿ ಈಗಲೂ ಇದೆ" ಎಂಬುದಾಗಿರುತ್ತಿತ್ತು. ಅವರ ದೈಹಿಕ ಆರೋಗ್ಯ ಹದಗೆಟ್ಟಿತು. (ಮುಂದುವರಿಯುವುದು...)

ಸಂತಾಪ

ದೇಶದ ಸಂಗೀತ ಕ್ಷೇತ್ರದ ಮೇರುವ್ಯಕ್ತಿ, ಕರ್ನಾಟಕ ಪುತ್ರ, ಭಾರತ ರತ್ನ ಪಂಡಿತ್ ಭೀಮಸೇನ್ ಜೋಶಿಯವರ ನಿಧನಕ್ಕೆ ಜನಪದ ವಿಚಾರ ಶ್ರದ್ಧಾಂಜಲಿ ಅರ್ಪಿಸುತ್ತದೆ. ಭೀಮಸೇನ್ ಜೋಶಿಯವರು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳನ್ನು ಸಾಂಸ್ಕೃತಿಕವಾಗಿ ಬೆಸೆದ ಕೊಂಡಿಯಾಗಿದ್ದರು. ಗದುಗಿನ ರೋಣ ಗ್ರಾಮದಲ್ಲಿ ಹುಟ್ಟಿ ತಮ್ಮ ಸಂಗೀತ ಕಲಾ ಆರಾಧನೆ ಮೂಲಕ ಆಕಾಶದೆತ್ತರ ಬೆಳೆದು ಏಕಕಾಲಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರ ಜನತೆಯ ಹೃದಯವನ್ನು ಗೆದ್ದು ಜೊತೆಗೆ ತಮ್ಮ ಕಂಚಿನ ಕಂಠದ ಮೂಲಕ ಹಿಂದೂಸ್ತಾನಿ ಸಂಗೀತ ಆರಾಧಕರ ಮನಸ್ಸನ್ನು ಗೆದ್ದು, ೮೯ ವಸಂತಗಳ ಸಾರ್ಥಕ ಜೀವನನಡೆಸಿ, ದಿವಂಗತರಾದ ಭೀಮಸೇನ್ ಜೋಷಿಯವರ ನಿಧನಕ್ಕೆ ಜನಪದ ವಿಚಾರ ಶ್ರದ್ಧಾಂಜಲಿ ಅರ್ಪಿಸುತ್ತದೆ.

* * *

ಕರ್ನಾಟಕ ಖಾದಿ ಗ್ರಾಮೋದ್ಯೋಗ ಕ್ಷೇತ್ರದಲ್ಲಿ ೫೮ ವರ್ಷಕಾಲ ನಿಷ್ಠೆ, ಶ್ರದ್ಧೆ ಮತ್ತು ಸಮರ್ಪಣಾ ಭಾವದಿಂದ ಅರ್ಪಿಸಿಕೊಂಡಿದ್ದ ಟಿ ಕೃಷ್ಣಮೂರ್ತಿಯವರು ಕಳೆದ ೧೯-೧೨-೧೦ ರಂದು ಬೆಂಗಳೂರಿನಲ್ಲಿ ನಿಧನರಾದರು. ಗಾಂಧೀ ವಿಚಾರ ಅರ್ಥಶಾಸ್ತ್ರಜ್ಞರಾಗಿದ್ದ ಜೆ.ಸಿ.ಕುಮಾರಪ್ಪನವರ ಶಿಷ್ಯರಾಗಿದ್ದರು. ಖಾದಿ ಗ್ರಾಮೋದ್ಯೋಗ ಆಯೋಗದ ಪ್ರಾದೇಶಿಕ ನಿರ್ದೇಶಕರಾಗಿ ಜೆ.ಸಿ ಕುಮಾರಪ್ಪ ಸ್ಮಾರಕ ಸಾರ್ವಜನಿಕ ದತ್ತಿಯ ವ್ಯವಸ್ಥಾಪಕ ಧರ್ಮದರ್ಶಿಯಾಗಿ ಮತ್ತು ಕರ್ನಾಟಕ ಸರ್ವೋದಯ ಸಂಘದ ಸದಸ್ಯರಾಗಿ ಕೆಲಸಮಾಡಿದ್ದರು. ದೇಶ ವಿದೇಶಗಳಲ್ಲಿ ಪ್ರವಾಸಮಾಡಿ ಗಾಂಧೀ ಸಿದ್ಧಾಂತ ಮತ್ತು ಅರ್ಥಶಾಸ್ತ್ರವನ್ನು ಪ್ರಚಾರ ಮಾಡಿದ್ದರು. ಖಾದಿ ಆಯೋಗದಿಂದ ನಿವೃತ್ತರಾದ ಮೇಲೆ ಬೆಂಗಳೂರಿನ ಜಯನಗರದ ತಮ್ಮ ನಿವಾಸದಲ್ಲಿ ಖಾದಿಭಂಡಾರವನ್ನು ನಡೆಸಿದರು. ಈ ಧೀಮಂತ ವ್ಯಕ್ತಿಯ ನಿಧನಕ್ಕೆ ಜನಪದ ವಿಚಾರ ತನ್ನ ಶ್ರದ್ಧಾಂಜಲಿ ಅರ್ಪಿಸುತ್ತದೆ.

೨

ಯುವಕರ ಸ್ವಾಧ್ಯಾಯ

– ದಾದಾ ಧರ್ಮಾಧಿಕಾರಿ

ಯುವಕರು ವಿಚಾರ ಮಾಡಬೇಕು. ಅದಕ್ಕಾಗಿಯೇ ಇಂಥ ಶಿಬಿರಗಳು ನಡೆಯುತ್ತವೆ. ಸ್ವಾಧ್ಯಾಯ, ಶ್ರಮ ಮತ್ತು ಸೇವೆ – ಈ ಮೂರೂ ಸಂಬಂಧಿಸದ್ದಾಗಿರಬೇಕು ಎಂಬುದೇ ಪ್ರಶ್ನೆ. ವೇದಗಳಲ್ಲಿ ಒಂದು ಆದೇಶವಿದೆ, ವಿಧಾನವಿದೆ -- "ಸ್ವಾಧ್ಯಾಯೋ ಧ್ಯೇತವ್ಯಃ" ಅಂದರೆ ದಿನಾಲೂ ಏನಾದರೂ ಸ್ವಾಧ್ಯಾಯ ಮಾಡಬೇಕು. ದಿನಾಲೂ ಏನಾದರೂ ಸ್ವಾಧ್ಯಾಯವನ್ನಂತೂ ಮಾಡಬೇಕು, ಆದರೆ ಏತಕ್ಕಾಗಿ ಮಾಡಬೇಕು? ಅದರಿಂದೇನು ಪ್ರಯೋಜನ? ವ್ಯರ್ಥವಾಗಿ ಸ್ವಾಧ್ಯಾಯ ಮಾಡಬೇಕೆ? ಏನನ್ನಾದರೂ ಜ್ಞಾನ ಪ್ರಾಪ್ತ ಮಾಡಿಕೊಳ್ಳಬೇಕಾಗಿದ್ದರೆ ಸ್ವಾಧ್ಯಾಯವನ್ನು ಮಾಡಬೇಕು. ಆದರೆ ಆ ಜ್ಞಾನ ಏತಕ್ಕಾಗಿ ಬೇಕು?

ಆತ್ಮಜ್ಞಾನದ ಹೊರತಾಗಿ ಉಳಿದೆಲ್ಲ ಪ್ರಕಾರದ ಜ್ಞಾನಕ್ಕಾಗಿ ಪ್ರಯೋಜನ ಬೇಕು. ಉದ್ದೇಶ ಬೇಕು. ಹಾಗಿಲ್ಲವಾದರೆ ಏತಕ್ಕಾಗಿ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆತ್ಮಜ್ಞಾನಕ್ಕಾಗಿ ಉದ್ದೇಶ ಅವಶ್ಯಕವಾಗಿಲ್ಲ. ಏಕೆಂದರೆ ಆತ್ಮಜ್ಞಾನದ ಸ್ವರೂಪವೇ ಭಿನ್ನ. ಅದರ ಸ್ವರೂಪ ಏನೆಂಬುದರ ಬಗ್ಗೆ ಇಲ್ಲಿ ಚರ್ಚಿಸುವುದಿಲ್ಲ. ಅಲ್ಲದೆ ನನಗೆ ಗೊತ್ತೂ ಇಲ್ಲ. ಆದರೆ ಬೇರೆ ಯಾವುದೇ ಜ್ಞಾನ ಪಡೆಯುವುದಾಗಲೀ ಅದಕ್ಕಾಗಿ ಯಾವುದಾದರೂ ಪ್ರಯೋಜನ ಇರಬೇಕಾಗುತ್ತದೆ. ಇಂದು ಇಡೀ ಸಂಸಾರದಲ್ಲಿ ಒಂದು ಉತ್ಕಂಠತೆ ಇದೆ. ಒಂದು ತಲ್ಲಣ ಇದೆ ಮತ್ತು ತಿಳಿಯಬೇಕೆಂಬ ಇಚ್ಛೆ ಇದೆ. ಮನಸ್ಸಿನಲ್ಲಿ ಕುದಿತ ಇದ್ದು, ತಿಳಿಯ ಬೇಕೆಂಬ ಬಗ್ಗೆ ತೀವ್ರ ಇಚ್ಛೆ ಇದ್ದಲ್ಲಿ ಉತ್ಕಂಠತೆ ಹುಟ್ಟುತ್ತದೆ. ಉತ್ಕಂಠತೆಯಲ್ಲಿ ಪ್ರತೀಕ್ಷೆ ಇದೆ. ಇಂದು ಸಂಸಾರದ ಪ್ರತಿಯೋರ್ವ ಮನುಷ್ಯನಿಗೆ ಯಾವುದಾದರೂ ಪ್ರತೀಕ್ಷೆ ಇದೆ. ಅವನು ಯಾವುದಾದರೊಂದು ವಿಷಯದ ಪ್ರತೀಕ್ಷೆಯಲ್ಲಿದ್ದಾನೆ. ಯಾವುದಾದರೊಂದು ವಿಷಯದ ಹುಡುಕಾಟದಲ್ಲಿದ್ದಾನೆ. ಅದು ಯಾವ ವಿಷಯದ ಹುಡುಕಾಟ?

ಅದು ಜೀವನದ ಕುರಿತಾದ ಹೋರಾಟ. ಇಂದಿನ ಯುವಕನಿಗೆ ಬದುಕಬೇಕಿದೆ. ಅವನು ಬದುಕ ಬಯಸುತ್ತಾನೆ ಮತ್ತು ಆನಂದದಿಂದ ಬದುಕ ಬಯಸುತ್ತಾನೆ. ಮನಬಿಚ್ಚಿ ಬದುಕ ಬಯಸುತ್ತಾನೆ. ತನ್ನ ಇಚ್ಛಾನುಸಾರ ಬದುಕ ಬಯಸುತ್ತಾನೆ. ಯಾವ ರೀತಿ ಜಿಂಕೆಯ ಮರಿ ನೆಗೆಯುತ್ತದೆಯೊ ಅದೇ ರೀತಿ ಬದುಕ ಬೇಕೆಂಬ ಆಕಾಂಕ್ಷೆ ಇಂದಿನ ಯುವಕನ ಮನಸ್ಸಿನಲ್ಲಿದೆ. ಮತ್ತು ಆ ರೀತಿ ಬದುಕಲು ಅವನಿಗೆ ಸಾಧ್ಯವಾಗುತ್ತಿಲ್ಲ. ಇಂದಿನ ಸಂಸಾರದಲ್ಲಿ ಆ ರೀತಿಯ ಬದುಕಿಗಾಗಿ ಅನುಕೂಲತೆ ಇಲ್ಲ. ಯಾರು ಅತ್ಯಂತ ಸುಖೀ ಜನರಿದ್ದಾರೋ, ಸಂಪನ್ನರಿದ್ದಾರೋ, ಯಾರ ಬಳಿ ವೈಭವವಿದೆಯೋ, ಅವರಿಗೂ ಕೂಡ ಹಾಗೆ ಬದುಕುವ ಅನುಕೂಲತೆಗಳಿಲ್ಲ. ಸಾಲದ್ದಕ್ಕೆ ನಮ್ಮ ದೇಶದಲ್ಲಿ ಬಡತನವಿದೆ, ಹಸಿವಿದೆ.

ಅಂದ ಮೇಲೆ ಈ ದೇಶದಲ್ಲಿ ಆ ರೀತಿ ಬದುಕುವ ಅನುಕೂಲತೆಗಳಿಲ್ಲ ಎಂಬ ಬಗ್ಗೆ ಯಾವ ದೊಡ್ಡ ಆಶ್ಚರ್ಯವಿಲ್ಲ.

ಈ ಬದುಕು ಏನು – ಇದು ಪ್ರಶ್ನೆ. ಬದುಕುವುದೆಂದರೆ ಪ್ರತ್ಯಕ್ಷ ಅನುಭವ ಪಡೆಯುವುದು. ಇದಕ್ಕೆ ಇಂಗ್ಲೀಷ್‌ನಲ್ಲಿ ಅಟ್ ಫಸ್ಟ್ ಹ್ಯಾಂಡ್ ಎನ್ನುತ್ತಾರೆ. 'ಅಟ್ ಫಸ್ಟ್ ಹ್ಯಾಂಡ್'; ಸೆಕೆಂಡ್ ಹ್ಯಾಂಡ್ ಅಲ್ಲ, ಎರಡನೆಯವರಂತಲ್ಲ. ಭಗವಂತ ತನಗೆ ಸಾಕ್ಷಾತ್ ಕಾಣಲಿ ಎಂದು ಭಕ್ತ ಬಯಸುತ್ತಾನೆ. ಊಟ ಮಾಡಿದರೆ ರುಚಿ ತನ್ನದೇ ನಾಲಿಗೆಗೆ ಬರಬೇಕು. ಇದಕ್ಕೆ ಅನುಭವ ಎನ್ನುತ್ತಾರೆ. ಜೀವನದ ಪ್ರತ್ಯಕ್ಷ ಅನುಭವ ಬರಬೇಕು. ಅದು ಇಂದು ಸಂಸಾರದಲ್ಲಿ ಉಳಿದಿಲ್ಲ. ಸುಖೀ ರಾಷ್ಟ್ರಗಳ ಜನರಿಗೂ ಕೂಡ ಆ ಅದೃಷ್ಟವಿಲ್ಲ. ಇನ್ನು ದುಖೀಃ ರಾಷ್ಟ್ರಗಳ ಜನರಿಗೆ ಇಲ್ಲವೇ ಇಲ್ಲ.

ಪ್ರತ್ಯಕ್ಷ ಜೀವನದ ಅರ್ಥವೇನು? ಪಶ್ಚಿಮದ ಅನೇಕ ವಿಚಾರವಂತರ ಪ್ರಕಾರ ಪ್ರಾಥಮಿಕ ಸ್ಥಿತಿಯೇ ಮನುಷ್ಯನ ಜೀವನದ ಪ್ರತ್ಯಕ್ಷ ಜೀವನ. ಆದಿವಾಸಿಗಳು, ಕಾಡಿನಲ್ಲಿ ವಾಸಿಸುವರು, ಪರ್ವತಗಳಲ್ಲಿ ವಾಸಿಸುವರು ಯಾವ ಜೀವನ ನಡೆಸುತ್ತಾರೊ ಮತ್ತು ಯಾರಿಗೆ ಸಭ್ಯತೆ ಅಥವಾ ನಾಗರೀಕತೆಯ ಸಂಬಂಧ ಇಲ್ಲವೊ ಅಂಥ ಜನರ ಜೀವನ ಪ್ರತ್ಯಕ್ಷ ಜೀವನ. ಕೆಲವು ಜನರು ಇದಕ್ಕೂ ಮುಂದೆ ಹೋಗುತ್ತಾರೆ. ಅವರ ಪ್ರಕಾರ ಪಶು ಜೀವನ ಪ್ರತ್ಯಕ್ಷ ಜೀವನ. ಅದೇ ನಿಜವಾದ ಜೀವನ. ಆದಿವಾಸಿಗಳ ಅಥವಾ ಪ್ರಾಥಮಿಕ ಸ್ಥಿತಿಯ ಜನರ ಜೀವನ ಪ್ರತ್ಯಕ್ಷ ಜೀವನವೇನೋ ಹೌದು ಆದರೆ ಅದು ಕೇವಲ ಮೋಹದ ಜೀವನ. ಸಮಾಜಶಾಸ್ತ್ರಿಗಳ ಹೇಳಿಕೆಯ ಪ್ರಕಾರ ಯಾವುದನ್ನೂ ಪ್ರತ್ಯಕ್ಷ ಜೀವನವೆಂದು ತಿಳಿಯಲಾಗುತ್ತದೋ ಅದರಲ್ಲಿ ಆ ಪ್ರಾಥಮಿಕ ಮನುಷ್ಯ 'ಫೈಟ್ಸ್ ಲೈಫ್ ವಿತ್ ಡಿಸಾಯರ್ಸ್' – ತನ್ನ ಕಾಮನೆಗಳ ಮೂಲಕ ಅವನು ಜೀವನದೊಂದಿಗೆ ಸಂಘರ್ಷ ಮಾಡುತ್ತಾನೆ, ಹೋರಾಟ ಮಾಡುತ್ತಾನೆ. ಈ ಜೀವನದಲ್ಲಿ ಹೋರಾಟವಿರುತ್ತದೆ. ಹೋರಾಟದಲ್ಲಿ ಸಂತೋಷ ಕೂಡ ಇರುತ್ತದೆ. ಆದರೆ ಅದೇನು ಪ್ರತ್ಯಕ್ಷ ಜೀವನವಲ್ಲ. ಎಲ್ಲಿ ಸಂಘರ್ಷವಿದೆಯೋ, ವಿರೋಧವಿದೆಯೋ, ಮುಖಾಮುಖಿಯಿದೆಯೋ ಅಲ್ಲಿ ಜೀವನದ ಆನಂದವಿಲ್ಲ. ಆದರೆ ಕೆಲವು ವಿಚಾರಕರು ಇದನ್ನು ಒಪ್ಪಿದ್ದಾರೆ.

ಇಂಥ ವಿಚಾರವಂತರ ಪರಂಪರೆಯೊಂದಿಗೆ ಅವರ ಸಾಹಿತ್ಯ ಇಂದು ಜಗತ್ತಿನೆಲ್ಲಡೆಯಲ್ಲಿ ಪ್ರಚಲಿತವಾಗಿದೆ. ಈ ಹಿಪ್ಪಿಗಳೇನಿದ್ದಾರೆ ಯಾರನ್ನು 'ಬಿಟನಿಕ್ಸ್', 'ಬಿಟ್‌ಜನರೇಶನ್' ಎಂದು ಕರೆಯುತ್ತೇವೋ ಅವರಿಗೆ ಏಂಜಲ್ಸ್ ಆಫ್ ಹೆಲ್ – ನರಕದ ದೂತ ಇತ್ಯಾದಿ ಹೆಸರನ್ನು ಇಡಲಾಗಿದೆ. ಆ ತರುಣರ ಸಾಹಿತ್ಯ ಇದಾಗಿದೆ. ಅವರಿಗೆ ಕೇವಲ ಕೆಟ್ಟ ಹೆಸರನ್ನು ತರುವುದರಿಂದ ಏನೂ ಆಗುವುದಿಲ್ಲ. ಇಲ್ಲಿ ಗಮನಿಸ ಬೇಕಾದುದು ಅವರ ಆವಿರ್ಭಾವ ಏಕಾಯಿತೆಂದು? ಅದರ ಮೂಲದಲ್ಲಿ ಪ್ರತ್ಯಕ್ಷ ಜೀವನದ ಆಕಾಂಕ್ಷೆ ಇದೆ. ಈ ಚರ್ಚೆ ಅನೇಕ ಬಾರಿಯಾಗಿದೆ. ಅದಕ್ಕಾಗಿ ನಾನು ಇದೆಲ್ಲವನ್ನು ಹೇಳುತ್ತಿದ್ದೇನೆ. ಗಾಂಧೀ, ವಿನೋಬಾ, ರೂಸೋ ಮುಂತಾದ ದಾರ್ಶನಿಕರು ಪುನಃ ನಾವು ಪ್ರಕೃತಿಯ ಕಡೆಗೆ ತಿರುಗಬೇಕಿದೆ – 'ಬ್ಯಾಕ್ ಟು ನೇಚರ್' ಎಂದು ಹೇಳಿದ್ದಾರೆ. ನಾವು ಸಂಸ್ಕೃತಿಯ ಹೆಸರಿನಲ್ಲಿ ಕೃತ್ರಿಮ ಮತ್ತು ತೋರಿಕೆಯ ಜೀವನದತ್ತ ಹರಿದು ಹೋಗುತ್ತೇವೆ. ಆದ್ದರಿಂದ ನಿಸರ್ಗದ ಕಡೆ ಹಿಂದಿರುಗಬೇಕು

ಇದು ಅವರ ಆಶಯ. ರೂಸೋ ಶಿಕ್ಷಣದ ಮೇಲೆ ಒಂದು ಬಹುಸುಂದರ ಪುಸ್ತಕ ಬರೆದಿದ್ದಾನೆ. ಅದು ಪ್ರಸಿದ್ಧ ಪುಸ್ತಕ 'ಎಮಿಲಿ'. ಈ ಪುಸ್ತಕದ ಮೇಲೆ ವಿನೋಬಾ ಭಾಷ್ಯ ಬರೆದಿದ್ದಾರೆ. ಅದರಲ್ಲಿ ಅವರು ಈ ಪುಸ್ತಕದ ಬಗ್ಗೆ ಬಹುವಾಗಿ ಗುಣಗಾನ ಮಾಡಿದ್ದಾರೆ. ಥಾಮಸ್ ಆಫ್ಸ್ ಎಂಬ ಇನ್ನೊಬ್ಬ ದಾರ್ಶನಿಕನ ಅಭಿಪ್ರಾಯವೂ ಕೂಡ ಇದೆ ಆಗಿದೆ. 'ಬ್ಯಾಕ್ ಟು ನೇಚರ್' ನಿಸರ್ಗದತ್ತ ಹೋಗುವುದೆ ಪ್ರತ್ಯಕ್ಷ ಜೀವನ ಎಂದು ಹೇಳುವವರ ಸಂಪ್ರದಾಯವಿದೆ. ಆದರೆ ನಿಸರ್ಗಾನುಗಮನ ಎಂದರೆ ಪ್ರಕೃತಿಯ ಹಿಂದೆ ನಡೆಯುವುದು, ನಿಸರ್ಗದ ಅನುಸಾರ ವ್ಯವಹಾರ ಮಾಡುವುದು. ಮನುಷ್ಯನ ಪ್ರತ್ಯಕ್ಷ ಜೀವನವೆಂಬ ಭ್ರಮೆಯಲ್ಲಿ ನಾವು ಇರಕೂಡದು.

ಇತ್ತೀಚಿನ ದಿನಗಳಲ್ಲಿ ತತ್ವಜ್ಞಾನಿಗಳ ಎರಡನೆ ಬಗೆಯ ಸಂಪ್ರದಾಯ ಚಾಲ್ತಿಗೆ ಬಂದಿದೆ. ಅದರ ಹೆಸರು ಅಸ್ತಿತ್ವವಾದ. ಇದರ ಸಂಬಂಧ ಕೂಡ ಇಂದಿನ ಯುವಕರ ಆಂದೋಲನ ಜೊತೆಗಿದೆ. ಸಂಪ್ರದಾಯದ ಪ್ರಣೀತರು ಅನೇಕರು ಆಗಿಹೋದರು. ಇಂದು ಇದರ ಮುಖ್ಯ ಪ್ರವಕ್ತ ಸಾರ್ತ್ರ. ಅವನ ಹೇಳಿಕೆ ಏನು? 'ಮನುಷ್ಯ ಯಾವ ರೀತಿ ತನ್ನನ್ನು ರೂಪಿಸಿಕೊಳ್ಳುತ್ತಾನೋ ಅದೇ ರೀತಿ ಆಗುತ್ತಾನೆ". ಇದು ಮೂಲ ಸೂತ್ರ. ಅಂದರೆ ಅವನಿಗೆ ತನ್ನದೇ ಆದ ಮಾನಸಿಕ ಜೀವನವಿದೆ – ಶಾರೀರಿಕ, ನೈಸರ್ಗಿಕ ಜೀವನದಿಂದ ಭಿನ್ನವಾದುದು. ಅಂದರೆ ಪ್ರಾಥಮಿಕ ಜೀವನ ಪ್ರತ್ಯಕ್ಷ ಜೀವನವಲ್ಲ. ಎರಡನೆಯ ಜೀವನ ಆಧುನಿಕ ಸುಸಂಸ್ಕೃತ ಮನುಷ್ಯನದು. ಅವನ ಬಗ್ಗೆ ಸಮಾಜಶಾಸ್ತ್ರಿಗಳು ಹೀಗೆ ಬರೆದಿದ್ದಾರೆ – ಆಧುನಿಕ ಮನುಷ್ಯ, ಜೀವನದ ಬಗ್ಗೆ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳುತ್ತಾನೆ. ಒಂದು ಮಾತನ್ನು ಗಮನದಲ್ಲಿಡು, ಪ್ರತಿಯೊಂದು ಪ್ರಶ್ನೆಯೂ ಜಿಜ್ಞಾಸೆಯ ದ್ಯೋತಕವಾಗಿರುವುದಿಲ್ಲ. ನಾವು ಕೇಳುವ ಅನೇಕ ಪ್ರಶ್ನೆಗಳ ಸಂಬಂಧ ನಮ್ಮ ಜೀವನದೊಂದಿಗೆ ವಿಶೇಷ ಸಂಬಂಧ ಇಟ್ಟುಕೊಂಡಿರುವುದಿಲ್ಲ ಮತ್ತು ಅದು ನಮ್ಮ ಮನಸ್ಸಿನಾಳದಿಂದಲೂ ಬಂದಿರುವುದಿಲ್ಲ. ಬಹಳಷ್ಟು ಪ್ರಶ್ನೆಗಳನ್ನು ಬೇರೆಡೆಯಿಂದ ಎರವಲಾಗಿ ಪಡೆದಂಥವಾಗಿರುತ್ತವೆ. ಕೆಲವು ಪತ್ರಿಕೆಗಳಿಂದ ಹೊಳೆದರೆ, ಇನ್ನು ಕೆಲವು ಪುಸ್ತಕಗಳಿಂದ ಹೊಳೆಯುತ್ತವೆ. ಮತ್ತೆ ಇನ್ನು ಕೆಲವು ಬೇರೆಯವರಿಂದ ಸೂಚಿಸಲ್ಪಟ್ಟವಾಗಿರುತ್ತವೆ. ಆ ಪ್ರಶ್ನೆಗಳ ಹಿಂದೆ ಜಿಜ್ಞಾಸೆಯೂ ಇರುವುದಿಲ್ಲ, ಗಂಭೀರತೆಯೂ ಇರುವುದಿಲ್ಲ. ಜಿಜ್ಞಾಸೆಗಾಗಿ ಗಾಂಭೀರ್ಯ ಬೇಕು ಅದಕ್ಕಾಗಿ ನಾನು ಉತ್ಕಂಠತೆ ಎಂಬ ಶಬ್ದ ಪ್ರಯೋಗ ಮಾಡಿದ್ದೇನೆ. ಜಿಜ್ಞಾಸೆಯ ಹಿಂದೆ ತೀವ್ರತೆ ಬೇಕು, ಮನಸ್ಸಿನ ತಲ್ಲಣ ಬೇಕು. ಆದರೆ ಈ ಆಧುನಿಕ ಮನುಷ್ಯ ಕೇವಲ ಪ್ರಶ್ನೆ ಮಾಡುತ್ತಾನೆ. ಆ ಪ್ರಶ್ನೆಗಳಿಗೆ ಯಾವ ಉತ್ತರ ಸಿಗುವುದಿಲ್ಲ. ಏಕೆಂದರೆ ಅವುಗಳಿಗೆ ಉತ್ತರ ಸಂಸಾರದಲ್ಲಿಲ್ಲ, ಜೀವನದಲ್ಲಿವೆ. ಮನುಷ್ಯನ ಪ್ರಶ್ನೆಗಳಿಗೆ ದೇವರು ಎಲ್ಲದರಲ್ಲಿ ಉತ್ತರ ಬರೆದಿಟ್ಟಿಲ್ಲ. ಪ್ರಶ್ನೆಗಳು ನಮ್ಮದಾಗಿದ್ದರೆ ಉತ್ತರ ಕೂಡ ನಮ್ಮದಾಗಿಯೇ ಇರಬೇಕು. ಈ ಕಾರಣದಿಂದಾಗಿಯೇ ಮನುಷ್ಯನ ಜೀವನದಲ್ಲಿ ಸಿಹಿ ಇಲ್ಲ. ಪ್ರತ್ಯಕ್ಷ ಜೀವನದ ಆನಂದ ಆಧುನಿಕ ಮನುಷ್ಯನ ಜೀವನದಲ್ಲಿಲ್ಲ. ಆ ಆನಂದ ಹೇಗೆ ಬರಬೇಕೆಂಬುದೇ ಪ್ರಶ್ನೆ. ಆದ್ದರಿಂದ ಇನ್ನು ಮುಂದೆ ನಾನು ಭಾವನಾತ್ಮಕ ಭೂಮಿಕೆಯಿಂದ ಕೇವಲ ಸಾತ್ವಿಕ ಭೂಮಿಕೆಯಿಂದ ಮಾತನಾಡುವುದಿಲ್ಲ.

ಜೀವನದಲ್ಲಿ ವಿರೋಧ ಏಕೆ ಬರುತ್ತದೆ? ಮನುಷ್ಯನಿಗೆ ಬೇಕಿರುವುದೇನು?

ಪ್ರತಿಯೊಬ್ಬರೂ ತಮ್ಮ ಇಚ್ಛಾನುಸಾರ ನಡೆಯಬೇಕು. ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಸಾದ ಮನುಷ್ಯನವರೆಗೆ ನಿಯಂತ್ರಣ ಇರಕೂಡದು, ವಿರೋಧ ಇರಕೂಡದು, ಆವರಣ ಇರಕೂಡದು ಎಂಬುದೇ ಆಗಿದೆ. ಜನರು ಇದನ್ನು ಸ್ವಚ್ಛಂದತೆ, ಮನಸೋಇಚ್ಛೆ ಜೀವನ ಎಂದರು. ಆದರೆ ಇದನ್ನು ಅನಿಷ್ಟವೆಂದು ತಿಳಿಯಲು ಯಾವ ಕಾರಣವಿಲ್ಲ. ಇದರಲ್ಲಿ ಅನುಚಿತ ಯಾವುದೂ ಇಲ್ಲ. ಒಂದು ವೇಳೆ ಮನುಷ್ಯ ತನ್ನ ಇಚ್ಛೆಯಂತೆ ಬದುಕಬೇಕು, ಮುಕ್ತ ಜೀವನ ನಡೆಸಬೇಕು ಎಂದು ಅವನಿಗೆ ಅನಿಸಿದರೆ ಅದರಲ್ಲಿ ಅನುಚಿತವೇನಿದೆ. ಅದರಲ್ಲಿ ಯಾವ ಪಾಪವಿದೆ. ಪಾಪ ಮತ್ತು ಪುಣ್ಯದ ಕಲ್ಪನೆಯನ್ನು ಎಲ್ಲಿಂದಲೊ ಎರವಲಾಗಿ ತರಲಾಗಿದೆ. ನಾನು ಹಿಪ್ಪಿಗಳ ಬಗ್ಗೆ ಪ್ರಸ್ತಾಪಿಸಿದ್ದೆ. ಈ ಹಿಪ್ಪಿಗಳಿಗೆ ಒಬ್ಬ ಗುರುವಿದ್ದಾನೆ – ಮಂತ್ರದ್ರಷ್ಟ ಗುರು, ದೀಕ್ಷಾ ಗುರು. ಅವನ ಹೆಸರು 'ಹೆನ್ರಿ ಮಿಲರ್'. ಮಿಲರ್ ಒಂದು ಪುಸ್ತಕ ಬರೆದಿದ್ದಾನೆ. 'ಮರ್ಡರ್ ದ ಮರ್ಡರರ್' ಕೊಲೆ ಮಾಡಿದವನನ್ನು ಕೊಲೆ ಮಾಡು. ಆ ಕೊಲೆ ಮಾಡಿವನು ಯಾರು? ಅವನೊಂದು ಚಿಕ್ಕ ಕಥೆ ಬರೆದಿದ್ದಾನೆ. ಒಬ್ಬ ಹನ್ನೊಂದು ಕೊಲೆ ಮಾಡಿದ. ಹನ್ನೊಂದನೇ ಕೊಲೆ ಮಾಡಿದ ನಂತರ ಅವನಿಗೆ ಪಶ್ಚಾತ್ತಾಪವಾಯಿತು. ಏಕೆಂದರೆ ಕೊಲೆ ಮಾಡುವುದು ಪಾಪವೆಂದು ಎಲ್ಲರೂ ಹೇಳುವುದನ್ನು ಕೇಳಿದ್ದ. ಇನ್ನು ಮೇಲೆ ಯಾವುದಾದರೂ ಸಾಧುವಿನ ಸಂಗತಿಯಲ್ಲಿ ಇದ್ದು ಬಿಡಬೇಕು ಎಂದು ಅವನಿಗೆ ಅನಿಸಿತು. ಸತ್ಸಂಗಕ್ಕೆ ಸಮಾನವಾದ ಬೇರೆಯಾವುದೇ ಪುಣ್ಯವಿಲ್ಲ. ಆದ್ದರಿಂದ ಅವನು ಒಬ್ಬ ಸಾಧುವಿನ ಬಳಿ ಹೋದ. ಆತ ನಿಜವಾದ ಸಾಧು, ಢೋಂಗಿಯಲ್ಲ. ಸಾಧುವಿಗೆ ಆ ಕೊಲೆಗಡುಕ "ನಾನು ಹನ್ನೊಂದು ಕೊಲೆ ಮಾಡಿದ್ದೇನೆ. ನನ್ನ ಮನಸ್ಸು ಹೇಗೆ ಶುದ್ಧಗೊಳ್ಳುವುದು ಎಂಬುದನ್ನು ತಿಳಿಸಿ. ನನಗೆ ಯಾವುದಾದರೂ ಉಪಾಯ ಹೇಳಿ" ಎಂದು ಕೇಳಿದ. ಆ ಮನುಷ್ಯ ಸಾಧುವಿನ ಬಳಿ ಒಂದು ವರ್ಷ ಪೂರ್ತ ಇದ್ದ. ಆಗ ಸಾಧು, "ಇನ್ನು ನೀನು ಹೋಗು. ನೀನು ಶುದ್ಧನಾಗಿದ್ದೀಯೆ. ಎಲ್ಲಿಗಾದರೂ ಹೋಗು. ಯಾವುದೇ ಅಪಾಯವಿಲ್ಲ. ಖುಷಿಯಾಗಿ ಸಂಸಾರದಲ್ಲಿ ಹೋಗಿ ಇರು" ಎಂದು ಹೇಳಿದ. ಅವನಿಗೆ ಕೊಂಚ ಆತ್ಮವಿಶ್ವಾಸ ಉಂಟಾಯಿತು. ಇನ್ನೇನು ಬಾಕಿ? ಸಾಧುವೇ ಹೇಳಿರುವುದರಿಂದ ನಾನಂತೂ ಖಂಡಿತ ಶುದ್ಧನಾದೆ. ಹೀಗೆ ಆಲೋಚಿಸಿ ಅವನು ಹೊರ ನಡೆದ. ಸ್ವಲ್ಪ ದೂರ ಹೋದ ನಂತರ ತಾನು ಶುದ್ಧನಾಗಿರುವುದರ ಬಗ್ಗೆ ಸಂಶಯ ಉಂಟಾಯಿತು ಮತ್ತು ಶುದ್ಧವಾಗಿರುವುದರ ಬಗ್ಗೆ ಸಂಶಯ ಉಂಟಾಯಿತು. ಮತ್ತು ಶುದ್ಧವಾಗಿರುವುದನ್ನು ಹೇಗೆ ತಿಳಿದುಕೊಳ್ಳಬೇಕು ಎಂದು ತಿಳಿಯಿತು. ಅದಕ್ಕಿರುವ ಗುರುತೇನು? ಯಾವುದರಿಂದ ನಾನು ಶುದ್ಧನೆಂದು ತಿಳಿಯಬೇಕು ಅಂದರೆ ಅವನ ಶುದ್ಧತೆ ಸಾಧುವನ್ನು ಅವಲಂಬಿಸಿತು. ಅವನು ಸಾಧುವಿನ ಬಳಿಗೆ ಹಿಂದಿರುಗಿದ ಮತ್ತು ಅಂದ, "ಸ್ವಾಮಿ ನನಗೆ ಭಯವಾಗುತ್ತಿದೆ" "ಯಾವ ಮಾತಿನ ಭಯ?" "ನನ್ನದೇ ನನಗೆ ಭಯ. ನಾನು ಶುದ್ಧನಾದುದು ಹೇಗೆ? ಇನ್ನು ಮುಂದೆ ನನ್ನಿಂದ ಹೇಗೆ ಪಾಪವಾಗುವುದಿಲ್ಲ? ನನಗೆ ಯಾವುದಾದರೊಂದು ಗುರುತು ಕೊಡಿ, ಅದರಿಂದ ನನಗೆ ನಾನು ಶುದ್ಧನೆಂದು ಗೊತ್ತಾಗಬೇಕು" ಸಾಧು ಕಪ್ಪು ಬಣ್ಣದ ಒಂದು ಬಟ್ಟೆ ಕೊಟ್ಟ ಮತ್ತು ಅಂದ, "ಇದು ಬಿಳಿಯಾಯಿತೆಂದರೆ ನೀನು ಶುದ್ಧನಾದಿಯೆಂದು ತಿಳಿದುಕೊ" ಅವನು ಹೊರಟ. ಹಗಲು ರಾತ್ರಿ ಬಟ್ಟೆ

ಬಿಳಿಯಾಗಿದೆಯೆ ಎಂದು ಪದೇ ಪದೇ ನೋಡಿದ. ಅದು ಬಿಳಿಯಾಗುತ್ತಲೇ ಇಲ್ಲ. ಏನು ಮಾಡುವುದು. ಅವನು ಎಲ್ಲರೊಂದಿಗೆ ಕೇಳಲಾರಂಭಿಸಿದ. ಎಲ್ಲ ಬಗೆಯ ಜನರನ್ನು ಕೇಳಿದ. ಅವರೆಲ್ಲರೂ ಒಂದೊಂದು ಸಮಾಧಾನ ಹೇಳಿದರು. ಕೊನೆಯಲ್ಲಿ ಒಬ್ಬನೆಂದ "ನೀನು ಕಾಶಿಗೆ ಹೋಗು ಮತ್ತು ಗಂಗೆಯ ಪವಿತ್ರ ನೀರಲ್ಲಿ ಇದನ್ನು ಮುಳುಗಿಸು. ಬಟ್ಟೆ ಖಂಡಿತವಾಗಿ ಬಿಳಿಯಾಗುವುದು. ಅದೇ ರೀತಿ ಅವನು ಮಾಡಿದ. ಆದರೆ ಆ ಬಟ್ಟೆ ಬಿಳಿಯಾಗಲಿಲ್ಲ. ಇದರ ಹೆಸರು ಪ್ರತ್ಯಕ್ಷ ಜೀವನ, ಸಹಜ ಕರ್ಮ.

೧೯೩೭ರಲ್ಲಿ ಹುಬ್ಬಳ್ಳಿಯಲ್ಲಿ ಗಾಂಧೀ ಸೇವಾ ಸಂಘದ ಅಧಿವೇಶನ ನಡೆಯಿತು. ಆಗ ಗಾಂಧೀಜಿ ನನಗೆ ಹೀಗೆ ಹೇಳಿದರು, "ಇದು ಯಂಗ್ ಇಂಡಿಯಾದ ಫೈಲ್. ನಾನು ಜೀವಿತವಾಗಿರುವಾಗಲೇ ನನ್ನೆದುರಿಗೆ ಸುಟ್ಟುಬಿಡಿ. ನನ್ನ ಹೆಸರನ್ನು ತೆಗೆದುಕೊಂಡು ದಹನ ಮಾಡಿ ಇಲ್ಲವಾದಲ್ಲಿ ಕೇವಲ ಇವೇ ಉಳಿದುಕೊಳ್ಳುವವು ಮತ್ತೇನೂ ಉಳಿಯುವುದಿಲ್ಲ."

ಮಿತ್ರರೇ, ಸಾಮ್ಯವಾದದ ಪ್ರೇರಣೆ ಅದು. ಹನ್ನೆರಡು ಕೊಲೆ ಮಾಡುವಂಥಾದ್ದಾಗಿದೆ. ಆ ಮನುಷ್ಯನಲ್ಲಿ ಆವೇಷವಿತ್ತು. ದೇವರು ನರಸಿಂಹ ಅವತಾರ ತಾಳಿ ಹಿರಣ್ಯಕಶಿಪುವಿನ ಹೊಟ್ಟೆಯಲ್ಲಿ ಉಗುರನ್ನು ಹಾಕಿ ಕರುಳನ್ನು ಎಳೆದುತಂದಿದ್ದರು. ಆದರೆ ಅದರ ಮೂಲದ ಪ್ರೇರಣೆ ಕರುಣೆಯದಾಗಿತ್ತು. ನರಸಿಂಹ ಭಕ್ತವತ್ಸಲನಾಗಿದ್ದ. ಆದ್ದರಿಂದ ಓಡಿ ಬಂದ. ಈ ಪ್ರಕ್ರಿಯೆಯಲ್ಲಿ ಕ್ರೂರತೆ ಇದೆ. ಆದರೆ ಪ್ರೇರಣೆ ಕರುಣೆಯದು. ನಕ್ಸಲ್‌ವಾದಿಗಳಲ್ಲಿ ಬಡವರ ಬಗ್ಗೆ ಕರುಣೆ ಇದೆ. ಹಾಗೆ ಕರುಣೆ ಇದ್ದದ್ದೇ ಆದರೆ ಆಗ ಮನುಷ್ಯನ ವಿಚಾರ ಮುಖ್ಯವಾಗುತ್ತದೆ. ಶಾಸ್ತ್ರದ ವಿಚಾರ ಗೌಣವಾಗುತ್ತದೆ. ಮನುಷ್ಯನ ದುಃಖ ನಿವಾರಣೆಗೆ ವಿಚಾರ ಮುಖ್ಯವಾಗುತ್ತದೆ. ಅಹಿಂಸಾತತ್ವದ ವಿಚಾರ ಗೌಣವಾಗುತ್ತದೆ. ದುರ್ದೆಶೆಯನ್ನು ನೋಡಲಾಗುವುದಿಲ್ಲ. ನೇರವಾಗಿ ತೃಣಮೂಲದಲ್ಲಿ ಈ ಸಮಾಜದ ಪರಿವರ್ತನೆ ಆಗಬೇಕು. ಈ ಆಕಾಂಕ್ಷೆ ಇಡೀ ಸಂಸಾರದ ತರುಣರಲ್ಲಿ ಇದೆ.

* * *

ಒಂದಾಗಿ ಒಳ್ಳೆಯವರಾಗಿ

– ವಿನೋಬಾ

ನಾನು ಹಳ್ಳಿಯವರಿಗೆ ಒಂದು ಮಾತನ್ನು ತಿಳಿಸುತ್ತಿರುತ್ತೇನೆ. ನೀವು ಒಂದೇ ಹಳ್ಳಿಯಲ್ಲಿ ನೆರೆಹೊರೆಯವರಂತೆ ಇರುತ್ತೀರಿ, ಆದ್ದರಿಂದ ಎರಡು ಕೆಲಸ ಮಾಡಿರಿ: ಒಂದಾಗಿರಿ ಮತ್ತು ಒಳ್ಳೆಯವರಾಗಿರಿ. ಆಗ ನಿಮ್ಮ ಮೇಲೆ ಯಾವುದೇ ಸಂಕಟವಾಗಲೀ ದುಃಖವಾಗಲೀ ಬರುವುದಿಲ್ಲ. ರೈಲ್ವೇನಿಲ್ದಾಣದಲ್ಲಿ ಟಿಕೆಟ್ ಕೊಡುವ ಸ್ಥಳದ ಬಳಿ ನೂರಾರು ಜನ ಒಂದುಗೂಡಿರುತ್ತಾರೆ. ಆದರೆ ಯಾರು ಕೂಡ ಪರಸ್ಪರರ ಬಗ್ಗೆ ಕಾಳಜಿ ಮಾಡುವುದಿಲ್ಲ. ಪ್ರತಿಯೊಬ್ಬನಿಗೂ ತನ್ನದೇ ಆದ ಚಿಂತೆ ಇರುತ್ತದೆ. ಏಕೆಂದರೆ ಅಲ್ಲಿ ಯಾವುದೇ ಪರಿವಾರವಿರುವುದಿಲ್ಲ, ಸಮೂಹವಿರುತ್ತದೆ. ಒಂದು ವೇಳೆ ಹಳ್ಳಿಯಲ್ಲಿಯೂ ಕೂಡ ಇಂಥದೇ ಸ್ಥಿತಿ ಉಂಟಾಗಿ ಹಳ್ಳಿಯಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಾರ್ಥ ನೋಡುತ್ತ ನೆರೆಯವನ ಚಿಂತೆ ಮಾಡದಿದ್ದರೆ ಹೇಗೆ ನಡೆದೀತು? ಒಂದು ಹಳ್ಳಿಯಲ್ಲಿ ಒಟ್ಟಿಗೆ ವಾಸಿಸುತ್ತೇವೆ ಎಂದ ಮೇಲೆ ಒಂದಾಗಲೇಬೇಕು. ಅದಕ್ಕಾಗಿ ಹಳ್ಳಿಯ ಭೂಮಿಯನ್ನು ಒಂದು ಮಾಡಬೇಕು.

ಕೆಲ ಜನರು ನಾವು ಈ ಜಮೀನಿನ ಮಾಲೀಕರಿದ್ದೇವೆ. ನಮ್ಮ ಬಳಿ ಕಾಗದ ಪತ್ರಗಳಿವೆ ಎಂದು ಹೇತ್ತಾರೆ. ಆದರೆ ಕಾಗದ ಪತ್ರಗಳಿಂದಲೇ ಯಾರಾದರೂ ಮಾಲೀಕರಾಗುತ್ತಾರೆಯೇ? ಒಂದು ವೇಳೆ ನಾವು ಮಾಲೀಕರಾಗಿದ್ದರೆ ಸಾಯುತ್ತಿದ್ದೇವೇಕೆ? ನಾವು ಹೊರಟು ಹೋಗುತ್ತೇವೆ. ಮತ್ತು ಈ ಭೂಮಿ ಇಲ್ಲಿಯೇ ಬಿದ್ದಿರುತ್ತದೆ. ಈ ಮನೆ 'ನನ್ನದು' ಎಂದು ಹೇಳುತ್ತೇವೆ, ಆದರೆ ಈ ಮನೆಯಲ್ಲಿರುವ ಇಲಿಗಳೇನಿವೆ ಅವು ಕೂಡ ಮನೆ 'ನನ್ನದು' ಎಂದೆನ್ನುತ್ತವೆ. ಆ ಇಲಿಗಳು ಆ ಮನೆಗಾಗಿ ಒಂದು ಕೌಡಿ ಖರ್ಚೂ ಮಾಡುವುದಿಲ್ಲ, ಆದರೂ ಕೂಡ ಅವು ಮನೆಯನ್ನು ಬಿಡುವುದಿಲ್ಲ. ಯಾವ ರೀತಿ ಆ ಮೂರ್ಖ ಇಲಿಗಳು ನನ್ನದೆನ್ನುತ್ತವೆಯೋ ಅದೇ ರೀತಿ ನಾವೂ ಸಹ ಮೂರ್ಖರಾಗಿ ಭೂಮಿ 'ನನ್ನದು' ಎನ್ನುತ್ತೇವೆ, ಮನೆ ನನ್ನದೆನ್ನುತ್ತೇವೆ. ಆ ಇಲಿ ಕೂಡ ಸತ್ತು ಹೋಗುತ್ತದೆ ಮತ್ತು ನಾವು ಸತ್ತು ಹೋಗುತ್ತೇವೆ. ಮನೆ ಇಲಿಯದೂ ಅಲ್ಲ ಮತ್ತು ಮಾಲೀಕನೆಂದುಕೊಂಡವನದೂ ಅಲ್ಲ. ಅದೇ ರೀತಿ ಈ ಭೂಮಿ ಕೂಡ ನನ್ನದಲ್ಲ. ಭೂಮಿಯಿಂದ ನಮಗೆ ಊಟ ದೊರೆಯುತ್ತದೇನೂ ನಿಜ. ಆದರೆ ಊಟದ ಹಕ್ಕು ಎಲ್ಲರಿಗೂ ಇದೆ. ಈ ಹೊಲ 'ನನ್ನದು' ಎನ್ನುತ್ತೇವೆ, 'ನಾನು' ಬೆಳೆಹಾಕಿದ್ದೇನೆ. ಇದರಿಂದಾಗಿ 'ನನ್ನ' ಹಕ್ಕಿದೆ. ಆದರೆ ಇತ್ತ ರೈತ 'ನನ್ನದು–ನನ್ನದು' ಎಂದು ಹೇಳುತ್ತಿರುತ್ತಾನೆ, ಅತ್ತ ಹಕ್ಕಿಗಳು ಬಂದು ಬೆಳೆಯನ್ನು ತಿನ್ನುತ್ತಾ ಹೋಗುತ್ತಿರುತ್ತವೆ. ಬೆಳೆಯ ಮೇಲೆ ಹಕ್ಕಿಗಳಿಗೆ ಹಕ್ಕಿಲ್ಲವೇ? ಓರ್ವ ರೈತ ಮಹಿಳೆಯಿದ್ದಳು. ಅವಳಿಗೆ ಪತಿಯಾಗಲಿ ತಂದೆಯಾಗಲಿ ಯಾರೂ ಇರಲಿಲ್ಲ. ಒಬ್ಬಂಟಿಯಾಗಿದ್ದಳು. ಅವಳಿಗೆ ಒಂದು ಚಿಕ್ಕ ಹೊಲವಿತ್ತು. ಅದರಲ್ಲಿಯೇ ಕೆಲಸ ಮಾಡುತ್ತಿದ್ದಳು. ಬೆಳೆಯ ಸುಂರಕ್ಷಣೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅವಳು ನನಗೆ ತನ್ನ ಈ ದುಃಖವನ್ನು ಹೇಳುತ್ತಿದ್ದಳು.

ಹೇಳುತ್ತಾ-ಹೇಳುತ್ತಾ ಹೌದು, ಪಕ್ಷಿಗಳಿಗೂ ಕೂಡ ಹಕ್ಕು ಇದೆ, ಭಗವಂತ ಅವುಗಳನ್ನು ಹುಟ್ಟಿಸಿದ್ದಾನೆ. ಆದ್ದರಿಂದ ಅವುಗಳಿಗೂ ಕೂಡ ಊಟ ಮಾಡುವ ಹಕ್ಕು ಇದೆ. ಹಿಂದೂಸ್ತಾನದಲ್ಲಿ ಸಣ್ಣ ಸಣ್ಣ ರೈತ ಮಹಿಳೆಯರು ಕೂಡ ನಾವು ಮಾಲೀಕರಲ್ಲ, ಮಾಲೀಕ ಭಗವಂತ ಎಂಬುದನ್ನು ತಿಳಿದಿದ್ದಾರೆ. ಭೂಮಿಯ ಮೇಲೆ ನಮ್ಮ ಹಕ್ಕು ಇರುವುದಾದರೆ ಇಲಿಗಳಿಗೂ ಮತ್ತು ಪಕ್ಷಿಗಳಿಗೂ ಕೂಡ ಇದೆ. ಜೊತೆಗೆ ನಮ್ಮ ನೆರೆಹೊರೆಯ ಸಹೋದರರಿಗಂತೂ ಇದ್ದೇ ಇದೆ. ಭೂಮಿಯ ಮಾಲೀಕ ಭಗವಂತ. ಈಗ ಒಂದು ವೇಳೆ ನಾವು ಅದರ ಮಾಲೀಕರಾಗಿ ಕುಳಿತು ಬಿಟ್ಟರೆ, ಅದು ಭಗವಂತನ ಇಚ್ಛೆಗೆ ವಿರುದ್ಧವಾಗಿದೆ. ಮತ್ತು ಒಂದುವೇಳೆ ನಾವು ಅವನ ಇಚ್ಛೆಯ ವಿರುದ್ಧ ನಡೆದುಕೊಂಡರೆ ನಾವೆಂದೂ ಸುಖಿಯಾಗಿರಲು ಸಾಧ್ಯವಿಲ್ಲ. ನಮಗೆ ತರತರಹದ ದುಃಖಗಳ ಅನುಭವವಾಗುವುದು. ಇಂದು ಅದೇ ರೀತಿ ಆಗುತ್ತಿದೆ. ಆದ್ದರಿಂದ ಹಳ್ಳಿಯ ಎಲ್ಲ ಭೂಮಿ ಎಲ್ಲರದ್ದಾದರೆ ಇಡೀ ಹಳ್ಳಿಯವರು ಒಟ್ಟಿಗೆ ಸೇರಿ ವ್ಯವಸಾಯ ಮಾಡುವರು. ಯಾರು ದೊಡ್ಡವರೆಂದಾಗಲೀ ಯಾರು ಕೀಳೆಂದಾಗಲೀ ಇರುವುದಿಲ್ಲ. ಏನೆಲ್ಲಾ ಬೆಳೆ ಬರುವುದೊ ಅದು ಪರಮೇಶ್ವರನ ಪ್ರಸಾದವೆಂದು ತಿಳಿದು ಎಲ್ಲ ಜನರು ಸ್ವೀಕರಿಸುವರು. ಶ್ರೀಮಂತರ ಮಗನೇ ಇರಲಿ ಅಥವಾ ಬಡವನ ಮಗನೇ ಇರಲಿ ಎಲ್ಲರನ್ನೂ ಪರಮೇಶ್ವರ ಬೆತ್ತಲಾಗಿಯೇ ಹುಟ್ಟಿಸುತ್ತಾನೆ. ಸತ್ತ ಮೇಲಂತೂ ಎಲ್ಲವನ್ನೂ ಬಿಟ್ಟು ಹೋಗಬೇಕಾಗುತ್ತದೆ. ಶ್ರೀಮಂತ ಮಹಲ್ ಬಿಟ್ಟು ಹೋಗಬೇಕಾಗುತ್ತದೆ ಮತ್ತು ಬಡವ ಗುಡಿಸಲನ್ನು ಬಿಟ್ಟು ಹೋಗಬೇಕಾಗುತ್ತದೆ. ನಮ್ಮ ಈ ಶರೀರ ಕೆಲವು ದಿನಗಳವರರೆಗೆ ಉಳಿಯುವಂಥದ್ದಾಗಿದೆ. ಇಂಥ ಪರಿಸ್ಥಿತಿಯಲ್ಲಿ ಈಶ್ವರನ ಸೇವೆಯಲ್ಲಿ ನಮ್ಮ ಶರೀರವನ್ನು ಉಪಯೋಗಿಸಬೇಕು. ಕೇವಲ ಭೋಗಿಸುವುದಕ್ಕಾಗಿ ತೊಡಗಿಸುವುದಲ್ಲ. ಹಸಿವಾಗುತ್ತದೆ, ಆದ್ದರಿಂದ ನಾವು ತಿನ್ನುತ್ತೇವೆ. ಬಾಯಾರಿಕೆಯಾಗುತ್ತದೆ, ನೀರು ಕುಡಿಯುತ್ತೇವೆ. ಆದರೆ ಇದೆಲ್ಲವೂ ದನಕರುಗಳಲ್ಲೂ ಕೂಡ ನಡೆಯುತ್ತದೆ. ಒಂದು ವೇಳೆ ತಿನ್ನುವುದು, ಕುಡಿಯುವುದು, ಮಲಗುವುದು, ದುಃಖ ಅನುಭವಿಸುವುದು ಮತ್ತು ಸತ್ತು ಹೋಗುವುದು:- ಇದೇ ಕ್ರಮ ನಡೆಯುವುದಾದರೆ ಮನುಷ್ಯ ಮತ್ತು ಪಶುಗಳಲ್ಲಿ ವ್ಯತ್ಯಾಸ ಏನಾಯಿತು? ಬೇರೆಯವರ ದುಃಖದಲ್ಲಿ ದುಃಖಿಯಾಗುವ ಮತ್ತು ಬೇರೆಯವರ ಸುಖದಲ್ಲಿ ಸುಖಿಯಾಗುವ ಮನಸ್ಸು ಮನುಷ್ಯನಿಗೆ ಸಿಕ್ಕಿರುವುದೇ ಅವನ ವಿಶೇಷತೆ. ಹುಲಿಗೆ ಹಸಿವಾಗುತ್ತದೆ ಆಗ ಜಿಂಕೆ ಅದರ ಕೈಗೆ ಸಿಗುವುದಿಲ್ಲ, ಅದು ದುಃಖಗೊಳ್ಳುತ್ತದೆ. ಆದರೆ ಜಿಂಕೆಯ ದುಃಖದಿಂದ ಹುಲಿಗೆ ದುಃಖವಾಗುವುದಿಲ್ಲ. ನಾವು ಒಟ್ಟಿಗೆ ಇರುತ್ತಿದ್ದೇವೆ, ಇದು ಸಂತರ ಭೋಧನೆಯಾಗಿತ್ತು. ಆದರೆ ಮಧ್ಯದಲ್ಲಿ ನಾವು ಆಲಸಿಗಳಾದೆವು. ತತ್ಪರಿಣಾಮವಾಗಿ ಹಣದ ಮಹತ್ವ ಹೆಚ್ಚಾಯಿತು ಮತ್ತು ಪ್ರೇಮದ ಮಹತ್ವ ಕಡಿಮೆಯಾಯಿತು. ಯಾವಾಗ ಹಣ ಬಂದಿತೂ ಆಗ ಪ್ರೇಮ ಓಡಿ ಹೋಯಿತು. ಹಣದ ಕಾರಣದಿಂದ ಇಂದು ಸಮಾಜದಲ್ಲಿ ಮೂರು ವರ್ಗಗಳಾಗಿವೆ.

ಎಲ್ಲಿ ಜನರು ಒಂದಾಗುತ್ತಾರೊ ಅಲ್ಲಿ ದೊಡ್ಡವರ ಮನಸ್ಸಿನಲ್ಲಿ ತಿರಸ್ಕಾರದ ಭಾವನೆ ಇರುವುದಿಲ್ಲ. ಸಣ್ಣ ಜನರ ಮನಸ್ಸಿನಲ್ಲಿ ದ್ವೇಷದ ಭಾವನೆ ಇರುವುದಿಲ್ಲ. ಸ್ಪರ್ಧೆಯ ಭಾವನೆ ಇರುವುದಿಲ್ಲ. ಏಕೆಂದರೆ ಅಲ್ಲಿ ದೊಡ್ಡವರೆಂದು ಯಾರೂ ಇಲ್ಲ

ಚಿಕ್ಕವರೆಂದೂ ಯಾರೂ ಇಲ್ಲ. ಎಲ್ಲರೂ ಸಮಾನವಾಗಿರುತ್ತಾರೆ. ಸ್ವಲ್ಪ ವ್ಯತ್ಯಾಸವಿದ್ದರೆ ಕೈಯ ಐದು ಬೆರಳುಗಳಂತೆ ಇರುವುದು. ಐದೂ ಬೆರಳುಗಳು ಪರಸ್ಪರ ಸಹಯೋಗ ಮಾಡುತ್ತವೆ. ಆದ್ದರಿಂದ ಐದು ಇದ್ದರೂ ಕೂಡ ಲಕ್ಷಾವಧಿ ಕೆಲಸ ಮಾಡುತ್ತವೆ, ಸಮಾಜದಲ್ಲಿ ಐದು ಬೆರಳುಗಳಂತೆ ಸಮಾನತೆ ಮತ್ತು ಪರಸ್ಪರ ಸಹಕಾರವಿರಲೆಂದು ನಾನು ಬಯಸುತ್ತೇನೆ. ಸಮಾಜದಲ್ಲಿ ಎಲ್ಲರೂ ಪಂಚಪಾಂಡವರಂತೆ ಹೊಂದಿಕೊಂಡಿರಲಿ. ಹೀಗೆ ಉಂಟಾದಲ್ಲಿ ತಿರಸ್ಕಾರ, ದ್ವೇಷ ಮತ್ತು ಸ್ಪರ್ಧಾರಹಿತ ಸಮಾಜ ಉಂಟಾಗುವುದು. ಪ್ರೇಮಭಾವ, ಆದರ ಮತ್ತು ಸಹಯೋಗವಿರುವಂಥ ಸಮಾಜ ರಚಿತವಾಗಬೇಕೆಂದು ಬಯಸುತ್ತೇನೆ. ಇದಕ್ಕೆ ನಾವು 'ಸರ್ವೋದಯ ಸಮಾಜ' ಎನ್ನುತ್ತೇವೆ. ಸರ್ವೋದಯ ಸಮಾಜದಲ್ಲಿ ಎಲ್ಲರ ಉದಯವಾಗುವುದು. ಎಲ್ಲರೂ ಸಮಾನವಾಗಿರುವರು. ಪ್ರತಿಯೊಂದು ಹಳ್ಳಿಯಲ್ಲಿ ಜನರು ಈ ನನ್ನ ವಿಚಾರ ತಿಳಿದಾಗ ಅವರು ಹಳ್ಳಿ ಹಳ್ಳಿಯಲ್ಲಿ 'ಸರ್ವೋದಯ ಸಮಾಜ'ದ ಸ್ಥಾಪನೆ ಮಾಡುವರು. ಆಗ ನಮ್ಮ ಹಳ್ಳಿಯ ಎಲ್ಲ ಭೂಮಿ, ಸಂಪತ್ತು, ಶಕ್ತಿ ಮತ್ತು ಬುದ್ಧಿ ಹಳ್ಳಿಯದೆಂದು ಹಳ್ಳಿಯವರು ಎನ್ನುವರು. ನಮ್ಮ ಹಳ್ಳಿಯಲ್ಲಿ ಯಾವ ಮನುಷ್ಯನ ಹತ್ತಿರ ಯಾವ ವಸ್ತು ಇದೆಯೋ ಅದು ಇಡೀ ಹಳ್ಳಿಯಾದ್ದಾಗಿರುತ್ತದೆ. ನಮ್ಮ ಹಳ್ಳಿಯಲ್ಲಿ ಪ್ರತಿಯೊಬ್ಬ ಮನುಷ್ಯ ತನ್ನ ಚಿಂತೆಯನ್ನು ಮಾಡದೆ ಎರಡನೆಯವರ ಚಿಂತೆಮಾಡುತ್ತಾನೆ ಮತ್ತು ಹಳ್ಳಿಯ ಜನ ಆತನ ಚಿಂತೆ ಮಾಡುತ್ತಾರೆ.

ಯಾವಾಗ ಹಳ್ಳಿಯ ಜನ ಪರಸ್ಪರರ ಸುಖದುಃಖದಲ್ಲಿ ಭಾಗಿಯಾಗುವರೊ ಆಗ ಎಲ್ಲರೂ ಸುಖಿಗಳಾಗುವರು. ಮನುಷ್ಯನಿಗೆ ಇದೇನು ದೊಡ್ಡ ಮಾತಲ್ಲ. ಬದಲಿಗೆ ಈ ಮಾತೇ ಸ್ವಾಭಾವಿಕ. ಜನರು ಒಳ್ಳೆಯದನ್ನು, ಮಾನವತೆಯನ್ನು ಮತ್ತು ಸಂತರು ಕಲಿಸಿದ ಪಾಠವನ್ನು ಮರೆತುಬಿಟ್ಟರು. ಜಗಳದಲ್ಲಿ ಬಿದ್ದರು ಮತ್ತು ಜಮೀನಿನ ಮಾಲೀಕರಾಗಿ ಕುಳಿತರು. ಕೆಲವರು ಕಾರ್ಖಾನೆಯ ಮಾಲೀಕರಾಗಿ ಕುಳಿತರು. ಹೀಗೆ ಎಲ್ಲಿ ನೋಡಿದರತ್ತ ಮಾಲೀಕ ಮಾಲೀಕರೆ ಕಂಡುಬರುತ್ತಾರೆ.

ಇದು ವರೆಗೆ ನಾನು ಇದನ್ನೇ ಹೇಳುತ್ತ ಬಂದಿದ್ದೇನೆ-ಏನೆಂದರೆ ಜಗತ್ತಿನಲ್ಲಿ ಒಬ್ಬನೇ ಮಾಲೀಕನಿದ್ದಾನೆ. ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರು ಚಿಕ್ಕ ಮಾಲೀಕರಿದ್ದರೆ, ಇನ್ನು ಕೆಲವರು ದೊಡ್ಡ ಮಾಲೀಕರಿದ್ದಾರೆ. ಈ ಮಾಲೀಕರು ಗಲಾಟೆ ಎಬ್ಬಿಸಿದ್ದಾರೆ. ಅವರು ಜಗತ್ತಿಗೆ ಕಾಟಕೊಟ್ಟಿದ್ದಾರೆ. ಮತ್ತು ಸ್ವತಃ ಕಾಟ ಅನುಭವಿಸಿದ್ದಾರೆ. ಈ ಮಾಲೀಕರು ಕೂಡ ಸುಖವಾಗಿಲ್ಲ. ಇವರಿಗೆ ಇಡೀ ಜಗತ್ತೆ ದ್ವೇಷಿಸುವಂತೆ ಕಾಣುತ್ತದೆ. ಅವರ ಹೊಲದಲ್ಲಿ ಕೆಲಸ ಮಾಡುವಂಥವರು ಕೂಡ ಮಾಲೀಕರಿಗೆ ಮೋಸಮಾಡುವ ಪ್ರಯತ್ನ ಮಾಡುತ್ತಾರೆ. ಡಾಕ್ಟರ್ ಕೂಡ ಹಣವಿಲ್ಲದೆ ನೋಡಲು ಬರುವುದಿಲ್ಲ. ಇತ್ತೀಚೆಗೆ ಒಬ್ಬ ಮನುಷ್ಯ ಸತ್ತ ನಂತರ ಸರ್ಕಾರ ಕೂಡ ಮೃತ್ಯುತೆರಿಗೆ ಮೂಲಕ ಲೂಟಿ ಮಾಡುತ್ತದೆ. ಇದಲ್ಲದೆ ಇವನ ಮನೆಯಲ್ಲಿ ತಂದೆ-ಮಗನಿಗೆ ಆಗುವುದಿಲ್ಲ, ಅಣ್ಣ-ತಮ್ಮಂದಿರು ಜಗಳವಾಡುತ್ತಾರೆ.

ಪುರಾಣಗಳಲ್ಲಿ ಇಬ್ಬರು ರಾಕ್ಷಸರ ಕಥೆ ಬರುತ್ತದೆ. ಇಬ್ಬರು ಅಣ್ಣ-ತಮ್ಮಂದಿರು ಅವರಲ್ಲಿ ಬಹಳ ಪ್ರೇಮವಿತ್ತು. ಅವರು ದೇವತೆಗಳಿಗೆ ತೊಂದರೆ ಕೊಡಲಾರಂಭಿಸಿದರು. ಅವರಿಬ್ಬರನ್ನು ಮೋಹದಲ್ಲಿ ಕೆಡುವುದಕ್ಕಾಗಿ ದೇವತೆಗಳು

ಓರ್ವ ಸ್ತ್ರೀಯನ್ನು ಕಳುಹಿಸಿದರು. ಅವಳು ಅವರ ಮುಂದೆ ಹೋಗಿ ನಿಂತುಕೊಂಡಳು. ಆ ಇಬ್ಬರೂ ಅಣ್ಣ-ತಮ್ಮಂದಿರು "ಈ ಸ್ತ್ರೀ ನನ್ನವಳು" ನಾನು ಇವಳ ಮಾಲೀಕ ಎಂದು ಹೇಳಲಾರಂಭಿಸಿದರು. ಇಬ್ಬರು ಪರಸ್ಪರರಲ್ಲಿ ಯುದ್ಧವಾಡರಂಭಿಸಿದರು. ಇವನ ಗದೆ ಅವನ ತಲೆಯ ಮೇಲೆ ಬಿತ್ತು ಮತ್ತು ಅವನ ಗದೆ ಇವನ ಮೇಲೆ ಬಿತ್ತು. ಈರ್ವರೂ ಮುಕ್ತಾಯವಾದರು. ರಾಜ ಇಂದ್ರ ಸುಖೀಪುರುಷನಾದ. ಈ ರೀತಿ ಎಲ್ಲಿ 'ನನ್ನದು' 'ನನ್ನದು' ನಡೆಯುತ್ತದೆಯೋ ಅಲ್ಲಿ ಜಗಳದ ಹೊರತಾಗಿ ಬೇರೆ ಯಾವ ವಿಷಯ ಹುಟ್ಟುವುದಿಲ್ಲ. ಮಾಲೀಕರೆಂದು ಹೇಳಿಕೊಳ್ಳುವಂಥವರ ಮನೆಯಲ್ಲಿ ಜಗಳಗಳು ನಡೆಯುತ್ತವೆ. ಆದ್ದರಿಂದ ಅವರು ಸುಖೀಗಳಾಗುವುದಿಲ್ಲ. ಪ್ರಸ್ತುತ ಸಮಾಜ ರಚನೆಯಲ್ಲಿ ಮಾಲೀಕನು ಸುಖೀಯಿಲ್ಲ. ಕೂಲಿಯವನೂ ಸುಖೀಯಿಲ್ಲ. ಮಾಲೀಕನಿಗಿಂತ ಕೂಲಿಯವನು ಹೆಚ್ಚು ಸುಖೀ ಇರಬಹುದೆಂದು ನಾವು ತಿಳಿಯುತ್ತೇವೆ. ಏಕೆಂದರೆ ಅವರಿಗೆ ರಾತ್ರಿಯಲ್ಲಿ ಒಳ್ಳೆಯ ನಿದ್ದೆ ಬರುತ್ತಿರಬಹುದೆಂದು ನಾವು ಭಾವಿಸಿದ್ದೇವೆ.

ಯಾವ ರೀತಿ ತಾಯಿ ಎಲ್ಲ ಮಕ್ಕಳನ್ನು ಸಮಾನವಾಗಿ ಪ್ರೀತಿಸುತ್ತಾಳೋ ಅದೇ ರೀತಿ ದೇವರು ಎಲ್ಲ ಜೀವಿಗಳನ್ನು ಸಮಾನವಾಗಿ ಪ್ರೀತಿಸುತ್ತಾನೆ.

ದೇವರು ನಮಗೆ ಗಾಳಿ, ನೀರು, ಸೂರ್ಯನ ಬೆಳಕು ಮತ್ತು ಆಕಾಶವನ್ನು ಕೊಟ್ಟಿದ್ದಾನೆ. ಯಾವ ರೀತಿ ಇದೆಲ್ಲವನ್ನು ಎಲ್ಲರಿಗೋಸ್ಕರ ಕೊಟ್ಟಿದ್ದಾನೊ, ಅದೇ ರೀತಿ ಭೂಮಿಯನ್ನು ಸಹ ಎಲ್ಲರಿಗೂ ಕೊಟ್ಟಿದ್ದಾನೆ. ಒಂದು ವೇಳೆ ನಾಳೆ ಕೆಲ ಜನರು ನೀರಿನ ಮಾಲೀಕರಾಗಿ ಕುಳಿತುಕೂಂಡರೆ ದೇವರಿಗೆ ಸಂತೋಷವಾಗುವುದೆ? ಆದರೆ ಇಂದು ಕೆಲವು ಜನರು ಜಮೀನಿನ ಮಾಲೀಕರಾಗಿ ಕುಳಿತಿದ್ದಾರೆ ಹಾಗೂ ಬಹಳಷ್ಟು ಜನರ ಬಳಿ ಕೂಂಚವೂ ಜಮೀನಿಲ್ಲ, ದೇವರಿಗೆ ಈ ಮಾತು ಒಪ್ಪಿಗೆ ಇಲ್ಲ. ಆದ್ದರಿಂದ ನಾವು ಮಾಡಿರುವ ತಪ್ಪು ಕೆಲಸವನ್ನು ತಿದ್ದಿಕೊಳ್ಳಬೇಕು.

ನಮ್ಮ ದೇಶದ ಮೇಲೆ ಇಂಗ್ಲೀಷರ ಹಿಡಿತವಿತ್ತೆಂಬುದು ನಿಮಗೆ ಗೊತ್ತಿದೆ. ನಾವು ಹಿಂದೂಸ್ತಾನದ ಮಾಲೀಕರೆಂದು ಅವರು ಹೇಳುತ್ತಿದ್ದರು. ಹಿಂದೂಸ್ತಾನದ ಭೂಮಿಯಲ್ಲಿ ಇಲ್ಲಿಯ ಜನರೇ ವ್ಯವಸಾಯ ಮಾಡುತ್ತಿದ್ದರು. ಆದರೂ ಕೂಡ ಇಂಗ್ಲೀಷರು ಮಾಲೀಕರಾಗಿ ಕುಳಿತಿದ್ದರು. ಇಂಗ್ಲೀಷರು ಈ ದೇಶದ ಮಾಲೀಕರಾಗಲು ಸಾಧ್ಯವಿಲ್ಲ. ಎಲ್ಲ ಭೂಮಿ ಈ ದೇಶದ ನಿವಾಸಿಗಳದು ಎಂಬುದಾಗಿ ಗಾಂಧೀಜಿ ನಮಗೆ ಕಲಿಸಿದರು. ಕೂನೆಯಲ್ಲಿ ನಾವು ಇಂಗ್ಲೀಷರಿಗೆ ಇಲ್ಲಿಯ ಹಿಡಿತ ಬಿಟ್ಟು ಹೋಗಿ ಎಂದು ಹೇಳಿದೆವು. "ಒಂದು ವೇಳೆ ನೀವು ಪ್ರೇಮದಿಂದ ಇರಬಯಸುವುದಾದರೆ, ಯಾವುದೇ ಆಕ್ಷೇಪಣೆ ಇಲ್ಲ. ಇಂದು ಕೂಡ ಇಲ್ಲಿ ಕೆಲ ಇಂಗ್ಲೀಷರು ಮತ್ತು ಆಮೇರಿಕನ್ನರು ಇದ್ದೇ ಇದ್ದಾರೆ. ಆದರೆ ಅವರು ಮಾಲೀಕರಾಗಿರಲು ಸಾಧ್ಯವಿಲ್ಲ." ನಾವು ಈ ಮಾತನ್ನು ಹೇಳಿದಾಗ ಅವರು ನಮ್ಮ ಜನರನ್ನು ಸೆರೆಮನೆಗೆ ಹಾಕಿದರು ಮತ್ತು ಬಹಳಷ್ಟು ಕಷ್ಟ ಕೊಟ್ಟರು. ಯಾವಾಗ ಅವರಿಗೆ ನಾವು ಇದನ್ನು ಒಪ್ಪುವುದಿಲ್ಲ ಎಂದು ಅರ್ಥವಾಯಿತೊ ಆಗ ಅವರು ಮಾಲೀಕತ್ವವನ್ನು ಬಿಟ್ಟು ಹೊರಟು ಹೋದರು.

ಇದಾದ ನಂತರ ಈ ರಾಜ ಮಹಾರಾಜರು ಕೂಡ ಮಾಲೀಕರಾಗುತ್ತಿದ್ದರು. ಭೂಮಿ ಎಲ್ಲರದಿದೆ ಆದ್ದರಿಂದ ಮಾಲೀಕತ್ವ ಬಿಡಿ ಎಂದು ಅವರಿಗೆ ತಿಳಿಸಿದೆವು.

ಈಗ ಅವರು ಮಾಲೀಕತ್ವ ಬಿಟ್ಟಿದ್ದಾರೆ. ನಾವು ಅವರ ಊಟ ವಸತಿಯನ್ನು ಮೊದಲಿನಂತೆಯೇ ವ್ಯವಸ್ಥೆ ಮಾಡಿದ್ದೇವೆ. ಈ ರೀತಿ ಇಂಗ್ಲೀಷರು ಮತ್ತು ರಾಜ ಮಹಾರಾಜರು ಹೋದದ್ದರಿಂದ ದೇವರಿಗೆ ಸಂತೋಷವಾಯಿತು. ಹಿಂದೂಸ್ತಾನವನ್ನು ಶೋಷಿಸುವ ಮಾಲೀಕರು ಹೊರಟು ಹೋದರು.

ದೊಡ್ಡ ದೊಡ್ಡ ಮಾಲೀಕರು ಹೋದರು ಕೂಡ ಚಿಕ್ಕ ಚಿಕ್ಕ ಮಾಲೀಕರು ಇನ್ನೂ ಇದ್ದಾರೆ. ಅನೇಕ ಸಲ ಹಾವು ಕಪ್ಪೆಯನ್ನು ಹಿಡಿದ್ದರೂ ಕಪ್ಪೆ ನೊಣವನ್ನು ಹಿಡಿದಿಟ್ಟುಕೊಂಡಿರುತ್ತದೆ. ಇದೊಂದು ಮೋಹವೇ ಆಗಿದೆ. ಮುರ್ಖ ಮತ್ತು ಅಜ್ಞಾನಿ ಪ್ರಾಣಿಗೆ ಇದು ಗೊತ್ತಿಲ್ಲ. ಆದರೆ ನಾವು ಕಪ್ಪೆಯಂತೂ ಅಲ್ಲ. ಮನುಷ್ಯರಿದ್ದೇವೆ. ಬುದ್ಧಿಯಂತೂ ನಮಗಿದೆ. ದೇವರು ಎಲ್ಲರನ್ನು ಸಮಭಾವದಿಂದ ನೋಡುತ್ತಾನೆ. ಯಾವುದೇ ಬೇಧ ಭಾವ ಮಾಡುವುದಿಲ್ಲ. ಇದೇ ರೀತಿ ಮನುಷ್ಯರೂ ಕೂಡ ವರ್ತಿಸಬೇಕು. ನಾವು ಅಣ್ಣ-ತಮ್ಮಂದಿರಾಗಿದ್ದರೆ ಎಲ್ಲರೂ ಸುಖಿಯಾಗುವೆವು.

ನಮ್ಮೆಲ್ಲರನ್ನೂ ಹಸಿವೆಯಿಂದ ಇಡಲಾರದಷ್ಟು ಹಿಂದೂಸ್ತಾನದ ಭೂಮಿ ಶಕ್ತಿದಾಯಕವಾಗಿದೆ. ಇಲ್ಲಿ ಗಂಗಾ, ಯಮುನಾ, ಬ್ರಹ್ಮಪುತ್ರ, ಕೃಷ್ಣಾ, ಗೋದಾವರಿಯಂಥ ಒಳ್ಳೆಯ ನದಿಗಳಿವೆ. ಒಳ್ಳೆಯ ಒಳ್ಳೆಯ ಬೆಟ್ಟಗಳಿವೆ, ವನಸ್ಪತಿಗಳಿವೆ, ಧಾನ್ಯಗಳಿವೆ. ಹಣ್ಣು, ತರಕಾರಿ, ಪೇಡ ಎಲ್ಲವೂ ಇದೆ. ಯಾವುದಿಲ್ಲ? ಮಧ್ಯದಲ್ಲಿ ನಾವು ತಪ್ಪಿದೆವು. ಹಣದ ಹುಚ್ಚಿನಲ್ಲಿ ದೇವರ ಹೆಸರನ್ನು ತೆಗೆದುಕೊಳ್ಳುವ ಬದಲು ಹಣದ ಹೆಸರನ್ನೇ ತೆಗೆದುಕೊಳ್ಳಲಾರಂಭಿಸಿದೆವು.

ಇತ್ತೀಚಿನ ದಿನಗಳಲ್ಲಿ ಯಾರಾದರು ನೆರೆಯವರ ಸೇವೆ ಮಾಡಿದರೂ ಕೂಡ ಹಣ ಕೇಳುತ್ತಾರೆ. ಕಾಯಿಲೆಯಿಂದ ಇರುವ ಮನುಷ್ಯ ಡಾಕ್ಟರ್‌ನಿಂದ ಔಷಧಿ ಕೇಳಿದರೆ ಡಾಕ್ಟರು ಕೂಡ ಅವನಿಂದ ಹಣ ಕೇಳುತ್ತಾನೆ. ಮೊದಲು ಹೀಗಿರಲಿಲ್ಲ. ಹಳ್ಳಿಯ ಬಡಗಿ ಯಾರ ಮನೆಯಲ್ಲಿ ಕೆಲಸ ಸಿಗುತ್ತಿತ್ತೋ ಅದನ್ನು ಮಾಡುತ್ತಿದ್ದ. ಹಣ ಕೇಳುತ್ತಿರಲಿಲ್ಲ. ವರ್ಷದ ಕೊನೆಯಲ್ಲಿ ಬೆಳೆ ಬಂದ ನಂತರ ಪ್ರತಿಯೊಬ್ಬ ರೈತ ಬೆಳೆಯ ಒಂದು ಭಾಗವನ್ನು ಬಡಗಿಯ ಮನೆಗೆ ತಲುಪಿಸುತ್ತಿದ್ದ. ಇದೇ ರೀತಿ ಹಳ್ಳಿಯ ಚಮ್ಮಾರ, ವೈದ್ಯ, ಶಿಕ್ಷಕ, ಮುಂತಾದವರೆಲ್ಲ ಹಳ್ಳಿಯ ಸೇವೆ ಮಾಡುತ್ತಿದ್ದರು. ಅವರಿಗೆ ಬೆಳೆಯ ಒಂದು ಭಾಗ ದೊರೆಯುತ್ತಿತ್ತು. ರೈತನ ಸುಖ ದುಃಖದಲ್ಲಿ ಎಲ್ಲರ ಸುಖ ದುಃಖ ಇರುತ್ತಿತ್ತು. ಆದರೆ ಇಂದಿನ ದಿನಗಳಲ್ಲಿ ಪ್ರತಿಯೊಬ್ಬನೂ ಲೆಕ್ಕಚಾರ ಹಾಕಿ ಹಣಕೇಳುತ್ತಾನೆ. ಡಾಕ್ಟರ್‌ಗಳಂತೂ ಸಾಯುವವರ ಕಡೆಯಿಂದಲೂ ಹಣ ಕೇಳುತ್ತಾರೆ. ಮೊದಲು ಯಾವ ರೀತಿ ನಡೆಯುತ್ತಿತ್ತೊ ಅದರಿಂದ ಹಳ್ಳಿ ಸುಖವಾಗಿತ್ತು. ಹಳ್ಳಿಯ ಭೂಮಿಯ ಮೇಲೆ ಯಾರು ಮಾಲೀಕರಿರಕೂಡದು. ಭೂಮಿ ಎಲ್ಲರದಾಗಬೇಕು. ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡಬೇಕು. ಪರಸ್ಪರರ ಸೇವೆ ಮಾಡಬೇಕು. ಆಗ ಎಲ್ಲರೂ ಸುಖೀ ಆಗುವರು. ಯಾರದೇ ಭೂಮಿಯಲ್ಲಿ ಯಾವುದೇ ಕೆಲಸ ಇದ್ದರೆ, ಎಲ್ಲಿಯಾದರೂ ಬಾವಿ ತೆಗೆಯುವುದಿದ್ದರೆ, ಎಲ್ಲ ಜನರೂ ಅಲ್ಲಿಗೆ ಓಡಿ ಹೋಗುವರು. ಯಾರದಾದರೂ ಹೊಲದಲ್ಲಿ ಕಡಿಮೆ ಬೆಳೆ ಬಂದರೆ ಅವನಿಗೆ ಎಲ್ಲರೂ ತಮ್ಮ ಬೆಳೆಯ ಸ್ವಲ್ಪ ಸ್ವಲ್ಪ ಭಾಗವನ್ನು ಕೊಟ್ಟುಬಿಡುವರು. ಯಾವಾಗ ನಾವು ಈ ರೀತಿ ಹಳ್ಳಿಯನ್ನು ಪರಿವಾರವನ್ನಾಗಿ ಮಾಡುತ್ತೇವೋ ಆಗ ದೇವರು ಸಂತುಷ್ಟನಾಗುವನು.

ಇಂಗ್ಲೀಷರ ಮಾಲೀಕತ್ವ ಹೋಯಿತು. ದೇವರು ಸಂತುಷ್ಟನಾದ ರಾಜ-ಮಹಾರಾಜರ ಮಾಲೀಕತ್ವ ಹೋದಾಗಲೂ ದೇವರು ಸಂತುಷ್ಟನಾದ. ಇನ್ನು ಸಣ್ಣ ಸಣ್ಣ ಮಾಲೀಕರು ಕೂಡ ತಮ್ಮ ಮಾಲೀಕತ್ವ ಬಿಟ್ಟು ಬಿಡಲಿ ಮತ್ತು ಪರಮೇಶ್ವರನ ಭಕ್ತಿಯಲ್ಲಿ ತೊಡಗಲಿ. ಇದೇನು ಬಲವಂತದಿಂದ ಮಾಡುವ ಮಾತೇನಲ್ಲ. ಪರಸ್ಪರ ಪ್ರೇಮದಿಂದ ಮತ್ತು ಪರಸ್ಪರ ತಿಳಿದುಕೊಂಡು, ಅರಿತುಕೊಂಡು ಮಾಡುವ ಮಾತು.

ಇಂದು ಕೆಲವು ಜನರು ಮಾತ್ರ ಭೂಮಿಯ ಮಾಲೀಕರಾಗಿ ಕುಳಿತಿದ್ದಾರೆ. ಉಳಿದವರೆಲ್ಲರೂ ರೈತ ಕಾರ್ಮಿಕರಾಗಿದ್ದಾರೆ. ಈ ರೈತ ಕಾರ್ಮಿಕರೇ ಮೂಲ. ಅವರೇ ತಳಹದಿ. ಅವರು ಕೆಲಸ ಮಾಡುತ್ತಾರೆ. ಅವರು ಕೆಲಸ ಮಾಡದಿದ್ದಲ್ಲಿ ಬೆಳೆ ಹೇಗೆ ಬೆಳೆಯುತ್ತದೆ? ಆದ್ದರಿಂದ ಯಾರನ್ನು ನಾವು ರೈತ ಕಾರ್ಮಿಕರೆಂದು ಕರೆಯುತ್ತೇವೂ ಅವನಿಗೂ ಕೂಡ ಮಾಲೀಕನೆಂದು ಕರೆದು ಕೊಳ್ಳುವವನಷ್ಟೆ ಭೂಮಿಯ ಮೇಲೆ ಅಧಿಕಾರವಿದೆ. ದೇವರು ನಮಗೆ ಕೆಲಸ ಮಾಡಲು ಎರಡು ಉದ್ದ ಉದ್ದ ಕೈಗಳನ್ನು ಕೊಟ್ಟಿದ್ದಾನೆ. ಹಾಗಿದ್ದ ಮೇಲೆ ನಮಗೇನು ಕಷ್ಟ? ದೇವರು ನಮಗೆ ಚಿಕ್ಕದಾದ ಬಾಯಿ ಕೊಟ್ಟಿದ್ದಾನೆ. ರಾವಣನಂತೆ ಹತ್ತು ಬಾಯಿಗಳನ್ನು ಕೊಟ್ಟಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು? ದೇವರು ನಮ್ಮನ್ನು ಹತ್ತು ಬಾಯಿಗಳ ರಾಕ್ಷಸರನ್ನಾಗಿ ಮಾಡಲಿಲ್ಲ. ಆದರೆ ನಗರದ ಈ ಜನ ರಾಕ್ಷಸರಿದ್ದಾರೆ. ಅವರು ತಮ್ಮ ಬಳಿ ಹತ್ತು ಜನರ ಧಾನ್ಯ ಇಟ್ಟು ಕೊಳ್ಳುತ್ತಾರೆ. ಅವರಿಗೆ ಹಣದ ರಾಶಿ ಮಾಡಿಡುವಷ್ಟು ಹಣದ ಲೋಭವಿದೆ. ಆದರೆ ಒಂದು ದಿನ ಎಲ್ಲವನ್ನು ಬಿಟ್ಟು ಹೊರಟು ಹೋಗುತ್ತಾರೆ. ನಾವು ಇದೇ ರೀತಿ ನಡೆದರೆ ಎಂದೂ ಸುಖಿಗಳಾಗುವುದಿಲ್ಲ. ನಾವು ನಮ್ಮ ಕೈಗಳಿಂದ ಕೆಲಸ ಮತ್ತು ಬೇರೆಯವರ ಸೇವೆ ಮಾಡಿದಾಗ ಸುಖಿಯಾಗುತ್ತೇವೆ. ಆದರೆ ಇಂದು ನಮ್ಮ ಕೈಗಳನ್ನು ಕಿತ್ತುಕೊಳ್ಳುವುದಕ್ಕಾಗಿ ಉಪಯೋಗಿಸುತ್ತೇವೆ. ನಮ್ಮ ನೆರೆಯವನಿಗೆ ಎರಡು ಕೈಗಳಿವೆ ಮತ್ತು ನಮಗೆ ಎರಡು ಕೈಗಳಿವೆ. ನಮ್ಮ ಎರಡು ಕೈಗಳು ಮತ್ತು ಅವನ ಎರಡು ಕೈ ಸೇರಿ ಕೆಲಸ ಮಾಡಿದರೆ ಎಲ್ಲರಿಗೂ ಊಟ ಸಿಗುವುದು. ಆದರೆ ಇಂದು ನಮ್ಮ ಎರಡು ಕೈಗಳು ಅವನ ಎರಡು ಕೈಗಳನ್ನು ಕತ್ತರಿಸುತ್ತವೆ. ಆದ್ದರಿಂದ ಎಲ್ಲರೂ ದುಃಖಿಯಾಗಿದ್ದಾರೆ. ಇದಕ್ಕಾಗಿಯೇ ನೀವೆಲ್ಲರೂ ಒಂದಾಗಿರೆಂದು ನಾನು ನಿಮಗೆ ತಿಳಿಸುತ್ತೇನೆ. ಈ ವಿಚಾರದ ಬೆಂಕಿ ಹಳ್ಳಿಹಳ್ಳಿಗಳಲ್ಲಿ ಹರಡಬೇಕೆಂದು ನಾನು ಬಯಸುತ್ತೇನೆ ಮತ್ತು ಎಲ್ಲಿ ಅಪವಿತ್ರತೆ ಇದೆಯೋ ಅದೆಲ್ಲವೂ ಸುಟ್ಟು ಹೋಗಲಿ. ಮಾಲೀಕತ್ವ ಅಳಿಸಿಹೋದರೆ ಬೇಧಾಸುರನ ನಾಶವಾಗುತ್ತದೆ. ರಾವಣನಿಗೆ ಹತ್ತು ತಲೆಗಳಿದ್ದವು. ಈ ದಿನಗಳಲ್ಲಿ ಹಳ್ಳಿಗಳಲ್ಲಿ ಹತ್ತಾರು ಮಾಲೀಕರಿರುತ್ತಾರೆ. ಆದ್ದರಿಂದ ಹಳ್ಳಿ ರಾವಣನಾಗುತ್ತದೆ. ಪ್ರತಿಯೊಂದು ಹಳ್ಳಿ ಹತ್ತುತಲೆಯ ರಾವಣನಾಗದೆ ಒಂದು ತಲೆಯ ಮನುಷ್ಯನಾಗಲೆಂದು ಬಯಸುತ್ತೇನೆ.

(ಮುಂದುವರಿಯುವುದು...)

* * *

ಗಣರಾಜ್ಯ ಭಾರತದ ಆತ್ಮಾವಲೋಕನ

- ರಾಮಚಂದ್ರ ಗುಹಾ

ಸಮಕಾಲೀನ ಭಾರತದಲ್ಲಿ ಭ್ರಷ್ಟಾಚಾರ ಎಲ್ಲೆಲ್ಲೂ ವ್ಯಾಪಕವಾಗಿ ಹಬ್ಬಿದೆ. ಶಾಸಕಾಂಗ ಮಾತ್ರವಲ್ಲ ಕಾರ್ಯಾಂಗವನ್ನೂ ಇದು ವ್ಯಾಪಿಸಿದೆ. ಹಿಂದೆಲ್ಲ ಇದು ಅಧಿಕಾರಶಾಹಿಯ ಕೆಳಶ್ರೇಣಿಯಲ್ಲಿ ಕಾಣಿಸಿಕೊಳ್ಳುತ್ತಿತ್ತು. ಮನೆ ನಿವೇಶನ ಮಂಜೂರು ಮಾಡಲು, ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು, ಉದ್ಯೋಗ ಕೊಡಿಸಲು ಹಿಂದೆಲ್ಲ ಸಣ್ಣಪುಟ್ಟ ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಿದ್ದರು. ಈಚಿನ ವರ್ಷಗಳಲ್ಲಿ ಲಂಚ ತೆಗೆದುಕೊಳ್ಳುವ ಪ್ರವೃತ್ತಿ ಉನ್ನತ ವರ್ಗದ ಅಧಿಕಾರಿಗಳಲ್ಲೂ ಕಂಡುಬರುತ್ತಿದೆ. ತಮ್ಮ ವರಮಾನಕ್ಕಿಂತ ಹೆಚ್ಚಿನ ಆಸ್ತಿಪಾಸ್ತಿ ಹೊಂದಿದ್ದಾರೆಂದು ಸಿಬಿಐ ಭಾರತ ಸರ್ಕಾರದ ಕಾರ್ಯದರ್ಶಿಗಳು ಹಾಗೂ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಿರುವುದುಂಟು. ಅಧಿಕಾರಿಗಳ ಜೀವನ ಶೈಲಿಯಲ್ಲೂ ಇದು ಸ್ಪಷ್ಟವಾಗಿ ಕಾಣಿಸುತ್ತದೆ. ಅಧಿಕಾರಿಗಳು ತೋಟದ ಮನೆಗಳನ್ನು ಹೊಂದಿರುವುದು, ರಜೆಯ ದಿನಗಳನ್ನು ವಿಶ್ರಾಂತಿಧಾಮಗಳಲ್ಲಿ ಕಳೆಯುವುದು, ಇತ್ಯಾದಿ ಭೋಗಗಳು ಅಧಿಕೃತ ಸಂಬಳಸಾರಿಗೆಯಿಂದ ಸಾಧ್ಯವಿಲ್ಲ.

ಜವಹರಲಾಲ್ ನೆಹರೂ ಅವರ ಕಾಲದಲ್ಲಿ ಸಿವಿಲ್ ಅಧಿಕಾರಿಗಳನ್ನು ರಾಜಕಾರಣಿಗಳ ಕಾಕದೃಷ್ಟಿಯಿಂದ ರಕ್ಷಿಸಲಾಗಿತ್ತು. ರಾಜಕೀಯ ಮರ್ಜಿ ಇರಲಿಲ್ಲ. ಅವರ ಬಡ್ತಿ ಇತ್ಯಾದಿಗಳನ್ನು ಕಾರ್ಯಾಂಗವೇ ನಿರ್ಧರಿಸುತ್ತಿತ್ತು. ೧೯೭೦ರ ನಂತರ ಅಧಿಕಾರಿಗಳು ರಾಜಕಾರಣಿಗಳೊಂದಿಗೆ ಅಥವಾ ರಾಜಕೀಯ ಪಕ್ಷಗಳೊಂದಿಗೆ ಸಖ್ಯ ಬೆಳೆಸಲು ಶುರು ಮಾಡಿದರು. ಈ ನಂಟು ದಿನೇದಿನೇ ಗಾಢವಾಯಿತು. ತಮ್ಮ ಮಿತ್ರಪಕ್ಷ ಅಧಿಕಾರದಲ್ಲಿದ್ದಾಗ ಇಂಥ ಅಧಿಕಾರಿಗಳು ರಾಜಕಾರಣಿಗಳ ಪಕ್ಷಪಾತಿ ಕಾರ್ಯಸೂಚಿಯ ಅನುಷ್ಠಾನಕ್ಕೆ ಸಹಾಯ ಮಾಡುತ್ತಿದ್ದರು. ಇಂಥ ಕಾರ್ಯಸೂಚಿಯನ್ನು ಉತ್ಸಾಹದಿಂದ ಜಾರಿಗೆ ಕೊಡುತ್ತಿದ್ದರು. ವ್ಯವಹಾರ ಸಣ್ಣದಿರಲಿ, ದೊಡ್ಡದಿರಲಿ ಅಧಿಕಾರಿಗಳು ಸಚಿವರುಗಳ ಜೊತೆ ನಿಕಟವಾಗಿ ಸ್ನೇಹದಿಂದ ಕೆಲಸ ಮಾಡುತ್ತಿದ್ದರು. ಹೀಗೆ ತಮ್ಮ ಅನುಕೂಲಕ್ಕೆ ಒದಗುವ ಅಧಿಕಾರಿಗಳಿಗೆ ಲಂಚದಲ್ಲಿ ಹಿಸ್ಸೆ ಸಿಗುತ್ತಿತ್ತು. ಈ ಕೊಳಕು ವ್ಯವಸ್ಥೆ ಕೆಳಮಟ್ಟದವರೆಗೂ ವ್ಯಾಪಿಸಿದ್ದು ಇಗ ಎಂ.ಎಲ್.ಎ.ಗಳೂ ತಮ್ಮ ಜಿಲ್ಲೆಗಳಲ್ಲಿ ತಮ್ಮವರೇ ಆದ ಜಿಲ್ಲಾ ಮ್ಯಾಜಿಸ್ಟ್ರೇಟರುಗಳನ್ನು, ಪೊಲೀಸ್ ಅಧಿಕಾರಿಗಳನ್ನು ಹೊಂದಿರುಲು ಇಚ್ಚಿಸುತ್ತಾರೆ.

ಪಿ.ಎಸ್.ಅಪ್ಪು ಅವರು ಹೇಳಿರುವಂತೆ, ಭಾರತದ ಸಂಸ್ಥಾಪಕರು ಸಿವಿಲ್ ಅಧಿಕಾರಿಗಳ ಸ್ವಾಯತ್ತತೆ ಮತ್ತು ಪ್ರಾಮಾಣಿಕತೆಯನ್ನು, ಋಜುತ್ವವನ್ನು ಗೌರವಿಸುತ್ತಿದ್ದರು. ತಮ್ಮನ್ನು ಟೀಕಿಸಲು, ತಮ್ಮನ್ನು ತಿದ್ದಲು ಕಾರ್ಯದರ್ಶಿಗಳು ಹಿಂಜರಿಯಬಾರೆಂದಬುದು ವಲ್ಲಭಭಾಯಿ ಪಟೇಲರ ನಿಲುವಾಗಿತ್ತು. ಹಾಗಾದಲ್ಲಿ ಸಚಿವರು ಅಥವಾ ಸರ್ಕಾರ ಸಂದರ್ಭೋಚಿತವಾದ ಉತ್ತಮ ನಿರ್ಧಾರ ಕೈಗೊಳ್ಳಲು

ಸಾಧ್ಯವಾಗುತ್ತದೆ ಎಂದು ಅವರು ಹೇಳುತ್ತಿದ್ದರು. ಆದರೆ ಇಂದಿರಾ ಗಾಂಧಿಯವರು ರಾಜ್ಯಗಳಲ್ಲಿ ತಮಗೆ ನಿಷ್ಠರಾದವರನ್ನು ಮಾತ್ರ ಮುಖ್ಯಮಂತ್ರಿ ಸ್ಥಾನಕ್ಕೆ ನೇಮಿಸುವ ಪರಿಪಾಠ ಆರಂಭಿಸಿದಾಗ ಈ ನಿಷ್ಠಾವಂತರೂ ತಮ್ಮ ಅಧೀನರನ್ನು ನೇಮಿಸಿಕೊಳ್ಳುವಾಗ ಇದೇ ಮಾನದಂಡ ಅನುಸರಿಸಿದರು. ಹೀಗಾಗಿ, ಕೆಲವೇ ದಿನಗಳಲ್ಲಿ ಸರ್ಕಾರದ ಇಲಾಖೆಯ ಕಾರ್ಯದರ್ಶಿಗಳು ಮಂತ್ರಿಗಳ ಇಚ್ಛಾನುವರ್ತಿಗಳಾದರು.

ಆಡಳಿತವನ್ನು ರಾಜಕೀಯಗೊಳಿಸುವುದರಿಂದ ಆಗುವ ದುಷ್ಪರಿಣಾಮಗಳನ್ನು ಎತ್ತಿ ತೋರಿಸುವ ಪತ್ರವೊಂದನ್ನು ನಿವೃತ್ತ ಸಿವಿಲ್ ಅಧಿಕಾರಿ ಎಂ.ಎನ್.ಬುಷ್ ಅವರು ಪ್ರಧಾನಮಂತ್ರಿಗೆ ಬರೆದಿದ್ದರು. ಈಗ ಸರ್ಕಾರ ನಡೆಯುತ್ತಿರುವ ರೀತಿ ಗಮನಿಸಿದರೆ ಪೊಲೀಸರೂ ಸೇರಿದಂತೆ ಸಿವಿಲ್ ಸೇವೆಯಲ್ಲಿ ಶಿಸ್ತುಬದ್ಧಶ್ರೇಣಿಯ ವ್ಯವಸ್ಥೆ ಕುಸಿದುಬಿದ್ದಿರುವಂತೆ ಕಾಣಿಸುತ್ತದೆ. ಸರಿಯಾಗಿ ದಕ್ಷತೆಯಿಂದ ಕೆಲಸ ನಿರ್ವಹಿಸಿದ ಅಧಿಕಾರಿಯನ್ನು ಮೇಲಧಿಕಾರಿ ದಂಡಿಸಿದರೆ, ದಂಡನೆಗೊಳಗಾದ ಅಧಿಕಾರಿ ರಾಜಕಾರಣಿಗಳಿಗೆ ಮೊರೆಹೋಗುತ್ತಾನೆ. ಇವರ ನೆರವಿನಿಂದ ತಾನೆಸಗಿದ ತಪ್ಪುಗಳಿಂದ ಮುಕ್ತನಾಗುತ್ತಾನೆ ಹಾಗೂ ಮೇಲಧಿಕಾರಿಗಳಿಗೆ ತೊಂದರೆಯುಂಟುಮಾಡುತ್ತಾನೆ. ಕರ್ತವ್ಯ ಭ್ರಷ್ಟರನ್ನು ದಂಡಿಸಲು ಸಾಧ್ಯವಿಲ್ಲ ಎನ್ನುವಂಥ ಪರಿಸ್ಥಿತಿಯಲ್ಲಿ ಯಾರಿಗೆ ಯಾರೂ ಉತ್ತರದಾಯಿಯಲ್ಲ, ಕೆಲಸ ಕಾರ್ಯಗಳ ಮೇಲುಸ್ತುವಾರಿ ಇಲ್ಲ, ಹಣಕಾಸು ವೆಚ್ಚದಲ್ಲಿ ಶಿಸ್ತಿಲ್ಲ. ಹೀಗಾಗಿ ಇಡೀ ಆಡಳಿತ ವ್ಯವಸ್ಥೆ ಕುಸಿದು ಬೀಳುವ ಲಕ್ಷಣಗಳು ಗೋಚರಿಸುತ್ತಿವೆ ಎಂದು ಅವರು ಪತ್ರದಲ್ಲಿ ಆಡಳಿತದ ಶೋಚನೀಯ ಸ್ಥಿತಿಯನ್ನು ವಿಶ್ಲೇಷಿಸಿದ್ದಾರೆ.

ವಿಶೇಷವಾಗಿ ಉತ್ತರ ಭಾರತದಲ್ಲಿ, ರಾಜಕಾರಣಿಗಳ ಮತ್ತು ಸಿವಿಲ್ ಅಧಿಕಾರಿಗಳ ನಡುವಣ ನಂಟು ಜಾತಿ ಆಧಾರಿತವಾಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದಾಗ ಹಿಂದುಳಿದ ವರ್ಗದವರಿಗೆ, ವಿಶೇಷವಾಗಿ ಯಾದವ ಅಧಿಕಾರಿಗಳಿಗೆ ಮುಖ್ಯ ಹುದ್ದೆಗಳು, ಪ್ರಭಾವಕಾರಿ ಹುದ್ದೆಗಳು ಸಿಗುತ್ತವೆ. ಬಹುಜನ ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬಂದಾಗ ಯಾದವರು ಹೋಗಿ ಅವರ ಜಾಗಕ್ಕೆ ದಲಿತರು ಬರುತ್ತಾರೆ. ಭ್ರಷ್ಟಾಚಾರ ಕೆಲವೊಮ್ಮೆ ಜಾತಿ ಆಧಾರದ ಮೇಲೆ ನಡೆದರೆ ಇನ್ನು ಕೆಲವೊಮ್ಮೆ ಕೌಟುಂಬಿಕ ಆಧಾರಗಳ ಮೇಲೆ ನಡೆಯುತ್ತದೆ. ಅಕ್ರಮವಾಗಿ ಸಂಪಾದಿಸಿದ ಹಣದಿಂದ ತಮ್ಮ ಮಕ್ಕಳಿಗೆ ದುಬಾರಿ ಶಾಲೆಗಳಲ್ಲಿ, ವಿದೇಶಗಳಲ್ಲಿ ಶಿಕ್ಷಣ ಕೊಡಿಸುತ್ತಾರೆ. ಇಂಥ ಗಳಿಕೆಯಿಂದ ಸಾಮಾನ್ಯವಾಗಿ ಮುಂದಿನ ತಲೆಮಾರನ್ನು ರೂಪಿಸುತ್ತಾರೆ.

ವಿಚಿತ್ರವೆಂದರೆ, ಭಾರತ ಸರ್ಕಾರದಲ್ಲಿ ಭ್ರಷ್ಟಾಚಾರವನ್ನು ಅನುಕರಿಸುತ್ತಿರುವ ಕೆಲವರು ಸರ್ಕಾರದ ನಾಶಕ್ಕಾಗಿಯೇ ಈ ಮಾರ್ಗವನ್ನು ಅನುಸರಿಸುತ್ತಿರುವುದು, ಬಳಸುತ್ತಿರುವುದು. ಈಶಾನ್ಯ ಭಾರತದಲ್ಲಿ ದಂಗೆಕೋರರಿಗೆ ದುಡ್ಡಿಗಾಗಿ ವ್ಯಕ್ತಿಗಳನ್ನು ಅಪಹರಿಸುವುದು ಹಾಗೂ ಈ ರೀತಿ ಬಂದ ಹಣವನ್ನು ಜನಾಂಗೀಯ ಅಥವಾ ರಾಷ್ಟ್ರ ಸ್ವಾತಂತ್ರ್ಯ ಹೋರಾಟಕ್ಕಾಗಿ ವ್ಯಯಮಾಡುವುದು ಒಂದು ದಂಧೆಯೇ ಆಗಿಹೋಗಿದೆ. ಪುಟ್ಟ ನಗರ ತ್ರಿಪುರಾದಲ್ಲಿ ೧೯೯೭ ಮತ್ತು ೨೦೦೦ ನಡುವಣ ಅವಧಿಯಲ್ಲಿ ೧೩೩೪ಳ ಮಾನವ ಅಪಹರಣ ಪ್ರಕರಣಗಳು ವರದಿಯಾಗಿವೆ. ಇಲ್ಲಿ ವರ್ಷಕ್ಕೆ ಸರಾಸರಿ ಇಂಥ ೩೦೦ ಅಪಹರಣಗಳಾಗುತ್ತವೆ. ಅಪಹರಿಸಿದ ಸಣ್ಣ

ಮಗುವನ್ನು ತಂದೆ ತಾಯಿಗಳಿಗೊಪ್ಪಸಲು ೨೦ ಸಾವಿರ ಬಿಡುಗಡೆಯ ಹಣ ಕೇಳಲಾಗುತ್ತದೆ. ಚಹಾ ತೋಟದ ಮ್ಯಾನೇಜರನ್ನು ಅಪಹರಿಸಿದಲ್ಲಿ ಈ ಮೊತ್ತ ಮೂರು ದಶಲಕ್ಷ ರೂ.ಗಳವರೆಗೂ ಏರುತ್ತದೆ.

೧೯೮೭ರ ಜನವರಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಗೆರಿಲ್ಲಾಗಳನ್ನು ಪುರುಷಸಿಂಹರಂತೆ ವೈಭವೀಕರಿಸಿದ್ದಕ್ಕಾಗಿ ಮೇಘಾಲಯದ ಮಾಜಿ ಮುಖ್ಯಮಂತ್ರಿ ಬಿ.ಬಿ.ಲಿಂಗ್ಡೋ ಮಾಧ್ಯಮಗಳನ್ನು ತರಾಟೆಗೆ ತೆಗೆದುಕೊಂಡಿದ್ದರು. ಅವರು ಹೇಡಿಗಳು, ಕಳ್ಳರು, ದರೋಡೆಕೋರರು, ದುಡ್ಡು ವಸೂಲಿ ಮಾಡುವವರು ಅಷ್ಟೇ ಎಂದು ಗೆರಿಲ್ಲಾಗಳನ್ನು ಕಂಠೋಕ್ತ ಜರಿದಿದ್ದರು. "ಈಶಾನ್ಯದಲ್ಲಿ ಎರಡು ದಶಕಗಳ ಹಿಂದೆಯೇ ದಂಗೆ ಎನ್ನುವುದರ ಉಸಿರು ಅಡಗಿಹೋಯಿತು" ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಉಳಿದ ರಾಜಕಾರಣಿಗಳು ಇಷ್ಟು ಧೈರ್ಯವಾಗಿ ಮಾತನಾಡುತ್ತಿರಲಿಲ್ಲವಷ್ಟೆ. ಮಣಿಪುರದ ಬಿಜೆಪಿ ನಾಯಕರೊಬ್ಬರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ನಿರ್ಧಾರ ಕೈಗೊಂಡಿದ್ದರು. ಕೆ.ವೈ.ಕೆ.ಎಲ್ ಎನ್ನುವ ದಂಗೆಕೋರರ ಗುಂಪಿಂದು ಇವರ ವಿರುದ್ಧ ತಿರುಗಿಬಿತ್ತು. ಹೀಗಾಗಿ ಈ ನಾಯಕರು "ಹಿಂದಿನ ತಪ್ಪುಗಳಿಗೆ ತಾವು ಕ್ಷಮೆಯಾಚಿಸುವುದಾಗಿಯೂ ತಮ್ಮನ್ನು ಕ್ಷಮಿಸಬೇಕೆಂದೂ" ಕೆ.ವೈ.ಕೆ.ಎಲ್ ದಂಗೆಕೋರರಿಗೆ ಮೊರೆ ಇಡುವ ಜಾಹಿರಾತೊಂದನ್ನು ಪ್ರಕಟಿಸಬೇಕಾಯಿತು. ಈ ಜಾಹಿರಾತಲ್ಲದೆ ಉಗ್ರಗಾಮಿಗಳು ಮತ್ತು ರಾಜಕಾರಣಿಗಳ ನಡುವೆ ಖಾಸಗಿ ಒಪ್ಪಂದವೊಂದಾಗಿತ್ತು. ಈ ಘಟನೆಯನ್ನು ವರದಿ ಮಾಡಿದ ಅಂಕಣಕಾರ ಹರೀಶ್ ಖಾರೆ "ಈಶಾನ್ಯದಲ್ಲಿ ಎಲ್ಲದರಂತೆ 'ಕ್ಷಮಾದಾನ'ವೂ ದಂಗೆಕೋರರ ಗುಂಪಿನಿಂದ ಮಾರಾಟಕ್ಕಿದೆ" ಎಂದು ಬರೆದಿದ್ದರು.

ಆದರೂ ಭಾರತದ ಆಡಳಿತ ಸೇವೆ ಹಾಗೂ ಪೊಲೀಸ್ ಸೇವೆಗಳಲ್ಲಿ ಇನ್ನೂ ಪ್ರಾಮಾಣಿಕರಾದ, ಶುದ್ಧಹಸ್ತದ ಅಧಿಕಾರಿಗಳಿದ್ದಾರೆ. ವಾಗ್ರೂಪದ ಸಾಕ್ಷ್ಯಾಧಾರಗಳ ಪ್ರಕಾರ ಶೇಕಡಾವಾರು ಪ್ರಮಾಣದಲ್ಲಿ ಭ್ರಷ್ಟ ರಾಜಕಾರಣಿಗಳಿಗಿಂತ ಭ್ರಷ್ಟ ಅಧಿಕಾರಿಗಳ ಸಂಖ್ಯೆ ಕಡಿಮೆ. ಇನ್ನು ಸರ್ಕಾರದ ಮೂರನೆಯ ಅಂಗವಾದ ನ್ಯಾಯಾಂಗದ ವಿಚಾರ ಏನು? ನ್ಯಾಯಾಂಗದಲ್ಲೂ ಭ್ರಷ್ಟಾಚಾರ ಎನ್ನುವುದು ಇರಲಿಲ್ಲ. ಇದ್ದರೂ ಅಲಕ್ಷಿಸಬಹುದಾದ ಪ್ರಮಾಣದಲ್ಲಿತ್ತೆನ್ನಬಹುದು. ಜನಸಾಮಾನ್ಯರು, ಶಾಸಕರು, ಸಚಿವರು ಅಥವಾ ಅಧಿಕಾರಿಗಳಿಗಿಂತ ನ್ಯಾಯಾಧೀಶರಲ್ಲಿ ಆಸೆ ಇಟ್ಟುಕೊಳ್ಳಬಹುದಾಗಿತ್ತು. ಇದು ಖ್ಯಾತ ಸಮಾಜಶಾಸ್ತ್ರಜ್ಞ ಆಂಡ್ರೆ ಬೆಟೆಲ್ಲೆಯ ತೀರ್ಮಾನ. "ವಿಶೇಷವಾಗಿ ಉನ್ನತ ನ್ಯಾಯಾಲಯಗಳ ನ್ಯಾಯಾಧೀಶರು ಪ್ರಾಜ್ಞರೂ, ಘನಮನಸ್ಕರೂ, ಸ್ವತಂತ್ರರೂ, ಕರ್ತವ್ಯನಿಷ್ಠರೂ ಆಗಿದ್ದರು. ಇತರ ಇಲಾಖೆಗಳ ಸಹೋದ್ಯೋಗಿಗಳಲ್ಲಾಗಲೀ ಸಚಿವರುಗಳಲ್ಲಾಗಲೀ ಅಥವಾ ಕಾರ್ಯದರ್ಶಿಗಳಲ್ಲಾಗಲೀ ಕಂಡುಬರದ ಈ ಗುಣ ವಿಶೇಷಗಳು" ಅವರಲ್ಲಿದ್ದವೆಂದು ಆಂಡ್ರೆ ಬೇಟೆಲ್ಲೆ ಅಭಿಪ್ರಾಯ ಪಟ್ಟಿರುತ್ತಾರೆ.

ರಾಜಕಾರಣಿಗಳು ನಂಬಿಕಸ್ಥರಲ್ಲ, ನಂಬಿಕೆಗೆ ಅರ್ಹರಲ್ಲ, ಜೊತೆಗೆ ಸಾರ್ವಜನಿಕ ನೀತಿ ನಿರೂಪಣೆಯಲ್ಲಿ ಎಲ್ಲವು ಜಾತಿ ಮತ್ತು ಪ್ರಾದೇಶಿಕ ಗುರುತು-ಪತ್ತೆಗಳ ಆಧಾರದ ಮೇಲೆ ನಿರ್ಧಾರವಾಗುತ್ತದೆ ಎನ್ನುವಂಥ ಪರಿಸ್ಥಿತಿ ತಲೆದೋರಿದಾಗ ಹೈಕೋರ್ಟು-ಸುಪ್ರೀಂ ಕೋರ್ಟುಗಳಿಗೆ ನ್ಯಾಯಕ್ಕಾಗಿ ಮೊರೆಹೋಗುವವರ ಸಂಖ್ಯೆ ಹೆಚ್ಚಾಯಿತು. ಕಾನೂನು ಅಥವಾ ಸಂವಿಧಾನ ಉಲ್ಲಂಘನೆಗೆ ತಡೆಹಾಕಲು

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಈ ನ್ಯಾಯಾಲಯಗಳಿಗೆ ಸಲ್ಲಿಸುವ ಪ್ರವೃತ್ತಿ ಶುರುವಾಯಿತು. ಇಂಥ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಫಲವಾಗಿ ಚುನಾವಣೆ ಅಭ್ಯರ್ಥಿಗಳು ತಮ್ಮ ಆಸ್ತಿಪಾಸ್ತಿ ಬಹಿರಂಗಗೊಳಿಸಬೇಕಾಯಿತು. ಅಪರಾಧ ಹಿನ್ನೆಲೆ ಇದ್ದಲ್ಲಿ ಅದನ್ನು ಘೋಷಿಸಿಕೊಳ್ಳಬೇಕಾಯಿತು. ಹಲವಾರು ವಿಷಯಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲಾಗುತ್ತಿದೆ. ಕೈಗಾರಿಕಾ ಮಾಲಿನ್ಯದಿಂದ ಪರಿಸರ ರಕ್ಷಣೆ, ಗಿರಿಜನರಂಥ ಅನನುಕೂಲಿಗಳ ಹಿತರಕ್ಷಣೆ, ರಸ್ತೆಬದಿ ವ್ಯಾಪಾರಿಗಳು, ಅಂಗವಿಕಲರು ಇವರುಗಳ ಹಿತರಕ್ಷಣೆ ಇಂಥ ವಿಷಯಗಳನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ಮೂಲಕ ನ್ಯಾಯಾಂಗದ ಗಮನಕ್ಕೆ ತರಲಾಗುತ್ತಿದೆ.

ಪ್ರತಿಭಟನೆ, ಮನವೊಲಿಕೆ ಇಂಥ ಎಲ್ಲ ಮಾರ್ಗಗಳೂ ಮುಗಿದಾಗ ಕೊನೆಯ ಪರಿಹಾರ ಮಾರ್ಗವೆಂದರೆ ಸುಪ್ರೀಂ ಕೋರ್ಟ್, ಸುಪ್ರೀಂ ಕೋರ್ಟಿನ ಕೆಲವು ತೀರ್ಪುಗಳು ಸಾಮಾಜಿಕವಾಗಿ ವಿಮೋಚನಾಪರವಾದವು, ಪ್ರಗತಿಶೀಲವಾದವು. ಜೀತದಾಳು ಪದ್ಧತಿ ರದ್ದು, ಜೀತದಾಳುಗಳಿಗೆ ಮುಕ್ತಿ, ಭಾರತದ ಕೆಟ್ಟ ಆಡಳಿತದ ಜೈಲುಗಳನ್ನು ಸಾರ್ವಜನಿಕರ ತನಿಖೆಗೆ ತೆರೆದಿಡುವುದು ಇಂಥ ವಿಷಯಗಳಲ್ಲಿ ತೀರ್ಪುಗಳು ಸಮಾಜ ಸುಧಾರಣೆಯ ಪರವಾಗಿವೆ. ಇನ್ನು ಕೆಲವು ತೀರ್ಪುಗಳಲ್ಲಿ ರಾಜಕೀಯ ಭ್ರಷ್ಟಾಚಾರ ನಿಗ್ರಹ, ಅಕ್ರಮ ಮಾರ್ಗಗಳಿಂದ ಪಡೆದ ಲೈಸೆನ್ಸುಗಳ ರದ್ದು, ಎಂಪಿಗಳು ಮತ್ತು ಸಚಿವರುಗಳು ಲಪಟಾಯಿಸಿದ ಭೂಮಿಯನ್ನು ಮತ್ತೆ ಅದರ ನಿಜವಾದ ಒಡೆಯರಿಗೆ ಹಿಂದಿರುಗಿಸಲು ಆಜ್ಞೆ ಮಾಡಿದ್ದು ಇಂಥ ಅನ್ಯಾಯವನ್ನು ಸರಿಪಡಿಸುವ ದೃಷ್ಟಿಧೋರಣೆಗಳು ಸ್ಪಷ್ಟವಾಗಿ ಕಾಣುತ್ತವೆ. ಆದರೆ ಕೆಲವೊಮ್ಮೆ ನ್ಯಾಯಾಲಯಗಳೂ ಅಣೆಕಟ್ಟು ನಿರ್ಮಾಣದಂಥ ವಿಷಯದಲ್ಲಿ, ಸಂಕೀರ್ಣವಾದ ತಾಂತ್ರಿಕ ವಿಷಯಗಳಲ್ಲಿ ಮಿತಿಮೀರಿ ತೀರ್ಪು ಪ್ರಕಟಿಸಿರುವ ನಿದರ್ಶನಗಳೂ ಇವೆ. ಅಣೆಕಟ್ಟಿನಂಥ ವಿಷಯಗಳಲ್ಲಿ ನ್ಯಾಯಾಲಯದ ಅರ್ಹತೆಯೇ ಪ್ರಶ್ನಿಸುವಂಥದ್ದಾಗಿರುತ್ತದೆ. ಇನ್ನು ಕೆಲವು ನ್ಯಾಯಾಧೀಶರು ತಮ್ಮ ಕ್ರಿಯಾಶೀಲ ತೀವ್ರವಾದಿ ಪಾತ್ರವನ್ನು ತುಸು ಗಂಭೀರವಾಗಿ ತೆಗೆದುಕೊಳ್ಳುತ್ತಿರುವುದೂ ಉಂಟು. ಆರ್ಥಿಕ ಚಟುವಟಿಕೆಗಳನ್ನು ನಿಲುಗಡೆಗೆ ತರುವಂಥ ಹಕ್ಕುಗಳನ್ನು ಸೃಷ್ಟಿಸುವುದು, ಇಂಥ ಹಕ್ಕುಗಳ ಸೃಷ್ಟಿಯಿಂದ ಸಂಭವಿಸಬಹುದಾದ ನಿರುದ್ಯೋಗ ಮತ್ತು ಅತೃಪ್ತಿಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಇರುವುದು ಇವೇ ಮೊದಲಾದವುಗಳನ್ನು ನ್ಯಾಯಾಂಗ ತೀವ್ರವಾದಿ ಕ್ರಿಯಾಶೀಲತೆಗೆ ನಿದರ್ಶನವಾಗಿ ನೋಡಬಹುದು. ಇನ್ನು ಕೆಲವು ನ್ಯಾಯಾಧೀಶರು ಅತಿಬುದ್ಧಿವಂತಿಕೆ, ಚಾತುರ್ಯಗಳನ್ನು ಪ್ರದರ್ಶಿಸುವ ಪ್ರವೃತ್ತಿ, ಒಲವುಗಳನ್ನುಳ್ಳವರಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಉದಾಹರಣೆಗೆ: ಮಧುರೆಯ ನ್ಯಾಯಾಧೀಶರೊಬ್ಬರು ಕೊಲೆ ಬೆದರಿಕೆ ಆರೋಪ ಹೊತ್ತಿದ್ದ ಎಂ.ಎಲ್.ಎ ಒಬ್ಬರ ಜಾಮೀನು ಅರ್ಜಿಯನ್ನು ಪುರಸ್ಕರಿಸಿ ನಗರದ ಗಾಂಧಿ ವಸ್ತುಸಂಗ್ರಹಾಲಯದಲ್ಲಿ ಐದು ದಿನ ಬಿಡಾರ ಮಾಡಿ ಗಾಂಧಿ ಸಾಹಿತ್ಯ ಅಧ್ಯಯನ ಮಾಡುವಂತೆ ಆರೋಪಿಗೆ ಆದೇಶಿಸಿದ್ದರು.

ಇಲ್ಲಿಯವರೆಗೆ ನಿಯಮಿತವಾಗಿ ಚುನಾವಣೆಗಳನ್ನು ನಡೆಸಲಾಗುತ್ತಿದೆ. ಬಹುಪಕ್ಷಗಳ ವ್ಯವಸ್ಥೆ ಇದೆ. ಪತ್ರಿಕಾ ಸ್ವಾತಂತ್ರವಿದೆ. ಹೀಗಾಗಿ ನಿರ್ಣಾಯಕವಾಗಿ ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರವೇ ಸರಿ. ಆದರೆ ಇತ್ತೀಚಿನ ವರ್ಷಗಳಲ್ಲಿ ಪ್ರಜಾಸತ್ತೆಯ

ಗುಣಲಕ್ಷಣ, ಸ್ವಭಾವಗಳಲ್ಲಿ ಗಾಢವಾದ ಬದಲಾವಣೆಗಳಾಗಿವೆ. ಸ್ವಾತಂತ್ರ್ಯ ಬಂದ ನಂತರದ ಎರಡು ದಶಕಗಳ ಕಾಲ ಭಾರತ ಸಂವಿಧನಾತ್ಮಕ ಪ್ರಜಾಪ್ರಭುತ್ವವಾಗಿತ್ತು. ಸಂಸತ್ತಿನಲ್ಲಿ ವಿಧೇಯಕಗಳು, ಹೊಸ ಶಾಸನಗಳು ಚರ್ಚೆಗೊಳಪಡುತ್ತಿದ್ದವು. ಚರ್ಚೆಯಲ್ಲಿ ರಾಜಕೀಯ ಪಕ್ಷಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದವು; ತಮ್ಮದೇ ಆದ ನಿಲುವನ್ನು ತಾಳುತ್ತಿದ್ದವು. ಮೂರು ಮತ್ತು ನಾಲ್ಕನೆಯ ದಶಕಗಳು ಸಂಕ್ರಮಣ ಕಾಲ, ಈ ಅವಧಿಯಲ್ಲಿ ಅಧಿಕಾರಾರೂಢ ಕಾಂಗ್ರೆಸ್ ಪಕ್ಷ ತಾನು ಹೆಚ್ಚಿನ ಅಧಿಕಾರದಿಂದ ತನ್ನ ಕೈಬಲಪಡಿಸಿಕೊಳ್ಳುವ ಸಲುವಾಗಿ ಸಂವಿಧಾನಕ್ಕೆ ಹೊಸರೂಪ ಕೊಡುವ ಪ್ರಯತ್ನ ಮಾಡಿತು. ಇದೇ ಕಾಲಕ್ಕೆ ಕಾಂಗ್ರೆಸ್ ಸರ್ವೋಚ್ಚ ನಾಯಕಿಯ ಪಟ್ಟಾಭಿಷೇಕದ ತವಕದಲ್ಲಿ ಅಂತರಪಕ್ಷೀಯ ಪ್ರಜಾಸತ್ತೆಗೆ ವಿದಾಯ ಹೇಳಿತು. ಇನ್ನು ವಿರೋಧ ಪಕ್ಷಗಳಾದರೋ ಇದಕ್ಕೆ ಉತ್ತರವಾಗಿ ಸಂವಿಧಾನದಿಂದ ಹೊರಗುಳಿಯುವ ಪ್ರಯತ್ನಕ್ಕೆ ಕೈಹಾಕಿದವು. ಚುನಾಯಿತ ಸರ್ಕಾರಗಳನ್ನು ಮತ್ತು ಆಡಳಿತ ನಡೆಸುವ ಅವುಗಳ ಅಧಿಕಾರವನ್ನು ಕಾನೂನಿನ ಮೂಲಕ ಅಸಿಂಧುಗೊಳಿಸುವಂತೆ ಆಗ್ರಹಪಡಿಸಿ ಚಳುವಳಿ ನಡೆಸಿದವು.

ಭಾರತದೊಳಗಿನ ಯಾವುದೇ ವಿವಾದವನ್ನು ಸಂವಿಧನಾತ್ಮಕ ಮಾರ್ಗಗಳಲ್ಲಿ ಪರಿಹರಿಸಿಕೊಳ್ಳಬೇಕು. ಜನಾಂದೋಲನ, ಜನಪ್ರಿಯ ಪ್ರತಿಭಟನೆಯ ಮಾರ್ಗ ಹಿಡಿಯಬಾರದು ಎಂದು ಡಾ.ಅಂಬೇಡ್ಕರ್ ಅವರು ೧೯೪೯ರಷ್ಟು ಹಿಂದೆಯೇ ಉಪದೇಶ ಮಾಡಿದ್ದರು. ಭಕ್ತಿ ಅಥವಾ ನಾಯಕ ಪೂಜೆ ವಿರುದ್ಧವೂ ಅವರು ಎಚ್ಚರಿಕೆ ನೀಡಿದ್ದರು. ವ್ಯಕ್ತಿಗಳನ್ನು ನಾಯಕತ್ವದ ಸಿಂಹಾಸನದಲ್ಲಿ ಕೂರಿಸುವುದರಿಂದ ಅಂಥ ವ್ಯಕ್ತಿಗಳು ವಿಮರ್ಶಾತೀತರಾಗಿಬಿಡುತ್ತಾರೆ ಎನ್ನುವ ಎಚ್ಚರಿಕೆಯನ್ನೂ ಅವರು ನೀಡಿದ್ದರು.

ಡಾ.ಅಂಬೇಡ್ಕರ್ ಅವರ ಬುದ್ಧಿವಾದ, ಎಚ್ಚರಿಕೆಯ ಮಾತುಗಳನ್ನು ಕಡೆಗಣಿಸಲಾಯಿತು. ಮಂಡಲ್ ಮತ್ತು ಮಂದಿರ ವಿವಾದಗಳಲ್ಲಿ ವ್ಯಕ್ತವಾದಂತೆ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಶಾಸನ ಸಭೆಯಲ್ಲಿ ಬಗೆಹರಿಸಿಕೊಳ್ಳುವ ಬದಲು ಪರಿಹಾರಕ್ಕಾಗಿ ಬೀದಿಗಿಳಿಯಲಾಯಿತು. ಈ ಪ್ರಕ್ರಿಯೆಗೆ ಅಸ್ಮಿತೆ ಛಾಪಿಸಲು ಹುಟ್ಟಿದ ಅನನ್ಯ ರಾಜಕೀಯದ ಅಥವಾ ಸಮುದಾಯ ರಾಜಕಾರಣದ ಬೆಂಬಲ ದೊರೆಯಿತು. ಜಾತಿ ಅಥವಾ ಪ್ರದೇಶಗಳ ಆಧಾರದ ಮೇಲೆ ರಾಜಕೀಯ ಗುಂಪುಗಳಾಗಿ ಸಂಘಟಿತರಾಗುವ ಪ್ರವೃತ್ತಿ ಬೆಳೆಯಿತು. ಚರ್ಚೆಯ ಗುಣಮಟ್ಟಕ್ಕಿಂತ ಸಂಖ್ಯಾಬಲವೇ ಹೆಚ್ಚಾಯಿತು. ವಿವೇಕಯುತ ಚರ್ಚೆ ಮೂಲಕ ತಮ್ಮನ್ನು ಸಮರ್ಥಿಸಿಕೊಳ್ಳುವ ಬದಲು ಸಂಖ್ಯಾಬಲದಿಂದ ಸಮರ್ಥಿಸಿಕೊಳ್ಳಲಾರಂಭಿಸಿದರು. ಒಂದು ಕಾಲಕ್ಕೆ ಶಿಸ್ತು ಸಂಯಮಗಳಿಂದ ಕೂಡಿರುತ್ತಿದ್ದ ಸಂಸತ್‌ನ ಚರ್ಚೆ, ಕಾರ್ಯಕಲಾಪಗಳು ಪರಸ್ಪರ ಬೈಗುಳದ ಮಟ್ಟಕ್ಕೆ ಕುಸಿದವು. ಸಣ್ಣಪುಟ್ಟ ನೆಪಗಳಿಗೂ ರಾಜಕೀಯ ಪಕ್ಷಗಳು ಮುಷ್ಕರ, ಬಂದ್, ಮೆರವಣಿಗೆ, ಉಪವಾಸಗಳ ಹಾದಿ ಹಿಡಿದವು. ನ್ಯಾಯ-ನೀತಿ, ಕಾರ್ಯ-ಕಾರಣಗಳ ವಿವೇಕಯುತ ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಬದಲು ಬೆದರಿಕೆ ಮೂಲಕ ಕಾರ್ಯ ಸಾಧಿಸಿಕೊಳ್ಳುವ ಪ್ರವೃತ್ತಿ ಶುರುವಾಯಿತು. ಭಾರತದಲ್ಲಿ ಶಾಸನ ಮಾಡುವ ಶಾಸಕರು, ಬಹುತೇಕ ಶಾಸನಗಳನ್ನು ರೂಪಿಸುವುದಿಲ್ಲ. ಬದಲಾಗಿ ಶಾಸನಗಳನ್ನು ಉಲ್ಲಂಘಿಸುತ್ತಾರೆ, ಕಾನೂನುಭಂಗ ಮಾಡುತ್ತಾರೆ.

ಸಂಸತ್ತಿನ ಕಾರ್ಯಕಲಾಪಗಳ ಘನತೆಯಲ್ಲಿ ಕುಸಿತ ಹಾಗೂ ಸಾರ್ವತ್ರಿಕ ಸಂವಾದದ ಕೊರತೆ ಇವುಗಳ ಅರ್ಥವೇನು?

"ಚುನಾವಣಾ ಆದೇಶದ ಬಳಿಕ ವಿರೋಧ ಪಕ್ಷಗಳು ಹಿಂಡುಹಿಂಡಾಗಿ ಸರ್ಕಾರದ ಶಕ್ತಿಗಳ ಮೇಲೆ ಎರಗುತ್ತವೆ. ಸರ್ಕಾರ-ವಿರೋಧಪಕ್ಷಗಳು ಇಬ್ಬರಲ್ಲೂ ಸಹನೆ-ಸಹಿಷ್ಣುತೆ-ಸಂಯಮಗಳಿರುವುದಿಲ್ಲ. ಸಂಸತ್ತು ಅಥವಾ ಶಾಸನಸಭೆಗೆ ಆಡಳಿತ ನಡೆಸಲು ಮತದಾರರು ನೀಡಿರುವ ಆದೇಶವನ್ನು, ಅವರು ತೋರಿರುವ ವಿಶ್ವಾಸಾರ್ಹತೆಯನ್ನು ಗೌರವಿಸಬೇಕೆನ್ನುವ ಸಹನೆ-ಸೈರಣೆಗಳು ಇರುವುದಿಲ್ಲ. ಸಂಸತ್ತಿನ ವಿರೋಧಪಕ್ಷಗಳ ನ್ಯಾಯಯುತವಾದ, ನಿರಂತರವಾದ ಬೇಡಿಕೆಗಳನ್ನು ನಿರ್ಲಕ್ಷಿಸಿ ಸರ್ಕಾರ ಬಿಗಿಯಾದ ನಿಲುವನ್ನು ತಾಳುತ್ತದೆ. ಇಂಥ ಬಿಗಿ ನಿಲುವು ವಿಷಯವನ್ನು ಬೀದಿರಂಪಾಟಕ್ಕೆಳೆಯುವ ಸಿನಿಕತೆಗೆ ಎಡೆಮಾಡಿಕೊಡುತ್ತದೆ. ಪ್ರಜಾನಿರ್ಣಯವನ್ನು ಸಂಘಟಿಸುವುದರಲ್ಲಿ ಉಂಟಾಗುವ ಕೋಲಾಹಲ, ಹೋರಾಟಗಳ ರುಚಿಯನ್ನು ಸವಿದಿರುವ ವಿರೋಧಪಕ್ಷಗಳಿಗೆ ಇವು ಒಂದು ಚಟವಾಗಿ ಪರಿಣಮಿಸಿವೆ. ಎಂದೇ ಸಂಸದೀಯ ಚರ್ಚೆ, ಸಂಸತ್ತು-ಶಾಸನಸಭೆಗಳಲ್ಲಿ ಭಾಷಣ, ಚರ್ಚೆ, ಭಿನ್ನಾಭಿಪ್ರಾಯಗಳನ್ನು ಮಂಡಿಸುವುದು, ಕೇಳುವುದು ಇದಾವುದೂ ವಿರೋಧ ಪಕ್ಷಗಳಿಗೆ ಬೇಡವಾಗಿದೆ."

ಇದೇ ಕಾಲಕ್ಕೆ ರಾಜಕೀಯ ಪಕ್ಷಗಳೂ ಪಕ್ಷಗಳಾಗಿ ಉಳಿದಿಲ್ಲ. ಒಬ್ಬ ನಾಯಕನ ಇಷ್ಟ-ಅನಿಷ್ಟ-ಖಯಾಲಿಗಳ ವಿಸ್ತರಣೆಗಳಾಗಿವೆ. ರಾಜಕೀಯ ಭಟ್ಟಂಗಿತನವನ್ನು ಇಂದಿರಾ ಗಾಂಧಿಯವರ ಕಾಲದಲ್ಲಿ ಬೆಳೆಸಿರಬಹುದು. ಆದರೆ ಅದು ಕಾಂಗ್ರೆಸ್ಸಿಗೇ ಸೀಮಿತಗೊಳ್ಳಲಿಲ್ಲ. ಮುಲಯಂಸಿಂಗ್ ಯಾದವ್, ಲಾಲೂ ಪ್ರಸಾದ್ ಯಾದವ್, ಜಯಲಲಿತಾ ಇವರಂಥ ಪ್ರಾದೇಶಿಕ ನಾಯಕರುಗಳು ವ್ಯಕ್ತಿಪೂಜೆಯ ಉತ್ಸವದಲ್ಲಿ ವಿಜೃಂಬಿಸುತ್ತಾರೆ. ಶಿಷ್ಯಕೋಟಿಯ ಭಟ್ಟಂಗಿತನದಿಂದ ಸಂಭ್ರಮಿಸುತ್ತಾರೆ. ಪಕ್ಷದ ಸಹೋದ್ಯೋಗಿಗಳು, ಅಧಿಕಾರಿಗಳು, ಸಾರ್ವಜನಿಕರು, ಅಳ್ಳದೆಯಿಂದ ಅಡ್ಡಬೀಳುವುದನ್ನು ಪ್ರೋತ್ಸಾಹಿಸುತ್ತಾರೆ. ಅವರ ಚಮಚಾಗಿರಿಯನ್ನು ಪ್ರೋತ್ಸಾಹಿಸುತ್ತಾರೆ. ದುರಂತವೆಂದರೆ, ಡಾ.ಅಂಬೇಡ್ಕರ್ ಅವರಿಗೂ ಈ ವ್ಯಕ್ತಿಪೂಜೆಯಿಂದ ಮುಕ್ತಿ ಸಿಗಲಿಲ್ಲ. ಅಂಬೇಡ್ಕರ್ ಅವರು ಇಂದು ಜೀವಂತ ಇಲ್ಲ, ಯಾವ ಪಕ್ಷದ ಜೊತೆಗೂ ಅವರು ಸಂಬಂಧ ಹೊಂದಿರಲಿಲ್ಲ. ಅಂಬೇಡ್ಕರ್ ಅವರ ಸ್ಮರಣೆ ಬಗ್ಗೆ ಎಷ್ಟು ಪೂಜ್ಯಭಾವನೆಯಿದೆ ಎಂದರೆ ಅವರ ಕೃತಿ ಹಾಗೂ ಪರಂಪರೆಯನ್ನು ಕುರಿತು ಪೂರ್ವಾಗ್ರಹವಿಲ್ಲದ, ನಿರ್ಮಮಕಾರದ ಚರ್ಚೆ ಸಾಧ್ಯವೇ ಇಲ್ಲ ಎನ್ನುವಂತಾಗಿದೆ.

ಅರವತ್ತು ವರ್ಷಗಳ ನಂತರವೂ ಭಾರತ ಇನ್ನೂ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಉಳಿದಿದೆ. ಆದರೆ ಕಳೆದ ಎರಡು ದಶಕಗಳ ಘಟನೆಯನ್ನು ನೋಡಿದಾಗ ಪ್ರಜಾಪ್ರಭುತ್ವ ಎನ್ನುವುದಕ್ಕೆ ಹೊಸ ಅರ್ಥವನ್ನು, ಹೊಸ ಗುಣವಾಚಕವನ್ನು ಹುಡುಕಬೇಕೆನ್ನಿಸುತ್ತದೆ. ಭಾರತ ಇಂದು ಸಂವಿಧನಾತ್ಮಕ ಪ್ರಜಾಪ್ರಭುತ್ವವಾಗಿ ಉಳಿದಿಲ್ಲ. ಜನಾನುರಾಗಿ ಪ್ರಜಾಸತ್ತೆಯಾಗಿದೆ.

(ಸಾಭಾರ : ಇದೇ ಲೇಖಕರ 'ಬಾಪೂ ನಂತರದ ಭಾರತ' ಗ್ರಂಥ)

* * *

-: ವೇದದಲ್ಲಿಯ ಮುತ್ತುಗಳು :-

ಗಣಪತಿಯಲ್ಲಿ ಏಳು ಪ್ರಾರ್ಥನೆ;
ಶಿಕ್ಷಕರ ಎರಡು ಗುಣಗಳು; ಸರಸ್ವತೀಯಲ್ಲಿ ಪ್ರಾರ್ಥನೆ.

– *ವಿನೋಬಾ*

ಯೋ ವಿಶ್ವಸ್ಯ ಪ್ರತಿಮಾನಂ ಬಭೂವ

ಯಾವನು ಸ್ವತಃ ವಿಶ್ವದ ಅಳತೆಯಾಗಿದ್ದಾನೊ ಅವನ ಅಳತೆ ಹೇಗೆ ಮಾಡುವಿರಿ.

* * *

ಯಃ ಶಂಬರಂ ಪರ್ವತೇಷು ಕ್ಷಿಯಂತಂ ಚತ್ವಾರಿಷ್ಯಾಂ ಶರದ್ಯನ್ವವಿಂದತ್

ಪರ್ವತದಲ್ಲಿ ಅಡಗಿದ್ದ ರಾಕ್ಷಸನನ್ನು ಹುಡುಕಿ ತೆಗೆಯಲಾಯಿತು. ಯಾವಾಗ? ಶರದ್ ಋತುವಿನ ನಲ್ವತ್ತನೆಯ ದಿವಸ ಅಂದರೆ ದಸರೆಯ ದಿನ.

* * *

ವೇದದಲ್ಲಿ ಬೃಹಸ್ಪತಿ ಕುರಿತಾದ ಸೂಕ್ತವಿದೆ. ಅದರ ಪ್ರಾರಂಭ ಈ ರೀತಿ ಇದೆ:-

ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾ ಮುಪಮಶ್ರವಸ್ತಮಂ
ಜ್ಯೇಷ್ಠ ರಾಜಂ ಬ್ರಹ್ಮಣಾಂ ಬೃಹ್ಮಣಸತೇ ಆ ನಃ ಶುಣ್ವ ನ್ನೂತಿಭಿಃ ಸೀದ ಸಾದನಂ

ಹೇ ಬೃಹಸ್ಪತೇ! ನೀನು ಎಲ್ಲ ಗಣಗಳ ಗಣಪತಿ. ಎಲ್ಲ ಕವಿಗಳ ಕವಿ. ಎಲ್ಲ ಗಣಗಳ ಗಣಪತಿ ನೀ. ಆದ್ದರಿಂದ ನಾವು ನಿನ್ನ ಆಹ್ವಾನ ಮಾಡುತ್ತೇವೆ. ಇದರ ಅರ್ಥ ನಾವು ಇಡೀ ಸಮೂಹದ ಇಚ್ಛಾಶಕ್ತಿಗೆ ಅನುಕೂಲವಾಗಿ ಮಾಡಲಿಚ್ಛಿಸುತ್ತೇವೆ. ಆದ್ದರಿಂದ ನಾವು ಅವನನ್ನು 'ಗಣಪತಿ' ಎಂದೆನ್ನುತ್ತೇವೆ. ಇವನಿಗೆ ಬ್ರಹ್ಮಣಾಸ್ಮತಿ ಎಂದೂ ಹೇಳಲಾಗುತ್ತದೆ. ಅಂದರೆ ಬ್ರಹ್ಮಜ್ಞಾನಿ. ಇವನನ್ನೇ ಯಜ್ಞಪತಿಯೆಂದೂ ಕರೆಯುತ್ತಾರೆ. ಈತ ದೇವರ ಪುರೋಹಿತ. ಪುರೋಹಿತನೆಂದರೆ ಯಜ್ಞವನ್ನು ಹೇಗೆ ಮಾಡಬೇಕೆಂದು ತಿಳಿದವನು. ಬೃಹಸ್ಪತಿಗೆ ದೇವಗುರು ಎಂದೂ ಕರೆಯಲಾಗುತ್ತದೆ. ಭಕ್ತಿಯೋಗ, ಜ್ಞಾನಯೋಗ, ಧ್ಯಾನಯೋಗ ಮತ್ತು ಕರ್ಮಯೋಗ ಇತ್ಯಾದಿ ಎಲ್ಲ ಪ್ರಕಾರದ ಸಂದೇಶವನ್ನು ಯಾರಾದರೂ ಭಕ್ತ ಸಮೂಹಕ್ಕೆ ತಲುಪಿಸಿದರೆ ಅದು ಗಣಪತಿಯ ಭಕ್ತಿಯಾಗುವುದು.

೧) ಗಣಪತಿ ಸಮುದಾಯದ ನೇತಾರ. ಕವಿಗಳಿಗೆ ಕವಿ ಕೂಡ. ಕವಿ ಅಂದರೆ ದರ್ಶನಕಾರ, ದ್ರಷ್ಟಾ ನಿರುಕ್ತಿಯ ಪ್ರಕಾರ ಕವಿ ಎಂದರೆ ಕ್ರಾಂತದರ್ಶಿ ಅಂದರೆ ಪಾರದರ್ಶಿ. ದೇಹದ ಪರದೆಯನ್ನು ತೆಗೆದುಹಾಕಿ ಯಾರು ಆ ಕಡೆಯದನ್ನು ನೋಡಬಲ್ಲನೋ ಅಂಥ ಪಾರದರ್ಶಿ ಕವಿಗಳಲ್ಲಿ ಆತ್ಮಜ್ಞಾನಿ ಪ್ರತಿಷ್ಠಿತನಾಗಿರುತ್ತಾನೆ. ಈತ ರಾಜರಲ್ಲಿ ಜೇಷ್ಠರಾಜ. ಹೇ ಗಣಪತೇ! ನಮ್ಮ ಮಾತನ್ನು ಕೇಳುವಂಥವನಾಗು ಮತ್ತು ಕೇಳಿ ನಮ್ಮ ಮೇಲೆ ಪ್ರಸನ್ನ ಚಿತ್ತನಾಗು.

೨) ನಮ್ಮ ಪೂರ್ವಜರು ಕೂಡ ಇದೇ ರೀತಿ ಗಣಪತಿಯ ಸ್ತುತಿ ಮಾಡುತ್ತಿದ್ದರು, ಭಕ್ತಿ ಮಾಡುತ್ತಿದ್ದರು. ಆದ್ದರಿಂದ ಅವರು ಈಜಿ ಹೋದರು.

೩) ಅವರು ಗಣಪತಿಗೆ ಬೃಹಸ್ಪತಿ ಎಂದೂ ಕರೆಯುತ್ತಿದ್ದರು. ಹೇ ಬೃಹಸ್ಪತೇ! ನೀನು ದಾಂಭಿಕ ಜನರ ದ್ವೇಷ ಮಾಡುವಂಥವರ ರಾಕ್ಷಸರನ್ನು ಹನನ ಮಾಡುವಂಥವನಾಗಿದ್ದೀಯೆ ಮತ್ತು ಎಲ್ಲರನ್ನೂ ಭಕ್ತಿಯತ್ತ ತಲುಪಿಸುವಂಥವನಾಗಿದ್ದೀಯೆ.

೪) ಹೇ ಗಣಪತೇ! ಯಾವುದು ಉತ್ತಮ ನೀತಿಯೊ ಆ ನೀತಿಯಿಂದ ಎಲ್ಲ ಜನರ ಉದ್ಧಾರ ಮಾಡುತ್ತೀಯೆ, ಅದಕ್ಕಾಗಿ ನೆರವಾಗುತ್ತೀಯೆ. *ಸುನೀತಿರ್ಭಿನಯಸಿ ತ್ರಾಯಸೇ ಜನಂ* ಜನರಿಗೆ ಸುನೀತಿ ಮಾರ್ಗ ತೋರಿಸಿ ಎಲ್ಲರ ರಕ್ಷಣೆ ಮಾಡುತ್ತೀಯೆ.

೫) ನಿನಗೆ ಯಾರು ಕೊಡುತ್ತಾರೋ ಅವರು ಪಾಪ ಮುಕ್ತರಾಗುತ್ತಾರೆ. ಸಮಾಜದ ಸೇವೆಗಾಗಿ ಅರ್ಪಣೆ ಮಾಡುವಂಥವರು ಪಾಪ ಮುಕ್ತರಾಗುತ್ತಾರೆ.

ಹೇ ಗಣಪತೇ! ನೀನು ಯಾರನ್ನು ಉತ್ತಮವಾಗಿ ರಕ್ಷಿಸುತ್ತೀಯೋ ಅಂಥವರ ಕೈಯಿಂದ ಎಂದೂ ಯಾವುದೇ ಪಾಪವಾಗುವುದಿಲ್ಲ.

೬) ಹೇ ಗಣಪತೇ! ನಿನ್ನೊಳಗೆ ಎಲ್ಲ ದೇವತೆಗಳು ಸಮಾವಿಷ್ಟರಾಗಿದ್ದಾರೆ. ಈ ಎಲ್ಲ ದೇವತೆಗಳು ನಮ್ಮ ಕಲ್ಯಾಣ ಮಾಡುವರು. ಆದ್ದರಿಂದ ನಾವು ಬಲಿಷ್ಠರಾಗಿ, ನಿಷ್ಠಾವಾನರಾಗಿ ನಿನ್ನ ಗುಣಗಾನ ಮಾಡುವೆವು.

* * *

ಪಥಿ ಕೃದ್ ವಿಚಕ್ಷಣಃ

ವೇದದಲ್ಲಿ ಶಿಕ್ಷಕರ ವರ್ಣನೆ ಬರುತ್ತದೆ. ಶಿಕ್ಷಕರಲ್ಲಿ ವಿಶೇಷವಾಗಿ ಎರಡು ಗುಣಗಳಿರುತ್ತವೆ. *ಪಥಿ ಕೃದ್ ವಿಚಕ್ಷಣಃ* 'ಪಥಿಕೃತ್' ಅಂದರೆ ಪಾಥ್ ಫೈಂಡರ್, ದಾರಿಯನ್ನು ಹುಡುಕುವವನು. ಒಂದು ಬಾರಿ ದಾರಿಯ ರಚನೆಯಾಯಿತೆಂದರೆ ಎಲ್ಲ ಜನರೂ ಆ ದಾರಿಯಲ್ಲಿ ನಡೆಯುವರು ಆದರೆ ಮೊಟ್ಟಮೊದಲು ದಾರಿಯನ್ನು ಹುಡುಕುವ ಮತ್ತು ನಿರ್ಮಿಸುವ ಕೆಲಸ ಶಿಕ್ಷಕರದ್ದಾಗಿದೆ.

ಇನ್ನು 'ಪಥಿಕೃತ್' ಯಾರಾಗುವರು? ಯಾರು ವಿಚಕ್ಷಣರಾಗಿರುತ್ತಾರೋ ಅವರೇ 'ಪಥಿಕೃತ್' ಆಗಿ ಬಿಡುವನು. ವಿಚಕ್ಷಣ ಅಂದರೆ ಚಕ್ಷಣ ಮಾಡುವವನು, ನಾಲ್ಕೂ ಕಡೆ ನೋಡುವವನು. ವಿಷನ್ (vision) ಇರುವವನು. ಇಂಥ ಮನುಷ್ಯ ದಾರಿ ಹುಡುಕುತ್ತಾನೆ ಮತ್ತು ಹೊಸ ದಾರಿಯನ್ನು ನಿರ್ಮಿಸುತ್ತಾನೆ.

* * *

ವಿಶ್ವಂ ತದ್ ಭದ್ರಂ ಯದವಂತಿ ದೇವಾಃ

ಈ ವಿಶ್ವವು ಮಂಗಳವಾಗಿದೆ. ಏಕೆಂದರೆ ಪರಮೇಶ್ವರ ಅದರ ಭಾರವನ್ನು ಹೊತ್ತಿದ್ದಾನೆ. ಇಂಗ್ಲೀಷ್ ಕವಿ ಬ್ರೌನಿಂಗ್ ಕೂಡ ಹೀಗೆಯೆ ಹೇಳಿದ್ದಾನೆ. "ಈಶ್ವರ ಆಕಾಶದಲ್ಲಿ ವಿರಾಜಮಾನನಾಗಿದ್ದಾನೆ. ಇಡೀ ವಿಶ್ವ ಸರಿಯಾಗಿಯೇ ನಡೆಯುತ್ತಿದೆ."

ವಿಶ್ವದಲ್ಲಿ ಯವುದೂ ಕೆಟ್ಟದಿಲ್ಲ ಎಲ್ಲವೂ ಶುದ್ಧ ಮತ್ತು ಪವಿತ್ರ ಇವೆ. ಒಂದು ವೇಳೆ ಎಲ್ಲಿಯಾದರೂ ಕೆಟ್ಟದಿದ್ದರೆ ಅದು ನನ್ನ ದೃಷ್ಟಿಯಲ್ಲಿದೆ. ಕೆಂಪು ಕನ್ನಡಕ ಧರಿಸಿದ್ದರೆ ಇಡೀ ಸೃಷ್ಟಿ ಕೆಂಪೇ ಕೆಂಪಾಗಿ ಕಂಡು ಬರುವುದು, ಉರಿಯುತ್ತಿರುವಂತೆ ಕಂಡು ಬರುವುದು.

* * *

ಉರ್ವ ಶ್ಯಾಮ ಭಯಂ ಜ್ಯೋತಿರಿಂದ್ರ ಮಾ ನೊ ದೀರ್ಘಾ ಅಭಿನಶಂತ ಮಿಸ್ರಾಃ

ಈ ದೀರ್ಘ ತಮಿಸ್ರಾಗಳು ನಮಗೆ ತೊಂದರೆ ಕೊಡದಿರಲಿ. ತಮಿಸ್ರ ಅಂದರೆ ರಾತ್ರಿ.

ಲೋಕ ಮಾನ್ಯ ತಿಲಕರ ಪ್ರಕಾರ ವೈದಿಕ ಋಷಿಗಳು ಉತ್ತರ ಧೃವದ ಮೇಲೆ ಇರುತ್ತಿದ್ದರು. ಅಲ್ಲಿ ಆರು ತಿಂಗಳ ರಾತ್ರಿ ಇರುತ್ತದೆ. ಆದ್ದರಿಂದ ಋಷಿ ಈ ದೀರ್ಘ ರಾತ್ರಿಗಳಿಂದ ತಮಗೆ ಮುಕ್ತಿ ಕೊಡು ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಇದು ಆದಿ ಭೌತಿಕ ಅರ್ಥ. ಆಧ್ಯಾತ್ಮಿಕ ಅರ್ಥವೇನೆಂದರೆ ಅವಿದ್ಯಾರೂಪಿ ದೀರ್ಘರಾತ್ರಿಯಿಂದ ನಮ್ಮನ್ನು ಮುಕ್ತಮಾಡು. ಏಕೆಂದರೆ ಈ ರಾತ್ರಿಗಳಲ್ಲಿ ನಾವು ನೂರಾರು ಜನ್ಮ ತೆಗೆದುಕೊಂಡು ತೇಲುತ್ತಿದ್ದೇವೆ. ದೀರ್ಘವಾದ ತಮಿಸ್ರಗಳು ನನ್ನ ಮೇಲೆ ಆಕ್ರಮಣ ಮಾಡದಿರಲಿ ಅತ್ಯಂತ ವ್ಯಾಪಕ ಅಭಯ ಜ್ಯೋತಿ ನನಗೆ ಪ್ರಾಪ್ತವಾಗಲಿ, ಅಂದರೆ ನನಗೆ ಪರಮಾತ್ಮ ಜ್ಯೋತಿ ಪ್ರಾಪ್ತವಾಗಲಿ. ಯಾವ ರೀತಿ ದೀರ್ಘ ತಮಸ್ಸಿನ ಋಷಿಗೆ ದೀರ್ಘ ಅಂಧಕಾರದಿಂದ ಬರಬೇಕಾಯಿತೊ ಅಥವಾ ಯಾವ ರೀತಿ ತುಕಾರಾಮನಿಗೆ ಅನೇಕ ಯಾತನೆಗಳ ಮೂಲಕ ಕ್ರಮಿಸಬೇಕಾಯಿತೊ ಅಂಥ ಅನುಭವ ನನಗೆ ಆಗದಿರಲಿ. ನಾನು ಈ ದೀರ್ಘ ತಮಿಸ್ರಗಳಿಂದ ಅಜ್ಞಾನ ಹಾದಿಯಿಂದ ರಕ್ಷಿಸಿಕೊಳ್ಳಲು ಪ್ರಯತ್ನ ಮಾಡುವಂತಾಗಲಿ. 'ಉರೊ ಜ್ಯೋತಿ' ಜ್ಯೋತಿಯ ಈ ವರ್ಣನೆ ಇಂಗ್ಲೀಷ್‌ನ 'ಅರೋರ' ಎಂಬ ಶಬ್ದದೊಂದಿಗೆ ಹೋಲಿಕೆಯಾಗುತ್ತದೆ. ಅದರ ಅರ್ಥ ವ್ಯಾಪಕ ಜ್ಯೋತಿ. ಈ ವಾಕ್ಯ ನನಗೆ ಅತ್ಯಂತ ರಮಣೀಯ ಆಧ್ಯಾತ್ಮಿಕ ಅರ್ಥ ಕೊಡುತ್ತದೆ. ತೋರಿಕೆಯ ಕರ್ಮಯೋಗವನ್ನು ನಾನು ಎಷ್ಟೇ ಮಾಡಿದ್ದರೂ ಕೂಡ ನಮಗೆ ಶರೀರ ಬಂಧನವಿದೆ. ಆದ್ದರಿಂದ ನಿದ್ರೆ ಇತ್ಯಾದಿ ವಿಶ್ರಾಂತಿ ಅಥವಾ ನಿವೃತ್ತಿ ಭೋಗಿಸಲೇ ಬೇಕಾಗುತ್ತದೆ. ಆದರೆ ಶುದ್ಧ ಆತ್ಮಕ್ಕೆ ಇಂಥ ಯಾವುದೇ ಬಂಧನವಿಲ್ಲ. ಆದ್ದರಿಂದ ಅದರ ಅಖಂಡ ವಿಶ್ರಾಂತ ಪ್ರವೃತ್ತಿ ಜಾರಿಯಲ್ಲಿರುವುದಕ್ಕೆ ಯಾವುದೇ ಪ್ರಕಾರದ ಆಕ್ಷೇಪಣೆ ಇರುವುದಿಲ್ಲ. ಸಂತರು ಸ್ವಯಂದ ವರ್ಣನೆ ಮಾಡುತ್ತ ನಿದ್ದೆಯಲ್ಲಿ ಕೂಡ ಎಚ್ಚರವುಳ್ಳವರು ಎಂದು ಹೇಳುತ್ತಾರೆ. ವೈದಿಕ ಋಷಿಗಳು ಕೂಡ ಹೀಗೆಯೇ ಇಚ್ಛಿಸುತ್ತಾರೆ.

* * *

ನ ಮಾ ತಮತ್ ನ ಶ್ರಮತ್ ನೂತ ತಂದ್ರತ್

ನಮಗೆ ಆಲಸ್ಯದಿಂದ ಆಯಾಸದಿಂದ ನಿದ್ರೆ ಬರದೇ ಇರಲಿ. "ಇಡೀ ಜೀವನ ಕರ್ಮದ ಜಂಜಾಟದಿಂದ ಏಕೆ ತುಂಬಿರಬೇಕು?" ಈ ಪ್ರಕಾರದ ಅಳು ಅವರಿಗೆ ಜ್ಞಾತವಿರಲಿಲ್ಲ.

* * *

ಸರಸ್ವತೀ ತ್ವಾ ಮಸ್ಮಾ ಅವಿಡ್ಡಿ ಮರೋತ್ವತೀ ಧೃಶತೀ ಜೇಷಿ ಶತ್ರೂನ್

ಹೇ ಸರಸ್ವತಿ! ನೀನು ನಮ್ಮನ್ನು ದಿನಾಲೂ ರಕ್ಷಿಸು, ನಿನ್ನ ಕೃಪೆಯಿಂದಲೇ ವಿಚಾರಗಳ ಪ್ರವಾಹ ಹರಿಯಲಾರಂಭಿಸುತ್ತದೆ. ಬ್ರಾಥ ಮೌಲ್ಯಗಳ ಮೇಲೆ ದಾಳಿ ನಡೆಯುತ್ತದೆ ಮತ್ತು ಶತ್ರು ಪರಾಸ್ತಾನಾಗುತ್ತಾನೆ. ಶತ್ರು ಇನ್ನಾರೂ ಅಲ್ಲ, ತಪ್ಪು ವಿಚಾರವೇ ಶತ್ರು. ಯಾವುದಾದರೂ ತಪ್ಪು ವಿಚಾರ ಬಂದು ಅದು ಹೋಗಿ ಬಿಟ್ಟರೆ ಶತ್ರು ಹೋಗಿ ಬಿಡುತ್ತಾನೆ. ಈ ಕೆಲಸ ಸರಸ್ವತಿಯದು. ಇಂದ್ರ ಮತ್ತು ಅಗ್ನಿಯ ಕೆಲಸ ಕೂಡ ಸರಸ್ವತಿಯ ಸಹಾಯವಿಲ್ಲದೆ ನಡೆಯುವುದಿಲ್ಲ ಎಂದು ವರ್ಣನೆ ಬಂದಿದೆ. ಇಂದ್ರ ಮತ್ತು ಅಗ್ನಿ ಇಬ್ಬರೂ ದೇವತೆಗಳ ರೂಪ. ಅಗ್ನಿ ವೈರಾಗ್ಯ ಮೂರ್ತಿ ಮತ್ತು ಇಂದ್ರ ಜ್ಞಾನಮೂರ್ತಿ ಸರಸ್ವತಿಯೊಂದಿಗೆ ಬನ್ನಿ ಎಂದೂ ಇಂದ್ರ ಹಾಗೂ ಅಗ್ನಿಯನ್ನು ಋಷಿ ಆಹ್ವಾನಿಸಿದ್ದಾನೆ.

* * *

ಜನಪದ ವ್ಯಕ್ತಿ

ನಾಮದೇವ ಶಣೈ

ನಾಮದೇವ ಶಣೈ ಎಂಬ ಹೆಸರು ಕೇಳಿದೊಡನೆ ಕಾಸರಗೋಡು ಮತ್ತು ಉತ್ತರ ಕನ್ನಡ ಜಿಲ್ಲೆಯ ಶಾಲಾ ಮಕ್ಕಳು ಜೈ ಜಗತ್ ಎಂಬ ಘೋಷಣೆ ಮಾಡುತ್ತಾರೆ. ಜೈ ಜಗತ್ ಘೋಷಣೆ ಸಂತ ವಿನೋಬಾರವರಿಂದ ಭೂದಾನ ಪಾದಯಾತ್ರೆ ಸಂದರ್ಭದಲ್ಲಿ ಕರ್ನಾಟಕದ ನೆಲದಿಂದ ಜಗತ್ತಿಗೆ ಕೊಟ್ಟ ವಿಶಿಷ್ಟವಾದ ಘೋಷಣೆ. ಈ ಘೋಷಣೆಯನ್ನು ಮತ್ತು ಘೋಷಣೆಗೆ ಸಂಬಂಧಿಸಿದ ಹಾಡನ್ನು ನಾಮದೇವ ಶಣೈರ ಬಾಯಿಯಿಂದ ಕೇಳಬೇಕು. ಏಕೆಂದರೆ ೮೭ ವರ್ಷದ ಹಿರಿಯನ ಕಂಠದಿಂದ ಬಂದ ಈ ಘೋಷಣೆ ಮತ್ತು ಹಾಡನ್ನು ದೂರದಿಂದ ಕೇಳುವವರಿಗೆ ೨೮ ವರ್ಷ ವಯಸ್ಸಿನ ಯುವಕ ಹಾಡುತ್ತಿರುವನೇನೊ ಎಂದು ಭಾಸವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಶಾಲಾ ಅಧ್ಯಾಪಕರಿಗೆ ಮತ್ತು ಶಿಕ್ಷಣಾಧಿಕಾರಿಗಳಿಗೆ ಸಾರ್ವಜನಿಕ ಮುಖಂಡರಿಗೆ ಶಣೈ ಚಿರಪರಿಚಿತರು. ಇವರು ಗಾಂಧೀಯವರ ಸರ್ವೋದಯ ವಿಚಾರಕ್ಕೆ ಕೆಲಸ ಮಾಡುತ್ತಿರುವಂಥ ನಿಷ್ಠಾವಂತ ಕಾರ್ಯಕರ್ತರು. ಕರ್ನಾಟಕದ ಮಟ್ಟಿಗಂತೂ ಇವರೊಬ್ಬ ಶ್ರೇಷ್ಠ ಸರ್ವೋದಯ ಕಾರ್ಯಕರ್ತ. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಶೆಣೈಯವರು ಭಾಗಿಯಾಗಿ ೧೯೪೨ರ ಗಾಂಧೀ ಜಯಂತಿ ದಿನವಾದ ಅಕ್ಟೋಬರ್ ೨ರಂದು ಬಂಧಿತರಾಗಿ ಕಾರಾಗೃಹ ಸೇರಿದರು. ಬಳ್ಳಾರಿ ಕಾರಾಗೃಹದ ಕತ್ತಲ ಕೋಣೆಯಲ್ಲಿ ಎರಡೂವರೆ ವರ್ಷ ಶಿಕ್ಷೆ ಅನುಭವಿಸಿ ೧೯೪೫ರಲ್ಲಿ ಬಿಡುಗಡೆಗೊಂಡರು. ಬಿಡುಗಡೆಯ ನಂತರ ತಮ್ಮನ್ನು ದೇಶ ಸೇವೆಗಾಗಿ ಸಮರ್ಪಿಸಿಕೊಂಡರು. ಗಾಂಧೀ, ವಿನೋಬಾ, ಪರಮಹಂಸ, ವಿವೇಕಾನಂದರ ಚಿಂತನೆಗಳಿಂದ ಶಣೈ ಪ್ರಭಾವಿತರಾದರು. ಈ ಎಲ್ಲ ಮಹಾಪುರುಷರ ಸಾಹಿತ್ಯವನ್ನು ಮತ್ತು ವಿಚಾರವನ್ನು ಹಳ್ಳಿಹಳ್ಳಿಗೆ, ಮನೆಮನೆಗೆ ತಲುಪಿಸಿಸುವ ಸಂಕಲ್ಪ ತೊಟ್ಟರು. ತಕ್ಷಣವೇ ಕಾರ್ಯಪ್ರವೃತ್ತರಾದರು. ಸಾಹಿತ್ಯ ಕೃತಿಗಳ ಗಂಟನ್ನು ತಲೆಯ ಮೇಲೆ ಇರಿಸಿಕೊಂಡು ಶಾಲೆಗಳತ್ತ ನಡೆಯುತ್ತಾರೆ. ಆಹ್ವಾನವಿರದಿದ್ದರೂ ತಮ್ಮ ವ್ಯಕ್ತಿತ್ವ ಬಲದಿಂದ ಮತ್ತು ವಿಚಾರಗಳ ಬಲದಿಂದ ಅಧ್ಯಾಪಕರ ಅನುಮತಿ ಪಡೆದು ಸಭೆ ನಡೆಸಿಬಿಡುತ್ತಾರೆ. ಘಂಟಾನಾದದಂಥ ಅವರ ಧ್ವನಿ, ವಿಚಾರ ಮತ್ತು ರಾಗಬದ್ಧ, ಪ್ರಾಸಬದ್ಧ ದೇಶ ಭಕ್ತಿಗೀತೆಗಳನ್ನು ಕೇಳಿ ಅಧ್ಯಾಪಕರೂ, ವಿದ್ಯಾರ್ಥಿಗಳೂ ಮಂತ್ರಮುಗ್ಧರಾಗುತ್ತಾರೆ. ಪ್ರಾರಂಭದಲ್ಲಿ ಶೆಣೈಯವರ ಕಾರ್ಯಕ್ರಮದ ಬಗ್ಗೆ ಅನುಮಾನ ಹೊಂದಿರುತ್ತಿದ್ದ ಅಧ್ಯಾಪಕರು ಕಾರ್ಯಕ್ರಮದ ನಂತರ ಅವರ ಬಗ್ಗೆ ಅಪಾರ ಗೌರವ ಮತ್ತು ಅಭಿಮಾನ ಬೆಳೆಸಿಕೊಳ್ಳುತ್ತಾರೆ. ಪುನಃ ತಮ್ಮ ಶಾಲೆಗೆ ಬರಬೇಕೆಂದು ಆಹ್ವಾನಿಸುತ್ತಾರೆ. ಕಾರ್ಯಕ್ರಮ ಮುಗಿದೊಡನೆ ಶಣೈ ಹೊರಹೊರಟರೆ ಶಾಲಾಮಕ್ಕಳು 'ಕಿಂದರ ಜೋಗಿಯ ಹಿಂದೆ ಮಕ್ಕಳು ಹೊರಟಂತೆ' ಅವರ ಬೆನ್ನು ಹಿಡಿಯುತ್ತಾರೆ. ಅವರು ತೆಗೆದುಕೊಂಡು ಹೋದ ಸಾಹಿತ್ಯ ಬಿಸಿದೋಸೆಯಂತೆ ಖರ್ಚಾಗಿ ಬಿಡುತ್ತದೆ.

ಶಣೈಯವರ ದೇಶಭಕ್ತಿಯ ಈ ಕಾರ್ಯಕ್ರಮವನ್ನು ಮನಗೊಂಡು ಕಾಸರಗೋಡು ಮತ್ತು ಉ.ಕನ್ನಡ ಜಿಲ್ಲೆಯ ಶಿಕ್ಷಣಾಧಿಕಾರಿಗಳು ಎಲ್ಲ ಶಾಲೆಗಳಿಗೆ ಸುತ್ತೋಲೆ ಕಳುಹಿಸಿ ನಾಮದೇವ ಶಣೈಯವರನ್ನು ಸ್ವಾಗತಿಸಬೇಕೆಂದು ತಿಳಿಸಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರ ತನ್ನ ಸಾರಿಗೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಲು ಉಚಿತ ಪಾಸು ಕೊಟ್ಟಿದೆ. ಈಗ ಬದಿಯಡ್ಕದಲ್ಲಿ 'ವಿಶ್ವ ಮೈತ್ರಿ ಟ್ರಸ್ಟನ್ನು ಕಟ್ಟಿ ತಮ್ಮದೇ ಧಾಟಿಯಲ್ಲಿ ಸರ್ವೋದಯದ ಕೆಲಸ ಮಾಡಿಕೊಂಡು ಹೋಗುತ್ತಿರುವ ಶಣೈ ಸಮಾಜಕ್ಕೆ ಮಾದರಿಯಾಗಿದ್ದಾರೆ. ನಾಮದೇವ ಶಣೈಯವರು ಕರ್ನಾಟಕ ಸರ್ವೋದಯ ಮಂಡಲದ ಸದಸ್ಯರೂ ಆಗಿದ್ದಾರೆ.

ಜನಪದ ಸೇವಾ ಟ್ರಸ್ಟ್ ಸಮಾಚಾರ

ಮೈಸೂರಿನಲ್ಲಿರುವ ಅರಿವು ವಿದ್ಯಾಸಂಸ್ಥೆಯವರು ಇತ್ತೀಚೆಗೆ ತಮ್ಮ ಸಂಸ್ಥೆ ಆವರಣದಲ್ಲಿ 'ಕಾನನ ಹಬ್ಬ' ಆಚರಿಸಿದರು. ಈ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದ ಆಟಗಳು, ಗೃಹ ಕೈಗಾರಿಕೆಗಳು ಮತ್ತು ಗ್ರಾಮೀಣ ಜೀವನದ ಪರಿಯಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಕೆಲವು ಮಳಿಗೆಗಳನ್ನು ಸಹ ಏರ್ಪಡಿಸಿದ್ದರು. ಜನಪದ ಸೇವಾ ಟ್ರಸ್ಟಿನ ಪರವಾಗಿ ಸಂತೋಷ್ ಕೌಲಗಿಯವರು ಭಾಗವಹಿಸಿದ್ದರು. ಈ ಹಬ್ಬದ ಸಂದರ್ಭದಲ್ಲಿ ಟ್ರಸ್ಟಿನ ಖಾದಿ ಉತ್ಪನ್ನಗಳನ್ನು ಮತ್ತು ಸಾಹಿತ್ಯವನ್ನು ಮಾರಾಟಮಾಡಲಾಯಿತು. ಒಂದು ದಿನದ ಈ ಕಾರ್ಯಕ್ರಮದಲ್ಲಿ ಟ್ರಸ್ಟಿನ ಸುಮಾರು ಹದಿನಾರು ಸಾವಿರ ರೂಪಾಯಿ ಖಾದಿ ಸಿದ್ಧಉಡುಪು ಮಾರಾಟವಾದವು.

ಟ್ರಸ್ಟಿನ ಅಭಿಮಾನಿ ಬೆಂಗಳೂರಿನ ಶ್ರೀಕಾಂತ ಮತ್ತು ಅವರ ಕುಟುಂಬ ಟ್ರಸ್ಟಿನಲ್ಲಿ ಎರಡು ದಿನ ಇದ್ದು ಹೋದರು.

ಹಳೆಯ ವಿದ್ಯಾರ್ಥಿ ನಾಗೇಂದ್ರ ಹಾಗೂ ಅವರ ಪತ್ನಿ ಟ್ರಸ್ಟಿಗೆ ಭೇಟಿಕೊಟ್ಟರು. ನಾಗೇಂದ್ರರವರು ಟ್ರಸ್ಟಿನ ಮೇಲಿನ ಪ್ರೀತಿಯಿಂದ ಎರಡು ಸಾವಿರ ರೂಪಾಯಿ ದಾನವಾಗಿ ಕೊಟ್ಟರು.

ಟ್ರಸ್ಟಿನ ಖಾದಿ ಸಿದ್ಧಉಡುಪು ವಿಭಾಗದ ಎಂಟು ಮಹಿಳೆಯರಿಗೆ ಸಂತೋಷ್ ಕೌಲಗಿಯವರು ಟಿ.ಎ.ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಿಂದ ಹೆಣ್ಣು ಮಕ್ಕಳು ತಮ್ಮನ್ನು ತಾವು ಅರಿತು ಕೊಳ್ಳುವುದಕ್ಕೆ ಸಾಧ್ಯವಾಯಿತು.

ಕರುಣಾಗೃಹದ ಮಕ್ಕಳು ತಮ್ಮ ಶಾಲಾ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಿ ಬಂದರು.

ಕೃಷ್ಣರಾಜಪೇಟೆ ಎಂಜಿನಿಯರಿಂಗ್ ಕಾಲೇಜಿನ ೩೦ ವಿದ್ಯಾರ್ಥಿನಿಯರು ಕರುಣಾಗೃಹದ ಕಟ್ಟಡದಲ್ಲಿ ಹನ್ನೊಂದು ದಿನ ಬಾಡಿಗೆ ಆಧಾರದ ಮೇಲೆ ವಾಸವಾಗಿದ್ದರು. ಕೊನೆಯ ದಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಟ್ರಸ್ಟ್‌ನ ಪ್ರಾರ್ಥನಾ ಮೈದಾನದಲ್ಲಿ ಸೇರಿ ಗಾಂಧೀಜಿಯವರ ವಿಚಾರ ತಿಳಿದುಕೊಂಡರು.

ಮಂಡ್ಯ ಜಿಲ್ಲಾ ವ್ಯಾಪ್ತಿಯ ಆದಾಯ ತೆರಿಗೆ ಇಲಾಖೆಯವರು ೮೦-ಜಿ ಪ್ರಮಾಣ ಪತ್ರದ ಸಂಬಂಧವಾಗಿ ಟ್ರಸ್ಟಿಗೆ ಭೇಟಿಕೊಟ್ಟರು. ಲೆಕ್ಕ ಪತ್ರಗಳನ್ನು ಹಾಗೂ ಟ್ರಸ್ಟಿನ ಕಾರ್ಯಕ್ರಮಗಳನ್ನು ಪರಿಶೀಲಿಸಿದರು.

ಕರ್ನಾಟಕ ರಾಜ್ಯ ಸರ್ಕಾರದ ಕಾನೂನು ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಶ್ರೀ ವೇದಪ್ರಕಾಶ, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯವಾದಿ ಶ್ರೀಮತಿ ಮೀರಾ ಫಡ್ಕೆ ಮತ್ತು ರಾಷ್ಟ್ರೀಯ ಸೇವಾ ಸಂಸ್ಥೆಯ ನಿವೃತ್ತ ಅಧಿಕಾರಿ ಡಾ.ಎಚ್.ಎಸ್.ಸುರೇಶ್ ಟ್ರಸ್ಟಿಗೆ ಭೇಟಿಕೊಟ್ಟರು.

ಮೇಲುಕೋಟೆಯಲ್ಲಿರುವ ಹಲವಾರು ಯುವಕರು ಪರಿಸರ ರಕ್ಷಣೆಯ ಉದ್ದೇಶದಿಂದ ಹಸಿರು ಗೆಳೆಯರ ಬಳಗ ಎಂಬ ಸಂಘಟನೆಯನ್ನು ಪ್ರಾರಂಭಿಸಿದ್ದಾರೆ. ಈ ಬಳಗದ ೧೫ ಜನ ಯುವಕರು ಹೊಸ ಜೀವನದಾರಿ ಕೇಂದ್ರದಲ್ಲಿ ಎರಡು ದಿನದ ಶಿಬಿರ ನಡೆಸಿದರು. ಒಂದು ದಿನ ಸುತ್ತಲಿನ ಕಾಡಿನಲ್ಲಿ ಚಾರಣ ಮಾಡಿ ಅಲ್ಲಿಯ ಸಸ್ಯ ವೈವಿಧ್ಯ ಮತ್ತು ಪ್ರಾಣಿ ಪಕ್ಷಿಗಳ ಪರಿಚಯ ಮಾಕೊಂಡರು. ಇನ್ನೊಂದು ದಿನ ರಾಜಕುಮಾರ್ ಎಂಬ ಪರಿಸರವಾದಿ ಬಂದು ಯುವಕರಿಗೆ ಅನೇಕ ವಿಷಯ ತಿಳಿಸಿದರು. ಸ್ಥಳೀಯ ವಲಯ ಅರಣ್ಯಾಧಿಕಾರಿ ಶ್ರೀ ನಾಗರಾಜ ಬಳಗದ ಸದಸ್ಯರನ್ನು ಅಭಿನಂದಿಸಿದರು. ತಮ್ಮ ಇಲಾಖೆಯಿಂದ ಎಲ್ಲ ಸಹಕಾರ ಕೊಡುವುದಾಗಿ ತಿಳಿಸಿದರು. ಮೇಲುಕೋಟೆ ಪಕ್ಕ ಬೆಂಕಿ ಬಿದ್ದ ವಿಷಯ ಬಳಗದ ಸದಸ್ಯರಿಗೆ ಗೊತ್ತಾಯಿತು. ಅವರೆಲ್ಲ ಹೋಗಿ ಬೆಂಕಿನಂದಿಸಿದರು. ಮೇಲುಕೋಟೆ ಸುತ್ತಲಿನ ಪ್ರೌಢಶಾಲೆ ವಿದ್ಯಾರ್ಥಿಗಳನ್ನು ಪರಿಸರ ರಕ್ಷಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಯೋಜನೆ ಹಾಕಿಕೊಂಡಿದ್ದಾರೆ.

ಮೈಸೂರಿನ ಇನ್‌ಫೋಸಿಸ್ ಕಂಪನಿಯಲ್ಲಿರುವ ಯುವ ಸಿಬ್ಬಂದಿ ವರ್ಗದ ಆಹ್ವಾನದ ಮೇರೆಗೆ ಸಂತೋಷ್ ಕೌಲಗಿಯವರು ಅಲ್ಲಿಗೆ ಹೋಗಿ ಅವರಿಗೆ ಟ್ರಸ್ಟಿನ ಕಾರ್ಯಕಲಾಪದ ಬಗ್ಗೆ ಪರಿಚಯ ಮಾಡಿಕೊಟ್ಟರು. ಅವರೆಲ್ಲ ಒಟ್ಟಿಗೆ ಸೇರಿ ಟ್ರಸ್ಟಿಗೆ ಸಹಾಯ ಮಾಡುವ ಭರವಸೆ ಕೊಟ್ಟಿದ್ದಾರೆ.

ಮೈಸೂರಿನಲ್ಲಿರುವ ಟ್ರಸ್ಟಿನ ಅಭಿಮಾನಿ ವಿ.ಗಣೇಶ ಅವರು ಗೆಳೆಯರೊಂದಿಗೆ ಭೇಟಿ ನೀಡಿ ತಾವು ಪ್ರಕಟಿಸಿರುವ ಕನ್ನಡ ಅಂಕಿಗಳು ಮತ್ತು ಗಾಂಧೀ ವಿಚಾರಗಳ ಸಚಿತ್ರ ಮಾಹಿತಿಯುಳ್ಳ ೨೦೧೧ರ ಕ್ಯಾಲೆಂಡರುಗಳನ್ನು ಕೊಟ್ಟರು.

೨೦೧೧ ಜನವರಿ ಮಾಹೆಯ ದಾನಿಗಳು

ಶ್ರೀಮತಿ ಪ್ರೀತಿ.ವೈ.ರಾಮಮೋಹನ್; ಶ್ರೀಮತಿ ಮಾಲತಿ ಸಿದೆನೂರ; ಶ್ರೀಮತಿ ಹೆಚ್.ಜಿ.ಆಶಾಲತಾ; ಶ್ರೀ ಆರ್.ಆರ್.ಆನವಟ್ಟಿ; ಶ್ರೀ ಎಸ್.ಜಿ.ಸುಂದರರಾಜ್; ಶ್ರೀ ಎಂ.ಕೆ.ಸುಬ್ಬರಾವ್; ಶ್ರೀ ಎಸ್.ನಾಗಾನಂದ; ಶ್ರೀಮತಿ ಮೀರಾ ಫಡ್ಕೆ – ಬೆಂಗಳೂರು.

ಶ್ರೀ ಪಿ.ಎಸ್.ರಂಗನಾಥನ್; ಶ್ರೀಮತಿ ಮೀರಾ ರಾಮಕೃಷ್ಣ; ಕಾನನ ಬಳಗ – ಮೈಸೂರು.

ಶ್ರೀ ಕೆ.ಜೆ.ನಾಗೇಂದ್ರ – ಕೊಡಗಳ್ಳಿ.


ಶ್ರೀಮತಿ ಎಸ್.ಮಹಾದೇವಮ್ಮ – ತಾಂಡವಪುರ.

ಶ್ರೀಮತಿ ಶುಭಮತಿ – ಶಿವಮೊಗ್ಗ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

* * *

ಜನಪದ ನಿಲಯದ ಅಂತರಂಗದಲ್ಲಿ .. ೮೨

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್‌ಗೆ ಇರುವ ಅಭಿಮಾನಿಗಳ ಸಂಖ್ಯೆ ದೊಡ್ಡದಾಗಿದೆ. ಎಲ್ಲ ಅಭಿಮಾನಿಗಳ ದಾಖಲೀಕರಿಸಿದ ಹೆಸರುಗಳ ಪಟ್ಟಿ ಇಲ್ಲ. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಟ್ರಸ್ಟಿಗೆ ದೊರೆತ ಧನ ಸಹಾಯ ಅಭಿಮಾನಿಗಳ ಸಂಖ್ಯೆ ದೊಡ್ಡದಾಗಿರುವುದಕ್ಕೆ ಸಾಕ್ಷಿಯಾಗಿದೆ. ಸರ್ಕಾರದ ಅನುದಾನ ಪಡೆಯದೆ ಮತ್ತು ಯಾವೊಬ್ಬ ವ್ಯಕ್ತಿಯಿಂದ ದೊಡ್ಡ ಮೊತ್ತದ ಸಹಾಯ ಪಡೆಯದೇ ಟ್ರಸ್ಟಿನ ಸೇವಾ ಕಾರ್ಯಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಮತ್ತು ಧನಸಹಾಯ ಕೊಡುವ ವಿದೇಶದ ಸಂಸ್ಥೆಯಿಂದ ಸಹಾಯ ಪಡೆದಿಲ್ಲ. ಹೀಗೆ ಸಾರ್ವಜನಿಕ ಸಂಸ್ಥೆಯ ಈ ಎರಡು ಸಂಪನ್ಮೂಲಗಳು ಅಂದರೆ ಸರ್ಕಾರದ ಅನುದಾನ ಮತ್ತು ವಿದೇಶಿ ಸಂಸ್ಥೆಯ ಸಹಾಯ ಇವುಗಳಿಂದ ಹಣ ಪಡೆಯದೇ ಟ್ರಸ್ಟ್ ಇದುವರೆಗೆ ಸೇವಾಕಾರ್ಯವನ್ನು ಮಾಡಿಕೊಂಡು ಬರಲು ಸಾಧ್ಯವಾಗಿದೆ. ಅಂದರೆ ಹಲವಾರು ಅಭಿಮಾನಿಗಳು, ಹಲವಾರು ರೀತಿಯಲ್ಲಿ ಸಹಾಯ ಮಾಡುತ್ತಿರುವಿರೆಂದೆ ಅರ್ಥ. ಹನಿಹನಿಯಾಗಿ ಹತ್ತು ದಿಕ್ಕುಗಳಿಂದ ಟ್ರಸ್ಟ್ ಸಹಾಯ ಪಡೆಯುತ್ತಿರುವುದರಿಂದ ಅಭಿಮಾನಿಗಳ ಸಂಖ್ಯೆಯನ್ನು ಅಧಿಕೃತವಾಗಿ ಎಣಿಕೆ ಮಾಡುವುದು ಅಗತ್ಯವೆಂದು ಅನಿಸುವುದಿಲ್ಲ. ಅನಿರೀಕ್ಷಿತವಾಗಿ ಅನಿರೀಕ್ಷಿತ ವ್ಯಕ್ತಿಗಳಿಂದ ಸಹಾಯ ದೊರೆಯುತ್ತಿರುತ್ತದೆ. ಅಲ್ಲದೆ ಇಂಥ ಮಹನೀಯರ ಸಂಖ್ಯೆ ಹೆಚ್ಚು-ಕಡಿಮೆ ಆಗುತ್ತಿರುತ್ತದೆ.

ಅನಿರೀಕ್ಷಿತ ದಾನಿಗಳಲ್ಲಿ ಮಂಗಳೂರಿನ ಕೋಡಿಯಾಲ್‌ಬೈಲಿನ ಯು.ಕೆ.ಕಿಣಿಯವರೂ ಒಬ್ಬರಾಗಿದ್ದರು. ಈಗ ಇವರು ಇಲ್ಲ. ಆದರೆ ಇವರು ತಮ್ಮ ಜೀವಿತ ಕಾಲದಲ್ಲಿ ದಂಪತಿ ಸಮೇತವಾಗಿ ಟ್ರಸ್ಟಿಗೆ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಸಂತೋಷವಾಗಿ ಇದ್ದು ಎಲ್ಲರೊಂದಿಗೆ ನಗುನಗುತ್ತಾ ಮಾತನಾಡಿ ತಮ್ಮ ಭೇಟಿ ಬಹಳ ದಿನ ನೆನಪುಳಿಯುವಂತೆ ಮಾಡುತ್ತಿದ್ದರು.

ಕಿಣಿಯವರಿಗೆ ಟ್ರಸ್ಟಿನ ವಿಚಾರ ಗೊತ್ತಾದದ್ದು ಒಂದು ವಿಶಿಷ್ಟ ಸಂದರ್ಭದಲ್ಲಿ. ಕಿಣಿ ದಂಪತಿಗೆ ಒಬ್ಬ ಅಂಗವಿಕಲ ಮಗನಿದ್ದ ಮತ್ತು ಓರ್ವ ಮೇಧಾವಿ ಮಗಳಿದ್ದಳು. ಮಗಳ ಹೆಸರು ವಸುಧಾ ಈಕೆಗೆ ತನ್ನ ಅಂಗವಿಕಲ ತಮ್ಮನ ಮೇಲೆ ಅಪಾರವಾದ ಪ್ರೀತಿ. ಹೇಗಾದರೂ ಮಾಡಿ ಅವನ ಶಾರೀರಿಕ ದೌರ್ಬಲ್ಯ ನಿವಾರಿಸಿ ಅವನು ಓಡಾಡುವಂತೆ ಮಾಡಬೇಕೆಂಬುದು ಅವಳ ಹಂಬಲ. ಅವಳ ಈ ಹಂಬಲ ಆರ್ಯುವೇದಶಾಸ್ತ್ರವನ್ನು ಕಲಿಯಲು ಪ್ರೇರೇಪಿಸಿತು. ವಸುಧಾಳಿಗೆ ತನ್ನ ತಮ್ಮನ ಮೇಲಿನ ಪ್ರೀತಿ ಮತ್ತು ಅವನ ಬಗ್ಗೆ ಇರುವ ಕರುಣೆಯನ್ನು ನೋಡಿ ಅವರಿಗೆ ತುಂಬ ಸಂತೋಷವಾಯಿತು. ಮಗಳ ಪ್ರಯತ್ನಕ್ಕೆ ಪ್ರೋತ್ಸಾಹ ಕೊಟ್ಟರು. ತತ್ಪರಿಣಾಮವಾಗಿ ವಸುಧಾ ಮಂಗಳೂರಿನಿಂದ ಮೈಸೂರಿಗೆ ಬಂದಳು. ಅಲ್ಲಿಯ ಸರ್ಕಾರಿ ಆರ್ಯುವೇದ ಕಾಲೇಜಿನ ವಿದ್ಯಾರ್ಥಿನಿಯಾದಳು. ಅಲ್ಲಿ ವ್ಯಾಸಂಗ ಮಾಡುತ್ತಿರುವಾಗ ವಸುಧಾಳ ಸಂಪರ್ಕ ಶ್ರೀ ರಾಮಕೃಷ್ಣ ಆಶ್ರಮದೊಂದಿಗೆ ಉಂಟಾಯಿತು. ಅವಳು ಶ್ರೀ ಶಾರದಾಮಾತೆಯ ಜೀವನ ಮತ್ತು ಸಿದ್ಧಾಂತದಿಂದ ಪ್ರಭಾವಿತಳಾದಳು. ಕ್ರಮೇಣ ವಸುಧಾಳಲ್ಲಿ ಅಧ್ಯಾತ್ಮಿಕ ಮನೋಭಾವ ಬೆಳೆಯುತ್ತಬಂತು. ಜೊತೆಗೆ ವೈರಾಗ್ಯ

ಮನೋಭಾವದ ಬೀಜಗಳು ಅವಳ ಮನಸ್ಸಿನಲ್ಲಿ ಮೊಳೆತವು. ಹೀಗಾಗಿ ಕಡಿಮೆ ಮಾತು, ಸಂಕೋಚ ವೃತ್ತಿ ಮತ್ತು ಸೇವಾ ಭಾವನೆ ಅವಳ ಜೀವನದ ಲಕ್ಷಣಗಳಾದವು. ಅವಳು ಮೈಸೂರಿನಲ್ಲಿರುವಾಗ ಅವಳಿಗೆ ಜನಪದ ಸೇವಾ ಟ್ರಸ್ಟಿನಲ್ಲಿರುವ ಕರುಣಾಗೃಹದ ಬಗ್ಗೆ ಗೊತ್ತಾಯಿತು. ತನ್ನ ತಮ್ಮನನ್ನು ಕರುಣಾಗೃಹದಲ್ಲಿರಿಸಬಹುದೆ ಎಂದು ತಿಳಯಲು ಒಂದು ದಿನ ಮೇಲುಕೋಟೆಗೆ ಬಂದಳು. ಆಗ ಅವಳು ಸುಮಾರು ೨೦ವರ್ಷದ ಯುವತಿ. ಅವಳನ್ನು ಮೊದಲ ಸಲ ನೋಡಿದಾಗ ಅವಳೊಬ್ಬ ಕರುಣೆಯ ಮೂರ್ತಿಯಂತೆ ಕಂಡಳು. ತುಂಬ ಮೆಲು ಧ್ವನಿಯಲ್ಲಿ ತಾನು ಬಂದ ಉದ್ದೇಶವನ್ನು ತಿಳಿಸಿದಳು. ಕರುಣಾಗೃಹವನ್ನು ನೋಡಿದಳು. ಸಂತೋಷಪಟ್ಟಳು. ಆದರೆ ತನ್ನ ತಮ್ಮನ ದೌರ್ಬಲ್ಯ ಕರುಣಾಗೃಹದ ಪರಿಸ್ಥಿಗೆ ಹೊಂದಿಕೆಯಾಗವಂತಿಲ್ಲ ಎಂದು ಅನಿಸಿತು. ಆದರೆ ಕರುಣಾಗೃಹದಲ್ಲಿಯ ಇತರ ಮಕ್ಕಳ ಬಗ್ಗೆ ಅವಳ ಕರುಣೆ ಸ್ಥಾಯಿಯಾಗಿ ನಿಂತಿತು. ತದನಂತರ ಅವಳು ತನ್ನ ತಮ್ಮನನ್ನು ಮನೆಯಲ್ಲಿಯೇ ಇರಿಸಿ ತಾನು ಓದಿದ ಆಯುರ್ವೇದಶಾಸ್ತ್ರ ಪದ್ಧತಿಯಂತೆ ಅವನಿಗೆ ಉಪಚಾರ ಮಾಡುತ್ತಿದ್ದಳು. ತಮ್ಮನಿಗಾಗಿ ಮದುವೆ ಮಾಡಿಕೊಳ್ಳುವ ವಿಚಾರ ಬಿಟ್ಟಳು. ಮದುವೆಯ ಪ್ರಸ್ತಾಪವನ್ನು ಅವಳ ತಂದೆ ತಾಯಿಗಳು ಮಾಡಿದಾಗ ತನ್ನ ನಿರಾಸಕ್ತಿ ತೋರಿಸುತ್ತಿದ್ದಳು. ತನ್ನ ತಮ್ಮನ ಅಂಗವಿಕಲತೆಯ ನಿವಾರಣೆಯೇ ತನ್ನ ಜೀವನದ ಗುರಿಯೆಂದು ಹೇಳುತ್ತಿದ್ದಳು. ಅನುಕೂಲವಾದಾಗಲೆಲ್ಲ ಮಂಗಳೂರು ಮೈಸೂರು ಮಧ್ಯೆ ಓಡಾಡಿಕೊಂಡು ತನ್ನ ವಿದ್ಯಾಭ್ಯಾಸ ಮುಂದುವರಿಸುತ್ತ ಜೊತೆಗೆ ತನ್ನ ತಮ್ಮನಿಗೆ ಉಪಚಾರ ಮಾಡುತ್ತಿದ್ದಳು. ಆಯುರ್ವೇದಶಾಸ್ತ್ರದಲ್ಲಿ ಪಧವೀದರಳಾದಳು. ಖಾಸಗಿ ಕ್ಷೇತ್ರದಲ್ಲಾಗಲೀ, ಸರ್ಕಾರದಲ್ಲಾಗಲೀ ಕೆಲಸ ಮಾಡಬಹುದಿತ್ತು. ಮದುವೆ ಆಗ ಬಹುದಿತ್ತು. ಆದರೆ ತನ್ನ ತಮ್ಮನ ಸೇವೆಗಾಗಿ ಇದೆಲ್ಲ ಅವಕಾಶಗಳನ್ನು ತೊರೆದಳು. ದೀನದಲಿತರ ಸೇವೆಗಾಗಿ ತನ್ಮೂಲಕ ಮಾನವ ಸೇವೆಗಾಗಿ ತನ್ನನ್ನು ಅರ್ಪಿಸಿಕೊಂಡಳು. ಶಾರದಾಮಠದ ಪೂರ್ಣ ಪ್ರಮಾಣದ ಕಾರ್ಯಕರ್ತೆಯಾದಳು. ಸೇವಾಕಾರ್ಯದ ನಿಮಿತ್ತ ಮೇಲ್ಪಟ್ಟವರ ಆದೇಶದಂತೆ ಭಾರತದ ವಿವಿಧ ರಾಜ್ಯಗಳಿಗೆ ಹೋಗಿ ಸೇವಾ ಕೆಲಸ ಮಾಡಿದಳು. ಕಲ್ಕತ್ತಾದಲ್ಲಿರುವ ಶಾರದಾಮಠದಲ್ಲಿ ಹೆಚ್ಚಿನ ತರಬೇತಿ ಪಡೆದಳು. ಮುಂದೆ ಅವಳೆಂದೂ ತನ್ನ ಈ ನಿರ್ಧಾರದ ಬಗ್ಗೆ ದುಃಖ ಪಟ್ಟಿಲ್ಲ. ಅಸ್ಸಾಂ, ನಾಗಾಲ್ಯಾಂಡ್ ಮುಂತಾದ ರಾಜ್ಯಗಳಲ್ಲಿಯೂ ಸಹ ಸೇವಾ ವೃತ್ತಿಯಾಗಿ ಕೆಲಸ ಮಾಡಿದಳು. ಏತನ್ಮಧ್ಯ ಅವಳ ತಂದೆ ಕಿಣಿ ತೀರಿಕೊಂಡರು, ತಾಯಿ ಒಬ್ಬಳೇ ಮನೆಯಲ್ಲಿ. ಕೊನೆಗೆ ತಾಯಿಯು ಸಹ ಶಾರದಾಮಠವು ನಡೆಸುವ ಮಹಿಳೆಯರ ಆಶ್ರಮದಲ್ಲಿ ಸೇರಿಕೊಂಡರು. ಈಗ ವಸುಧಾನತಾಯಿ ಸಾವಿತ್ರಿ ಕಿಣಿ ವಾರಾಣಾಸಿಯಲ್ಲಿರುವ ಶಾರದಾಮಠದ ಆಶ್ರವಾದ ನಿವಾಸಿಯಾಗಿದ್ದಾರೆ. ಹೀಗೆ ಕಿಣಿಯವರ ಕುಟುಂಬ ಓರ್ವ ಅಂಗವಿಕಲನ ಬಾಲಕನ ಸ್ಮರಣೆಯಲ್ಲಿ ಅಸ್ತಂಗತವಾಯಿತು. ಆದರೆ ಕಿಣಿ ದಂಪತಿಗಳು ವಸುಧಾನ ಕಾರಣದಿಂದಾಗಿ ಆಗಾಗೆ ಮೇಲುಕೋಟೆಗೆ ಬಂದು ತಮ್ಮ ಕೈಲಾದ ನೆರವು ಮಾಡುತ್ತಿದುದ್ದು, ಸಂತೋಷವಾಗಿ ಕಾಲ ಕಳೆದು ಹೋಗುತ್ತಿದುದ್ದು ಸದಾ ಸ್ಮರಣೆಯಲ್ಲಿದೆ. ಇತ್ತೀಚೆಗೆ ವಸುಧಾನ ತಾಯಿ ಸಾವಿತ್ರಮ್ಮನವರನ್ನು ವಾರಾಣಾಸಿಯ ಆಶ್ರಮದಲ್ಲಿ ಭೇಟಿಯಾದಾಗ ಅವರ ಕೌಟುಂಬಿಕ ಜೀವನದ ಏರಿಳಿತಗಳ ಸ್ಮರಣೆಯಾಯಿತು. ತಾಯಿ ಮಗಳ ಸಂಪರ್ಕವೂ ಇಲ್ಲ. ಮಗಳು ಸೇವಾಕ್ಷೇತ್ರದಲ್ಲಿ ಲೀನವಾಗಿದ್ದರೆ, ತಾಯಿ ತನ್ನ ಉದಾರ ಮನಸ್ಸಿನ ಪತಿ, ತೀರಿಹೋದ ಅಂಗವಿಕಲ ಮಗ ಮತ್ತು ಸೇವಾವೃತಿ ವಯಸ್ಸಿಗೆ ಬಂದ ಮಗಳ ನೆನಪಿನಲ್ಲಿ ಕರಗಿಹೋಗಿದ್ದಾರೆ. ಆದರೆ ಟ್ರಸ್ಟಿನ ಅಭಿಮಾನಿಗಳ ದೊಡ್ಡ ಬಳಗದಲ್ಲಿ ಮಾತ್ರ ಕಿಣಿ ದಂಪತಿ ಮತ್ತು ವಸುಧಾ ಮರೆಯಲಾಗದ ವ್ಯಕ್ತಿಗಳಾಗಿದ್ದಾರೆ.

(ಮುಂದುವರಿಯುವುದು...)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಹೆಚ್.ಎಂ.ನಾಗರಾಜರಾವ್
ಶ್ರೀ ಎಸ್.ರತ್ನ – ಮೈಸೂರು
ಡಾ.ಜೀವನ್‌ಕುಮಾರ್; ಶ್ರೀ ಎಂ.ಕೆ.ಸುಬ್ಬರಾವ್; ಶ್ರೀ ಎಂ.ಕೆ.ಶಂಕರ್
ಶ್ರೀ ಎಂ.ಕೆ.ಶಿವಸ್ವಾಮಿ – ಬೆಂಗಳೂರು
ಶ್ರೀ ತುಳಸೀರಾಂ – ಮುಳಬಾಗಿಲು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಕೆ.ವಿ.ಸಂಪತ್ಕುಮಾರ್; ಶ್ರೀ ಸದಾಶಿವ; ಶ್ರೀ ಬಿ.ಎಸ್.ರವಿಪ್ರಕಾಶ್
ಶ್ರೀ ಪ್ರಾಣೇಶ್ ಕೆ. ಭಾರದ್ವಾಜ್; – ಬೆಂಗಳೂರು
ಶ್ರೀ ಡಿ.ದಿವಾಕರ – ಮಧುಗಿರಿ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ. – ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ [illegible]

[illegible]

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.